ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಜೂನ್ 8 ಶನಿವಾರ 2024

₹4

ಸಂಪುಟ: 45 | ಸಂಚಿಕೆ: 53 | ಪುಟಗಳು: 12

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, *website: www.mysurumithra.com*

ಶ್ರೀರಾಂಪುರ ಪಟ್ಟಣ ಪಂಚಾಯ್ತಿಯಲ್ಲಿ ಹಣ ದುರುಪಯೋಗ

ಯೋಜನಾ ನಿರ್ದೇಶಕರಿಂದ ತನಿಖಾ ವರದಿ ಸಲ್ಲಿಕೆ

ತಪ್ಪಿತಸ್ಥರ ವಿರುದ್ಧ ಕ್ರಿಮಿನಲ್ ಕೇಸ್:ಡಿಸಿ



ಮೈಸೂರು, ಜೂ. 7(ಆರ್‌ಕೆ)– ಮೈಸೂರಿನ ಶ್ರೀರಾಂಪುರ ಪಟ್ಟಣ ಪಂಚಾಯ್ತಿ ಕಾರ್ಯಾಲಯದಲ್ಲಿ ಸಾರ್ವಜನಿಕರ ತೆರಿಗೆ ಹಣ ದುರುಪಯೋಗ ಮಾಡಿಕೊಂಡಿರುವವರ ವಿರುದ್ಧ ಕ್ರಿಮಿನಲ್ ಮೊಕದ್ದಮೆ ದಾಖಲಿಸುತ್ತೇವೆ ಎಂದು ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ ತಿಳಿಸಿದ್ದಾರೆ.

2021ರಿಂದಲೂ ಕಚೇರಿಗೆ ಸಾರ್ವಜನಿಕರು ಪಾವತಿಸಿದ ಆಸ್ತಿ ತೆರಿಗೆ, ವಿವಿಧ ಲೈಸೆನ್ಸ್ ಶುಲ್ಕ, ಸೇವಾ ಶುಲ್ಕದ ಹಣವನ್ನು ಸರ್ಕಾರದ ಅಧಿಕೃತ ಬ್ಯಾಂಕ್ ಖಾತೆಗೆ ಜಮಾ ಮಾಡಬೇಕಾದ ಪಟ್ಟಣ ಪಂಚಾಯ್ತಿ ಸಿಬ್ಬಂದಿಗಳು, ತಮ್ಮ ಬ್ಯಾಂಕ್ ಖಾತೆಗೆ ವರ್ಗಾಯಿಸಿಕೊಂಡಿರುವ ಪ್ರಕರಣ ಇತ್ತೀಚೆಗಷ್ಟೇ ಬೆಳಕಿಗೆ ಬಂದಿದ್ದು, ಈ ಕುರಿತು ತನಿಖೆ ನಡೆಸಿದ ಜಿಲ್ಲಾ ನಗರಾಭಿವೃದ್ಧಿ ಕೋಶ (ಡಿಯುಡಿಸಿ)ದ ಯೋಜನಾಧಿಕಾರಿ ಬಿ. ಶುಭಾ ಇಂದು 3 ಪುಟಗಳ ಸಮಗ್ರ ವರದಿ ಸಲ್ಲಿಸಿದ್ದಾರೆ ಎಂದು ಜಿಲ್ಲಾಧಿಕಾರಿಗಳು 'ಮೈಸೂರು ಮಿತ್ರ'ನಿಗೆ ತಿಳಿಸಿದ್ದಾರೆ. ವರದಿ ಪರಿಶೀಲಿಸಿ ಸಂಬಂಧಪಟ್ಟ ಕಂದಾಯಾಧಿಕಾರಿಗಳಿಂದ ಮಾಹಿತಿ ತರಿಸಿಕೊಂಡು ಹಣ ದುರುಪಯೋಗ ಪ್ರಕರಣದಲ್ಲಿ ಭಾಗಿಯಾಗಿರುವವರು ಯಾರೇ ಆಗಲಿ ಅವರ ವಿರುದ್ಧ ಕ್ರಿಮಿನಲ್ ಕೇಸ್ ದಾಖಲಿಸುತ್ತೇವೆ ಎಂದು ಅವರು ತಿಳಿಸಿದರು.

ನಕಲಿ ಬ್ಯಾಂಕ್ ಚಲನ್ ಸೃಷ್ಟಿಸಿ ಸಾರ್ವಜನಿಕರು ಪಾವತಿಸಿದ ತೆರಿಗೆ ಹಣವನ್ನು ಗುಳುಂ ಮಾಡಿರುವ ಪ್ರಕರಣದಲ್ಲಿ ಪಟ್ಟಣ ಪಂಚಾಯ್ತಿ ಕಚೇರಿಯ ನೌಕರರ ನಿರ್ಲಕ್ಷ್ಯವೂ ಅವರು ಇತರ ಸಿಬ್ಬಂದಿಗಳೊಂದಿಗೆ ಶಾಮೀಲಾಗಿ ಸರ್ಕಾರಕ್ಕೆ ಲಕ್ಷಾಂತರ ರೂ. ವಂಚಿಸಿದ್ದಾರೆಂಬುದು ಡಿಯುಡಿಸಿ ಪ್ರಾಜೆಕ್ಟ್ ಡೈರೆಕ್ಟರ್ ಸಲ್ಲಿಸಿರುವ ವರದಿಯಲ್ಲಿ ತಿಳಿಸಿದ್ದಾರೆ. ಆದರೆ, ಇದರಲ್ಲಿ ಹೊರಗಿನವರೂ ಭಾಗಿಯಾಗಿದ್ದಾರೆಯೇ ಎಂಬುದರ ಬಗ್ಗೆಯೂ ಪರಿಶೀಲಿಸಿ ಲೋಪ ಎಸಗಿದವರ ವಿರುದ್ಧ ಕ್ರಿಮಿನಲ್ ಮೊಕದ್ದಮೆ ದಾಖಲಿಸುವಂತೆ ಇಂದೇ ಸಂಬಂಧಪಟ್ಟ ಅಧಿಕಾರಿಗಳಿಗೆ ನಿರ್ದೇಶನ ನೀಡುತ್ತೇನೆ ಎಂದು ಡಾ. ರಾಜೇಂದ್ರ ತಿಳಿಸಿದ್ದಾರೆ.

ಅಕ್ರಮ ಖಾತೆ ನೋಂದಣಿ, ವರ್ಗಾವಣೆ ಮಾಡಲಾಗುತ್ತಿದೆ ಎಂಬ ಸಾರ್ವಜನಿಕರ ದೂರಿನನ್ವಯ ಶ್ರೀರಾಂಪುರ ಪಟ್ಟಣ ಪಂಚಾಯ್ತಿ ಕಚೇರಿಗೆ ಭೇಟಿ ನೀಡಿ ಪರಿಶೀಲಿಸಿದ ಡಿಯುಡಿಸಿ ಯೋಜನಾ ನಿರ್ದೇಶಕಿ ಬಿ. ಶುಭಾ, ಸಮಿತಿ ರಚಿಸಿ ವರದಿಯನ್ನು ಜಿಲ್ಲಾಧಿಕಾರಿಗಳಿಗೆ ಸಲ್ಲಿಸಿರುವುದನ್ನು ಇಲ್ಲಿ ಸ್ಮರಿಸಬಹುದು.

'ನಟನ'ದಲ್ಲಿ ನಾಟಕ 'ನಾಟ್ಯ ದೇವ ಚರಿತೆ'

ಮೈಸೂರು, ಜೂ. 7–ಮೈಸೂರಿನ ರಾಮಕೃಷ್ಣನಗರದಲ್ಲಿರುವ ನಟನ ರಂಗಶಾಲೆಯಲ್ಲಿ ವಾರಾಂತ್ಯ ರಂಗ ಪ್ರದರ್ಶನಗಳನ್ನು ನಡೆಸುತ್ತಿದ್ದು, ಇದರ ಅಂಗವಾಗಿ ಜೂ.9ರ ಸಂಜೆ 6.30ಕ್ಕೆ ಬೆಂಗಳೂರಿನ ಸಂಚಯ ತಂಡದ ಕಲಾವಿದರಿಂದ 'ನಾಟ್ಯ ದೇವ ಚರಿತೆ'ಯು ಪ್ರದರ್ಶನಗೊಳ್ಳಲಿದೆ. ನಾಟಕದ ಮೂಲ ಮೋಲಿಯೇರ್‌ನ ತಾರ್ತೂಫ್ ಹಾಗೂ ವಿನ್ಯಾಸ ಮತ್ತು ನಿರ್ದೇಶನ ಪ್ರಥ್ವಿ ವೇಣುಗೋಪಾಲ್ ಅವರದ್ದು. ಮಾಹಿತಿಗಾಗಿ 7259537777, 9480468327, 9845595505 ಸಂಪರ್ಕಿಸಬಹುದು.

ಮೈಸೂರಲ್ಲಿ ಸೊಪ್ಪು, ತರಕಾರಿ, ದವಸ ಧಾನ್ಯಗಳ ಬೆಲೆ ಗಗನಕ್ಕೆ

ಜನಸಾಮಾನ್ಯರು, ಹೋಟೆಲ್ ಮಾಲೀಕರು ಕಂಗಾಲು



ಮೈಸೂರು, ಜೂ.7(ಆರ್‌ಕೆ)– ಅತ್ಯವಶ್ಯವಾಗಿರುವ ಸೊಪ್ಪು, ತರಕಾರಿ ಮತ್ತು ದವಸ ಧಾನ್ಯಗಳ ಬೆಲೆ ಗಗನಕ್ಕೇರಿರುವುದರಿಂದ ಜನಸಾಮಾನ್ಯರು, ಹೋಟೆಲು ಮಾಲೀಕರು ಕಂಗಾಲಾಗಿದ್ದಾರೆ.

ಮದುವೆಯಂತಹ ಶುಭ ಸಮಾರಂಭಗಳನ್ನು ಮಾಡುವವರಂತೂ ಅಡುಗೆ ಸಾಮಗ್ರಿಗಳ ಬೆಲೆ ಏರಿಕೆಯಿಂದಾಗಿ ಪರದಾಡುವಂತಾಗಿದೆ. ಹೋಟೆಲು, ಫಾಸ್ಟ್‌ಫುಡ್ ಅಂಗಡಿ ಮಾಲೀಕರು ಸಾಧಾರಣ ಬೆಲೆ ಇದ್ದಾಗ ಆಹಾರ, ತಿಂಡಿ, ಕಾಫಿಯನ್ನು ಕೈಗೆಟುಕುವ ದರದಲ್ಲಿ ಮಾರಾಟ ಮಾಡುತ್ತಿದ್ದರಿಂದ ಕೂಲಿ ಕಾರ್ಮಿಕರು, ಶ್ರಮಿಕ ವರ್ಗದವರ ಜೀವನೋಪಾಯ ನಡೆಯುತ್ತಿತ್ತು.

ಆದರೆ ಸೊಪ್ಪು, ತರಕಾರಿ, ಧಾನ್ಯ, ಸಾಂಬಾರು ಪದಾರ್ಥ, ಅಕ್ಕಿ, ಬೇಳೆ, ಎಣ್ಣೆ ಕಾಳುಗಳ ಬೆಲೆ ಗಗನಕ್ಕೇರಿರುವುದರಿಂದ ಹೋಟೆಲು, ಫುಟ್‌ಪಾತ್ ಅಂಗಡಿಗಳ ಮಾಲೀಕರು ಕಡಿಮೆ ಬೆಲೆಯಲ್ಲಿ ಆಹಾರ ಮತ್ತು ಚಾಟ್‌ಗಳನ್ನು ಕೊಡಲು ಸಾಧ್ಯವಾಗುತ್ತಿಲ್ಲ. ಬೆಲೆ ಏರಿಸಿದರೆ ಗ್ರಾಹಕರಿಗೆ ಹೊರೆಯಾಗಿ ವ್ಯಾಪಾರ ಕುಂಠಿತವಾಗುವ ಆತಂಕ ಎದುರಾಗಿದೆ.

ಅಗತ್ಯ ವಸ್ತುಗಳ ಬೆಲೆ ಏರಿಕೆಯಿಂದ ಜನಸಾಮಾನ್ಯರ ಜೇಬಿಗೆ ಕತ್ತರಿ ಬೀಳುತ್ತಿದೆ. ಮೈಸೂರಿನ ದೇವರಾಜ, ವಾಣಿ ವಿಲಾಸ, ಮಂಡಿ, ಎಪಿಎಂಸಿ ಮಾರುಕಟ್ಟೆ, ಎಂಜಿ ರಸ್ತೆಯ ತರಕಾರಿ ಮಾರುಕಟ್ಟೆ, ಬೇರೆ ಬೇರೆ ವಸತಿ ಬಡಾವಣೆಗಳ ಮಾರುಕಟ್ಟೆಗಳಲ್ಲಿ ಸೊಪ್ಪು, ತರಕಾರಿ ಬೆಲೆ ಏರಿಕೆಯಿಂದಾಗಿ ವ್ಯಾಪಾರವೂ ಅಷ್ಟಕ್ಕಷ್ಟೇ. ವಸತಿ ಬಡಾವಣೆಗಳಿಗೆ ರಸ್ತೆ ಮೇಲೆ ತಳ್ಳುವ ಗಾಡಿ, ಟೆಂಪೋಗಳಲ್ಲಿ, ಸೈಕಲ್‌ಗಳಲ್ಲಿ ಹಾಗೂ ಕುಕ್ಕೆಯಲ್ಲಿ ಹೊತ್ತು ತರುತ್ತಿದ್ದ ಸೊಪ್ಪು, ತರಕಾರಿಯೂ ಕಡಿಮೆಯಾಗುತ್ತಿದೆ. ಮನೆ ಬಾಗಿಲಿಗೆ ತಂದರೂ ಮಹಿಳೆಯರು ಚೌಕಾಸಿ ಮಾಡಿ ಕಡಿಮೆ ಬೆಲೆಗೆ ಕೇಳುತ್ತಾರೆ. ಹಾಗಾಗಿ ವ್ಯಾಪಾರದಲ್ಲಿ ನಷ್ಟ ಉಂಟಾಗುತ್ತದೆ ಎಂಬ ಕಾರಣಕ್ಕೆ ಮಾರುವವರೂ ಬರುತ್ತಿಲ್ಲ ಎಂದು ನಿವಾಸಿಗಳು ದೂರಿದ್ದಾರೆ.

ಇಂದು ಮಾರುಕಟ್ಟೆಗಳಲ್ಲಿ ಕ್ಯಾರೆಟ್ ಕೆಜಿಗೆ 60 ರಿಂದ 80 ರೂ., ಬೀನ್ಸ್ 150ರಿಂದ 200 ರೂ., ಗೆಡ್ಡೆಕೋಸು 100ರಿಂದ 120 ರೂ., ಟೊಮ್ಯಾಟೊ 50ರಿಂದ 60 ರೂ., ಆಲೂಗೆಡ್ಡೆ 30ರಿಂದ 40 ರೂ., ದಪ್ಪ ಈರುಳ್ಳಿ 45ರಿಂದ 50 ರೂ., ಬೀಟ್‌ರೂಟ್ 40ರಿಂದ 50 ರೂ., ನುಗ್ಗೇಕಾಯಿ 60ರಿಂದ 80 ರೂ., ಬದನೆ ಕಾಯಿ 50ರಿಂದ 60 ರೂ., ಹೂಕೋಸು 60ರಿಂದ 70 ರೂ., ಸೌತೇಕಾಯಿ 40ರಿಂದ 50 ರೂ., ಬೆಂಡೇಕಾಯಿ 60ರಿಂದ 70 ರೂ., ಈರೇಕಾಯಿ 80ರಿಂದ 100 ರೂ., ಹಸಿಮೆಣಸಿನಕಾಯಿ 100ರಿಂದ 120 ರೂ., ನಿಂಬೆಹಣ್ಣು 1ಕ್ಕೆ 10ರಿಂದ 15 ರೂ., ಕೊತ್ತಂಬರಿ ಸೊಪ್ಪು ಕಂತೆಗೆ 20ರಿಂದ 25 ರೂ., ಸಬ್ಬಸಿಗೆ ಸೊಪ್ಪು 40ರಿಂದ 50 ರೂ., ಹಸಿ ಶುಂಠಿ ಕೆಜಿಗೆ 120ರಿಂದ 140 ರೂ.ಗಳಿಗೆ ಮಾರಾಟವಾಗುತ್ತಿದ್ದವು. ಊಟದ ಅಕ್ಕಿ ಕೆಜಿಗೆ 70ರಿಂದ 75 ರೂ., ತೊಗರಿ ಬೇಳೆ 190ರಿಂದ 200 ರೂ., ಕಡಲೆ ಬೇಳೆ, ಉದ್ದಿನ ಬೇಳೆ, ಅಡುಗೆ ಎಣ್ಣೆ, ಸಾಂಬಾರ ಪದಾರ್ಥಗಳ ಬೆಲೆಯೂ ಗಗನಕ್ಕೇರಿರುವುದರಿಂದ ಜೀವನ ದುಬಾರಿಯಾಗತೊಡಗಿದೆ. ಮಳೆಯಿಂದಾಗಿ ಸೊಪ್ಪು, ತರಕಾರಿ ಬೆಳೆ ನಾಶವಾಗುತ್ತಿದ್ದುದಲ್ಲದೆ, ಜೊತೆಗೆ ಇಳುವರಿ ಕಡಿಮೆಯಾಗುತ್ತಿರುವುದು ಬೆಲೆ ಏರಿಕೆಗೆ ಪ್ರಮುಖ ಕಾರಣ ಎಂದು ದೇವರಾಜ ಮಾರುಕಟ್ಟೆ ತರಕಾರಿ ವ್ಯಾಪಾರಿಗಳು ತಿಳಿಸಿದ್ದಾರೆ.

ಸೊಪ್ಪು, ತರಕಾರಿ, ಧಾನ್ಯ, ಸಾಂಬಾರ ಪದಾರ್ಥ, ಅಡುಗೆ ಎಣ್ಣೆ, ಗ್ಯಾಸ್ ಬೆಲೆ ಏರಿಕೆಯಿಂದಾಗಿ ಗ್ರಾಹಕರಿಗೆ ಕೈಗೆಟುಕುವ ದರದಲ್ಲಿ ತಿಂಡಿ–ಊಟ ತಯಾರಿಸಿ ಕೊಡುವುದು ಕಷ್ಟವಾಗುತ್ತಿದೆ ಎಂದು ಹೋಟೆಲು ಮಾಲೀಕರ ಸಂಘದ ಅಧ್ಯಕ್ಷ ಸಿ. ನಾರಾಯಣಗೌಡ, ಹೋಟೆಲು ಮಾಲೀಕರ ಪತ್ತಿನ ಸಹಕಾರ ಸಂಘದ ಅಧ್ಯಕ್ಷ ನಾರಾಯಣ ವಿ.ಹೆಗಡೆ ಹಾಗೂ ಹೋಟೆಲು ಮಾಲೀಕರ ದತ್ತಿ ಅಧ್ಯಕ್ಷ ರವಿಶಾಸ್ತ್ರಿ 'ಮೈಸೂರು ಮಿತ್ರ'ನಿಗೆ ಪ್ರತಿಕ್ರಿಯೆ ನೀಡಿದ್ದಾರೆ.

ಗೀತೆಗೊಂದು ಗಿಡ: ಹಾಡು ಹೇಳಿ ಹಸಿರು ಬೆಳೆಸಿ ಅಭಿಯಾನ



ಮೈಸೂರು, ಜೂ. 7– ಸಖಿ ಫೌಂಡೇಶನ್ ಮತ್ತು ಸೂರ್ಯ ಚಾರಿಟಬಲ್ ಟ್ರಸ್ಟ್ ಸಂಯುಕ್ತಾಶ್ರಯ ದಲ್ಲಿ ವಿಶ್ವ ಪರಿಸರ ದಿನಾಚರಣೆ ಅಂಗವಾಗಿ 'ಹಾಡು ಹೇಳಿ ಹಸಿರು ಬೆಳೆಸಿ' ಅಭಿಯಾನವನ್ನು ಆಯೋಜಿಸಲಾಗಿದೆ. ಗೀತೆಗೊಂದು ಗಿಡ ಎಂಬ ಶೀರ್ಷಿಕೆಯಡಿಯಲ್ಲಿ ಜೂನ್ 16 ರಂದುರಾಮ ಕೃಷ್ಣನಗರದ ರಮಾಗೋವಿಂದ ರಂಗಮಂದಿ ರದಲ್ಲಿ ಬೆಳಗ್ಗೆ 9.30ರಿಂದ ನಡೆಯಲಿದೆ.

ಎಲ್ಲಾ ವಯೋಮಾನದ ಆಸಕ್ತ ಗಾಯಕರು ಈ ಅಭಿಯಾನದಲ್ಲಿ ಭಾಗವಹಿಸಬಹುದಾಗಿದ್ದು, ಪರಿಸರ ಗೀತೆ, ಜನಪದ ಗೀತೆ ಹಾಗೂ ಭಾವಗೀತೆಗಳನ್ನು ಮಾತ್ರ ಹಾಡಲು ಅವಕಾಶವಿದೆ. ಮೊದಲು ಬಂದವರಿಗೆ ಆದ್ಯತೆಯ ಮೇರೆಗೆ ಅವಕಾಶ ನೀಡಲಾಗುತ್ತದೆ. ಭಾಗವಹಿಸಿದವರಿಗೆ ಗಿಡದ ಜೊತೆಗೆ ಪ್ರಶಂಸನಾ ಪತ್ರ ನೀಡಲಾಗುವುದು. ಹೆಚ್ಚಿನ ಮಾಹಿತಿಗಾಗಿ 8310306882 ಅಥವಾ 9964790442 ಸಂಪರ್ಕಿಸಬಹುದಾಗಿದೆ.

ಇಂದು ಮಹಾದ್ವಾರ ಉದ್ಘಾಟನೆ; ಕುಂಭಾಭಿಷೇಕ

ಮೈಸೂರು, ಜೂ. 7– ಮೈಸೂರಿನ ಬಿ.ಎಂ.ಶ್ರೀ ನಗರದಲ್ಲಿರುವ ಶ್ರೀ ಮಹಾಗಣಪತಿ ಸೇವಾ ಟ್ರಸ್ಟ್ ವತಿಯಿಂದ ಜೂ. 8 ಮತ್ತು 9 ರಂದು ಮಹಾದ್ವಾರ ಉದ್ಘಾಟನೆ ಮತ್ತು ಕುಂಭಾಭಿಷೇಕ ಏರ್ಪಡಿಸಲಾಗಿದೆ. ನಾಳೆ (ಜೂ. 8) ಬೆಳಗ್ಗೆ 6.30 ಗಂಟೆಯಿಂದ ಗಂಗಾಪೂಜೆ, ಗೋಪೂಜೆ, ಚಪ್ಪರ ಪೂಜೆ, ಪುಣ್ಯಾಹ, ನಾಂದಿ ಕಳಶ ಸ್ಥಾಪನೆ, ಮಹಾಗಣಪತಿ ಹೋಮ, ನವಗ್ರಹ ಹೋಮ, ಮೃತ್ಯುಂಜಯ ಹೋಮ, ಕಲಾಕರ್ಷಣ ಹೋಮ, ಪರಿವಾರ ದೇವತಾ ಹೋಮ, ಪೂರ್ಣಾಹುತಿ, ಮಧ್ಯಾಹ್ನ 12.30ಕ್ಕೆ ಮಹಾಮಂಗಳಾರತಿ ಮತ್ತು ತೀರ್ಥ ಪ್ರಸಾದ ವಿನಿಯೋಗ ನಡೆಯಲಿದೆ. ಜೂ. 9 ರಂದು ಬೆಳಗ್ಗೆ 6.30 ರಿಂದ ಗಣಪತಿಪೂಜೆ, ಕರ್ಮಣ ಪುಣ್ಯಾಹ, ಕಳಶ ಸ್ಥಾಪನೆ, ಕುಂಭಾಭಿಷೇಕ, ಅಭಿಷೇಕ, ಅಲಂಕಾರ, ದೇವತಾ ಕಾರ್ಯಗಳು, ಮಹಾಮಂಗಳಾರತಿ ಮತ್ತು ತೀರ್ಥಪ್ರಸಾದ ನಡೆಯಲಿದೆ.

ಕರ್ನಾಟಕದ ಸಾಕಾನೆಗಾಗಿ ಆಂಧ್ರದಿಂದ ಮನವಿ: ಪ್ರಾಣಿ ಪ್ರಿಯರಿಂದ ತೀವ್ರ ಆಕ್ಷೇಪ

- ಮತ್ತಿಗೋಡು, ದುಬಾರೆ ಶಿಬಿರದ ಸಾಕಾನೆಗಳ ಮೇಲೆ ಕಣ್ಣು
- ಆನೆ ನೀಡದಂತೆ ಹೋರಾಟಕ್ಕೆ ಸಜ್ಜಾದ ಪ್ರಾಣಿ ಪ್ರಿಯರು
- ಭವಿಷ್ಯದ ಅಂಬಾರಿ ಆನೆ ಭೀಮನ ಮೇಲೆ ಕಣ್ಣು ಹಾಕಿದ ಆಂಧ್ರ
- ಪ್ರಸ್ತಾವನೆ ತಿರಸ್ಕರಿಸಲು ನಾಗರಹೊಳೆ ಅಧಿಕಾರಿಗಳು ನಿರ್ಧಾರ



ಎಂ.ಟಿ.ಯೋಗೇಶ್ ಕುಮಾರ್

ಮೈಸೂರು, ಜೂ.7– ಕರ್ನಾಟಕದ ಪ್ರಮುಖ ಸಾಕಾನೆ ಶಿಬಿರಗಳಾದ ಮತ್ತಿಗೋಡು ಹಾಗೂ ದುಬಾರೆ ಕ್ಯಾಂಪ್‌ಗಳಲ್ಲಿರುವ ಆನೆಗಳ ಮೇಲೆ ಆಂಧ್ರ ಕಣ್ಣಿಟ್ಟಿದ್ದು, ಭವಿಷ್ಯದ ಅಂಬಾರಿ ಆನೆ ಎಂದೇ ಬಿಂಬಿತವಾಗಿರುವ ಭೀಮಾ, ಮೃಗಾಲಯದ ಜ್ಯೂನಿಯರ್ ಅಭಿಮನ್ಯು ಸೇರಿದಂತೆ ಎಂಟು ಆನೆಗಳನ್ನು ನೀಡುವಂತೆ ಮನವಿ ಮಾಡಿದ್ದು, ನಾಗರಹೊಳೆ ಅರಣ್ಯಾಧಿಕಾರಿಗಳು ಆಂಧ್ರಪ್ರದೇಶದ ಪ್ರಸ್ತಾವನೆಯನ್ನು ತಿರಸ್ಕರಿಸಲು ನಿರ್ಧರಿಸಿದ್ದಾರೆ.

ದೇಶದಲ್ಲಿಯೇ ವನ್ಯಜೀವಿ ಸಂರಕ್ಷಣೆ ಹಾಗೂ ಸಾಕಾನೆಗಳ ಪಳಗಿಸುವುದರಲ್ಲಿ ಮುಂಚೂಣಿಯಲ್ಲಿರುವ ಕರ್ನಾಟಕದ ಆನೆಗಳನ್ನು ಎರವಲಾಗಿ ಪಡೆಯಲು ದೇಶದ ವಿವಿಧ ರಾಜ್ಯಗಳು ಮೊದಲಿನಿಂದಲೂ ಹಂಬಲಿಸುತ್ತಿದ್ದು, ಈಗಾಗಲೇ ಮಹಾರಾಷ್ಟ್ರ, ಗುಜರಾತ್ ಸೇರಿದಂತೆ ವಿವಿಧ ರಾಜ್ಯಗಳಿಗೆ ಇದುವರೆಗೂ 57 ಆನೆಗಳನ್ನು ಕರ್ನಾಟಕ ಕೊಡುಗೆಯಾಗಿ ನೀಡಿದೆ. ಈ ಹಿಂದೆ 22 ಆನೆಗಳನ್ನು ನೀಡುವಂತೆ ಪ್ರಸ್ತಾವನೆ ಸಲ್ಲಿಸಿದ್ದ ಆಂಧ್ರ ಪ್ರದೇಶ ಇದೀಗ ಮತ್ತೊಮ್ಮೆ 8 ಆನೆಗಳನ್ನು ನೀಡುವಂತೆ ಕೋರಿದೆ. ಅಲ್ಲದೆ, ಆಂಧ್ರಪ್ರದೇಶದ ಅಧಿಕಾರಿಗಳ ತಂಡ ಕೆಲ ತಿಂಗಳ ಹಿಂದೆ ಮತ್ತಿಗೋಡು ಹಾಗೂ ದುಬಾರೆ ಆನೆ ಶಿಬಿರಕ್ಕೆ ಬಂದು ಅಲ್ಲಿರುವ ಆನೆಗಳನ್ನು ವೀಕ್ಷಿಸಿ ಮತ್ತಿಗೋಡು ಹಾಗೂ ದುಬಾರೆಯಿಂದ ತಲಾ ನಾಲ್ಕು ಆನೆಗಳನ್ನು ನೀಡುವಂತೆ ಪತ್ರ ವ್ಯವಹಾರ ನಡೆಸಿದೆ. ನಾಡಹಬ್ಬ ದಸರಾ ಮಹೋತ್ಸವದಲ್ಲಿ ಎರಡು ಬಾರಿ ಪಾಲ್ಗೊಂಡು ಪಟ್ಟದ ಆನೆಯ ಜವಾಬ್ದಾರಿ ನಿಭಾಯಿಸಿರುವ 23 ವರ್ಷದ ಭೀಮಾ, ಕಾಡಾನೆ ಸೆರೆ ಕಾರ್ಯಾಚರಣೆಯಲ್ಲಿ ಪಾಲ್ಗೊಳ್ಳುತ್ತಿರುವ ಶ್ರೀರಂಗ, ಗಣೇಶ ಹಾಗೂ ಮೈಸೂರು ಮೃಗಾಲಯದಲ್ಲಿ ಬೆಳೆದು ಮತ್ತಿಗೋಡು ಕ್ಯಾಂಪ್‌ನಲ್ಲಿರುವ ಜ್ಯೂನಿಯರ್ ಅಭಿಮನ್ಯು ಆನೆಗಳನ್ನು ಮತ್ತಿಗೋಡು ಕ್ಯಾಂಪ್‌ನಿಂದ ಕೊಡುಗೆ ನೀಡುವಂತೆ ಕೋರಿದೆ. ಅಲ್ಲದೆ, ದುಬಾರೆ ಕ್ಯಾಂಪ್‌ನಲ್ಲಿರುವ ನಾಲ್ಕು ಆನೆಗಳನ್ನು ಕೇಳಿದ್ದಾರಾದರೂ ಅವುಗಳು ಯಾವ ಆನೆಯೆಂದು ಬಹಿರಂಗವಾಗಿಲ್ಲ.

ನಯವಾಗಿ ತಿರಸ್ಕರಿಸಿದ ಅರಣ್ಯ

57 ಆನೆ ನೀಡಿದ್ದೇವೆ

ಇದುವರೆಗೆ ಕರ್ನಾಟಕದಿಂದ 57 ಆನೆಗಳನ್ನು ಬೇರೆ ರಾಜ್ಯಗಳಿಗೆ ನೀಡಿದ್ದೇವೆ. ಈಗ ಆಂಧ್ರಪ್ರದೇಶ 8 ಆನೆಗಳನ್ನು ನೀಡುವಂತೆ ಪ್ರಸ್ತಾವನೆ ಸಲ್ಲಿಸಿದೆ. ಇದಕ್ಕೆ ಕರ್ನಾಟಕ ಸಮ್ಮತಿ ಸಬಾರದು. ಯಾವುದೇ ಕಾರಣಕ್ಕೂ ಆನೆಗಳನ್ನು ನೀಡಬಾರದು. ಆಂಧ್ರ ಪ್ರದೇಶದಲ್ಲಿಯೇ ಸಾಕಷ್ಟು ಆನೆಗಳಿವೆ. ಬೇಕಾದರೆ ಅವುಗಳನ್ನು ಹಿಡಿದು ಪಳಗಿಸಿಕೊಳ್ಳಲಿ. ತಮಿಳುನಾಡು, ಕೇರಳದಿಂದ ಯಾಕೆ ಆನೆ ಕೇಳುತ್ತಿಲ್ಲ. ಬೇರೆ ರಾಜ್ಯಕ್ಕೆ ನೀಡಲು ಕಾಡಾನೆ ಹಿಡಿಯುವುದು ಸರಿಯಲ್ಲ. ರೈತರಿಗೆ ತೊಂದರೆ ನೀಡುತ್ತಿರುವ ಆನೆಗಳನ್ನು ಹಿಡಿದು ನಮ್ಮ ಕ್ಯಾಂಪ್‌ಗಳಲ್ಲೇ ಪಳಗಿಸಬೇಕು. ಅವುಗಳಿಗೆ ಉತ್ತಮ ಆಹಾರ, ಆರೋಗ್ಯ ಸೇವೆ ಒದಗಿಸಬೇಕು. ಸಾಕಲು ಆಗದಿದ್ದರೆ ಯಾಕೆ ಆನೆಯನ್ನು ಹಿಡಿಯಬೇಕು. ಆನೆಗಳನ್ನು ಆಂಧ್ರಪ್ರದೇಶಕ್ಕೆ ನೀಡಲು ಮುಂದಾದರೆ ಹೋರಾಟ ನಡೆಸಲಾಗುತ್ತದೆ.

– ಜೋಸೆಫ್ ಹೂವರ್, ಪರಿಸರವಾದಿ


ಯಾವ ಆನೆಯನ್ನೂ ನೀಡುವುದಿಲ್ಲ

ಆನೆ ನೀಡುವಂತೆ ಆಂಧ್ರಪ್ರದೇಶ ಪತ್ರ ವ್ಯವಹಾರ ನಡೆಸಿದೆ. ನಾವು ನಮ್ಮ ಪಶುವೈದ್ಯರಿಂದ ವರದಿ ಪಡೆದಿದ್ದು, ಮತ್ತಿಗೋಡು ಶಿಬಿರದಿಂದ ಯಾವುದೇ ಆನೆಯನ್ನೂ ನೀಡುವುದಿಲ್ಲ. ನಮ್ಮ ಕ್ಯಾಂಪ್‌ನಲ್ಲಿರುವ ಆನೆಗಳು ನಮಗೆ ಬೇಕಾಗಿವೆ. ಈ ಹಿನ್ನೆಲೆಯಲ್ಲಿ ಆನೆ ನೀಡದಿರುವ ಸಂಬಂಧ ಶೀಘ್ರವೇ ಪತ್ರ ಬರೆಯಲಾಗುತ್ತದೆ.

– ಹರ್ಷಕುಮಾರ್ ಚಿಕ್ಕನರಗುಂದ, ಡಿಸಿಎಫ್, ನಾಗರಹೊಳೆ ಹುಲಿ ಸಂರಕ್ಷಿತ ಪ್ರದೇಶ

ಇಲಾಖೆ: ಆಂಧ್ರಪ್ರದೇಶದ ಅಧಿಕಾರಿಗಳು ಆನೆಗಳಿಗಾಗಿ ಸಲ್ಲಿಸಿದ ಬೇಡಿಕೆಯನ್ನು ಕರ್ನಾಟಕದ ಅದರಲ್ಲೂ ಎರಡೂ ಆನೆ ಕ್ಯಾಂಪ್ ವ್ಯಾಪ್ತಿಯ ಹಿರಿಯ ಅಧಿಕಾರಿಗಳು ನಯವಾಗಿ ತಿರಸ್ಕರಿಸಿದ್ದಾರೆ. ನಮ್ಮಲ್ಲಿಯೇ ಆನೆಗಳ ಕೊರತೆಯಿದ್ದು, ಬೇರೆ ರಾಜ್ಯಗಳಿಗೆ ಕೊಡುಗೆ ನೀಡುವಷ್ಟು ಆನೆಗಳಿಲ್ಲ ಎಂದು ಆಂಧ್ರ ಸಲ್ಲಿಸಿದ ಪ್ರಸ್ತಾವನೆಗೆ ಎಳ್ಳುನೀರು ಬಿಟ್ಟಿದ್ದಾರೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

8.06.2024 ಶನಿವಾರ, ಮಳೆ ನಕ್ಷತ್ರ: ಮೃಗಶಿರ, 08.05.2024 ರಿಂದ 21.06.2024
ಕ್ರೋಧಿನಾಮ ಸಂವತ್ಸರ, ಉತ್ತರಾಯಣ, ವಸಂತ ಋತು, ವೈಶಾಖ ಮಾಸ, ಶುಕ್ಲ ಪಕ್ಷ,
ತಿಥಿ: ಬಿದಿಗೆ, ನಕ್ಷತ್ರ: ಆರಿದ್ರಾ, ರಾಹುಕಾಲ: ಬೆಳಗ್ಗೆ 9 ರಿಂದ 10.30ರವರೆಗೆ

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ:** ಹೈಪೋಥೈರಾಯ್ಡಿಸಮ್ ಚಿಕಿತ್ಸಾ ಶಿಬಿರ, ಸ್ಥಳ: ಆಸ್ಪತ್ರೆ ಆವರಣ, ಲಲಿತಾದ್ರಿಪುರ ರಸ್ತೆ, ಬೆಳಗ್ಗೆ 9 ಗಂಟೆಯಿಂದ.

■ **ವಿದ್ಯಾವರ್ಧಕ ಪ್ರಥಮ ದರ್ಜೆ ಕಾಲೇಜು :** ರೋಲ್ ಆಫ್ ಹೈಯರ್ ಎಜುಕೇಷನ್ ಇನ್ ಅಡ್ವಾನ್ಸಿಂಗ್ ಸಸ್ಟೈನಬಲ್ ಡೆವಲಪ್‌ಮೆಂಟ್ ಗೋಲ್ಸ್ ಕುರಿತು ವಿಚಾರ ಸಂಕಿರಣ, ಮುಖ್ಯ ಅತಿಥಿಗಳು : ಕಾಲೇಜು ಅಭಿವೃದ್ಧಿ ಮಂಡಳಿ ನಿರ್ದೇಶಕ ಪ್ರೊ. ಡಿ. ಆನಂದ್, ಪ್ರಾಸ್ತಾವಿಕ ಭಾಷಣ : ಡಾ. ಲೀನಾ ಚಂದ್ರನ್ ವಾಡಿಯಾ, ಅಧ್ಯಕ್ಷತೆ : ವಿದ್ಯಾವರ್ಧಕ ಸಂಘದ ಅಧ್ಯಕ್ಷ ಗುಂಡಪ್ಪಗೌಡ, ಗೌರವ ಅತಿಥಿಗಳು : ಕಾರ್ಯದರ್ಶಿ ಪಿ. ವಿಶ್ವನಾಥ್, ಅಧ್ಯಕ್ಷ ಟಿ. ನಾಗರಾಜು, ಸ್ಥಳ: ಚಿಕ್ಕಬೋರಯ್ಯ ಸಭಾಂಗಣ, ಬೆಳಗ್ಗೆ 10ಕ್ಕೆ.

■ **ಎಟಿಎಂಇಸಿಇ ಕಾಲೇಜು :** ಪದವೀಧರರ ದಿನಾಚರಣೆ, ಮುಖ್ಯ ಅತಿಥಿಗಳು : ಪಿ.ಬಿ. ಕೊಟೂರ್, ಅಖಿಲ ಭಾರತ ನಾಡೀ ಮತ್ತು ಶ್ರವಣ ವಿಜ್ಞಾನ ಸಂಸ್ಥೆ ನಿರ್ದೇಶಕ ಪ್ರೊ. ಎಂ. ಪುಷ್ಪಾವತಿ, ಅಧ್ಯಕ್ಷತೆ : ಎಟಿಎಂಇಸಿಇ ಅಧ್ಯಕ್ಷ ಎಲ್. ಅರುಣ್ ಕುಮಾರ್, ಸ್ಥಳ: ಕಾಲೇಜು ಸಭಾಂಗಣ, ಬೆಳಗ್ಗೆ 10ಕ್ಕೆ.

■ **ಮೈ ರಿಯಾಲ್ಟಿ 2024 :** ಮೈಸೂರಿನ ಅತೀ ದೊಡ್ಡ ಪ್ರಾಪರ್ಟಿ ಎಕ್ಸ್‌ಪೋ, ಸ್ಥಳ: ಸ್ಕೌಟ್ಸ್ ಅಂಡ್ ಗೈಡ್ಸ್ ಮೈದಾನ, ಬೆಳಗ್ಗೆ 10 ರಿಂದ.

■ **ಮೈಸೂರು ವಿಶ್ವವಿದ್ಯಾನಿಲಯ, ಕಾನೂನು ಶಾಲೆ :** ಕಾಲೇಜು ವಾರ್ಷಿಕ ಸಮಾರಂಭ ಹಾಗೂ ಸಾಂಪ್ರದಾಯಿಕ ದಿನೋತ್ಸವ, ಉದ್ಘಾಟನೆ : ಮೈಸೂರು ವಕೀಲರ ಸಂಘದ ಅಧ್ಯಕ್ಷ ಎಸ್. ಲೋಕೇಶ್, ಮುಖ್ಯ ಅತಿಥಿಗಳು : ಡಾ. ಎಂ.ಎಸ್. ಸ್ವಪ್ನ, ಜಂಟಿ ಕಾರ್ಯದರ್ಶಿ ಚರಣ್‌ರಾಜ್, ಪ್ರೊ. ರಮೇಶ್, ಪ್ರೊ. ಸುರೇಶ್ ಬೆಂಜಮಿನ್, ಅಧ್ಯಕ್ಷತೆ : ಕಾನೂನು ಅಧ್ಯಯನ ವಿಭಾಗ ಮತ್ತು ಕಾನೂನು ಶಾಲೆ ಅಧ್ಯಕ್ಷ ಪ್ರೊ. ಟಿ.ಆರ್. ಮಾರುತಿ, ಸ್ಥಳ: ಲಲಿತ ಕಲಾ ಕಾಲೇಜು ಸಭಾಂಗಣ, ಮನಸಗಂಗೋತ್ರಿ, ಬೆಳಗ್ಗೆ 10.45ಕ್ಕೆ.

■ **ಮೈಸೂರು ಆರ್ಟ್ ಗ್ಯಾಲರಿ :** ಸಾಧಕರೊಂದಿಗೆ ಸಂವಾದ–93, ತಿಂಗಳ ಸಾಧಕರು ದೇಶರಕ್ಷಕ ಕಿಶೋರ್ ಕದಂ, ಮುಖ್ಯ ಅತಿಥಿಗಳು : ಖ್ಯಾತ ಛಾಯಾಗ್ರಾಹಕ ಎಸ್. ತಿಪ್ಪೇಸ್ವಾಮಿ, ಅಧ್ಯಕ್ಷತೆ : ಮೈಸೂರು ಆರ್ಟ್ ಗ್ಯಾಲರಿ ಸ್ಥಾಪಕ ಅಧ್ಯಕ್ಷ ಎಲ್. ಶಿವಲಿಂಗಪ್ಪ, ವಿಶೇಷ ಅಹ್ವಾನಿತರು : ಸಾಹಿತಿ ಬಿ.ಪಿ. ಅಶ್ವತ್ಥನಾರಾಯಣ, ಎನ್.ಹೆಚ್. ಜಯರಾಂ, ಶ್ರೀಮತಿ ಬಿ.ಪಿ. ರೇಖಾ, ಹೆಚ್.ಆರ್. ರಮೇಶ್, ರೇವಪ್ಪ, ಸ್ಥಳ: ಮೈಸೂರು ಆರ್ಟ್ ಗ್ಯಾಲರಿ, ಬೆಳಗ್ಗೆ 11ಕ್ಕೆ.

■ **ಶ್ರೀ ರಾಜೇಂದ್ರ ಪ್ರಿಂಟರ್ಸ್ ಅಂಡ್ ಪಬ್ಲಿಷರ್ಸ್, ಕನ್ನಡ ಸಾಹಿತ್ಯ ಕಲಾಕೂಟ :** ಪ್ರೊ. ಡಿ.ಎ. ಶಂಕರ್ ಅವರ ಮೂರು ಕೃತಿಗಳ ಲೋಕಾರ್ಪಣೆ ಹಾಗೂ 88ನೇ ಜನ್ಮ ದಿನಾಚರಣೆ ಸಮಾರಂಭ, ಕೃತಿಗಳ ಲೋಕಾರ್ಪಣೆ : ಹಿರಿಯ ಪತ್ರಕರ್ತ ಅಂಶಿಪ್ರಸನ್ನಕುಮಾರ್, ಕೃತಿಗಳನ್ನು ಕುರಿತು ಮಾತನಾಡುವವರು : ಜೆಎಸ್‌ಎಸ್ ಮಹಾವಿದ್ಯಾಪೀಠ ಪ್ರಕಟಣಾ ವಿಭಾಗದ ನಿರ್ದೇಶಕ ಪ್ರೊ. ಮೊರಬದ ಮಲ್ಲಿಕಾರ್ಜುನ, ಪ್ರಾಸ್ತಾವಿಕ ನುಡಿ : ಕನ್ನಡ ಸಾಹಿತ್ಯ ಕಲಾಕೂಟದ ಅಧ್ಯಕ್ಷ ಎಂ. ಚಂದ್ರಶೇಖರ್, ಉಪಸ್ಥಿತರು : ಲೇಖಕ ಪ್ರೊ ಡಿ.ಎ.ಶಂಕರ್, ಪ್ರಕಾಶಕ ಡಿ.ಎನ್.ಲೋಕಪ್ಪ, ಸ್ಥಳ: ಜಿಲ್ಲಾ ಪತ್ರಕರ್ತರ ಭವನ, ತ್ಯಾಗರಾಜ ರಸ್ತೆ, ಮಧ್ಯಾಹ್ನ 12ಕ್ಕೆ

■ **ಕನ್ನಡಾಂಬೆ ರಕ್ಷಣಾ ವೇದಿಕೆ :** ಎಸ್‌ಎಸ್‌ಎಲ್‌ಸಿ, ಪಿಯುಸಿ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ, ಜಾದು ಕಲಾವಿದೆ ಶ್ರೀಮತಿ ಸುಮ ರಾಜ್‌ಕುಮಾರ್ ಅವರಿಗೆ ಕನ್ನಡಾಂಬೆ ರತ್ನ ಪ್ರಶಸ್ತಿ ಪ್ರದಾನ ಸಮಾರಂಭ, ಉದ್ಘಾಟನೆ : ಕಾವೇರಿ ಕ್ರಿಯಾ ಸಮಿತಿ ಅಧ್ಯಕ್ಷ ಜಯಪ್ರಕಾಶ್, ಅಧ್ಯಕ್ಷತೆ : ಸಾಹಿತಿ ಬನ್ನೂರು ಕೆ. ರಾಜು, ಮುಖ್ಯ ಅತಿಥಿಗಳು : ಸಾಹಿತಿ ಡಾ. ಕೆ. ಲೀಲಾಪ್ರಕಾಶ್, ಡಾ. ಸತೀಶ್, ಮೆಲ್ಲಹಳ್ಳಿ ಮಹದೇವಸ್ವಾಮಿ, ದಿನೇಶ್, ಪ್ರಶಾಂತ್ ಅಂಕಪುರ, ಸುರೇಶ್, ಸ್ಥಳ: ನಮನ ಕಲಾ ಮಂಟಪ, ಮಧ್ಯಾಹ್ನ 3ಕ್ಕೆ.

■ **ಜಗದ್ಗುರು ಶ್ರೀ ಮನ್ಮಧ್ವಾಚಾರ್ಯ ಮೂಲ ಮಹಾ ಸಂಸ್ಥಾನ ಶ್ರೀ ರಾಜೇಂದ್ರ ತೀರ್ಥಿಯ ಪೂರ್ವಾದಿ ಮಠ, ಮುನಿತ್ರಯ ಪೀಠ, ಶ್ರೀವ್ಯಾಸರಾಜ ಮಠ (ಸೋಸಲೆ) ಶ್ರೀ ವ್ಯಾಸತೀರ್ಥ ವಿದ್ಯಾಪೀಠ:** ಶ್ರೀ ಮದ್ಬ್ರಹ್ಮ ಸೂತ್ರ–ಶ್ರೀಮದುನ ವ್ಯಾಖ್ಯಾನ–ಸಹಿತ ಶ್ರೀ ಮನ್ನ್ಯಾಯ ಸುಧಾ ಮಂಗಳ ಮಹೋತ್ಸವ ಶ್ರೀ ಮನ್ನ್ಯಾಯ ಸುಧಾ ಪರೀಕ್ಷೆ ಹಾಗೂ ಶ್ರೀ ಶ್ರೀ 1008 ಶ್ರೀ ವಿದ್ಯಾಶ್ರೀಶ ತೀರ್ಥ ಶ್ರೀಪಾದರ ಸಹಸ್ರಚಂದ್ರ ದರ್ಶನ ಶಾಂತಿ ಮಹೋತ್ಸವ, ಬೆಳಗ್ಗೆ 6ಕ್ಕೆ ಪೀಠಾಧಿಪತಿಗಳಿಂದ ಸಂಸ್ಥಾನ ಪೂಜೆ, ಸಂಜೆ 6.30ಕ್ಕೆ ಯಜ್ಞವರಾಹ ಮಂಟಪದಲ್ಲಿ – ಅರಣಿಮಥನ, ಗಣಹೋಮ, ನವಗ್ರಹ ಹೋಮ, ವಾಸ್ತುಹೋಮ, ಉಪಸ್ಥಿತರು : ಮಂತ್ರಾಲಯ ಶ್ರೀ ರಾಘವೇಂದ್ರ ಮಠದ ಶ್ರೀ ಸುಬುಧೇಂದ್ರತೀರ್ಥ ಶ್ರೀಪಾದರು, ಶ್ರೀಮಾಧವತೀರ್ಥ ಮಠದ ಶ್ರೀ ವಿದ್ಯಾಸಾಗರ ಮಾಧವತೀರ್ಥ ಶ್ರೀಪಾದರು, ಮುಳಬಾಗಿಲು ಶ್ರೀಪಾದರಾಜ ಮಠದ ಶ್ರೀ ಸುಜಯನಿಧಿತೀರ್ಥ ಶ್ರೀಪಾದರು, ಶ್ರೀ ಮಾಧವತೀರ್ಥ ಮಠ ಕಿರಿಯಪಟ್ಟ ಶ್ರೀ ವಿದ್ಯಾವಲ್ಲಭ ಮಾಧವತೀರ್ಥ ಶ್ರೀಪಾದರು, ಶ್ರೀ ಮದಾರ್ಯಅಕ್ಷೋಭ್ಯತೀರ್ಥ ಸಂಸ್ಥಾನ, ಶ್ರೀ ಬಾಳಗಾರು ಮಠ–ಕಿರಿಯಪಟ್ಟ ಶ್ರೀ ಅಕ್ಷೋಭ್ಯರಾಮಪ್ರಿಯತೀರ್ಥ ಶ್ರೀಪಾದರು, ಶ್ರೀ ಕೃಷ್ಣಾಪುರ ಮಠದ ಶ್ರೀ ವಿದ್ಯಾಸಾಗರ ತೀರ್ಥ ಶ್ರೀಪಾದರು, ಶ್ರೀ ಅದಮಾರು ಮಠದ ಶ್ರೀ ವಿಶ್ವಪ್ರಿಯತೀರ್ಥ ಶ್ರೀಪಾದರು, ಶ್ರೀ ಪಲಿಮಾರು ಮಠದ ಶ್ರೀ ವಿದ್ಯಾಧೀಶತೀರ್ಥ ಶ್ರೀಪಾದರು, ಶ್ರೀ ಪೇಜಾವರ ಮಠದ ಶ್ರೀ ವಿಶ್ವಪ್ರಸನ್ನತೀರ್ಥ ಪ್ರಸಾದರು, ಶ್ರೀ ಕಾಣಿಯೂರು ಮಠದ ಶ್ರೀ ವಿದ್ಯಾವಲ್ಲಭತೀರ್ಥ ಶ್ರೀಪಾದರು, ಶ್ರೀ ಅದಮಾರು ಮಠ, ಕಿರಿಯ ಪಟ್ಟ ಶ್ರೀ ಈಶಪ್ರಿಯತೀರ್ಥ ಶ್ರೀಪಾದರು, ಶ್ರೀ ಪಲಿಮಾರು, ಕಿರಿಯಪಟ್ಟ ಶ್ರೀ ವಿದ್ಯಾರಾಜೇಶ್ವರತೀರ್ಥ ಶ್ರೀಪಾದರು, ಶ್ರೀ ಶಿರೂರು ಮಠದ ಶ್ರೀ ವೇದವರ್ಧನತೀರ್ಥ ಶ್ರೀಪಾದರು, ಸ್ಥಳ: ವಿಟ್ಠಲಧಾಮ, ಜೆ.ಪಿ.ನಗರ, ಬೆಳಗ್ಗೆ 9 ರಿಂದ 10.30ರವರೆಗೆ ಶ್ರೀ ವ್ಯಾಸ ಮಂಟಪದ ವೇದಿಕೆಯಲ್ಲಿ ಸೋಸಲೆ ಶ್ರೀ ವ್ಯಾಸರಾಜ ಮಠಾಧೀಶರಾದ ಶ್ರೀ ವಿದ್ಯಾಶ್ರೀಶತೀರ್ಥ ಶ್ರೀಪಾದರ ಸುಧಾಮಂಗಳಾನುವಾದ, ವೇದವ್ಯಾಸಪೂಜಾ, ಉಪಸ್ಥಿತ ಪೀಠಾಧಿಪತಿಗಳಿಂದ ಅನುಗ್ರಹ ಸಂದೇಶ, ಉಪಸ್ಥಿತರು : ಶ್ರೀ ಭಂಡಾರಕೇರಿ ಮಠದ ಶ್ರೀ ವಿದ್ಯೇಶತೀರ್ಥ ಶ್ರೀಪಾದರು, ಶ್ರೀ ಸುಬ್ರಹ್ಮಣ್ಯ ಮಠದ ಶ್ರೀ ವಿದ್ಯಾಪ್ರಸನ್ನತೀರ್ಥ ಶ್ರೀಪಾದರು, ಶ್ರೀಭೀಮನಕಟ್ಟೆ ಮಠದ ಶ್ರೀ ರಘುವರೇಂದ್ರತೀರ್ಥ ಶ್ರೀಪಾದರು, ಚಿತ್ರಾಪುರ ಮಠದ ಶ್ರೀ ವಿದ್ಯೇಂದ್ರತೀರ್ಥ ಶ್ರೀಪಾದರು, ಕಣ್ವಮಠದ ಶ್ರೀ ವಿದ್ಯಾಕಣ್ವವಿರಾಜತೀರ್ಥ ಶ್ರೀಪಾದರು, ಶ್ರೀ ಯದುಗಿರಿ ಯತಿರಾಜ ಮಠ, ಮೇಲುಕೋಟೆ ಶ್ರೀ ಯದುಗಿರಿ ಯತಿರಾಜನಾರಾಯಣ ರಾಮಾನುಜ ಜೀಯರ್ ಮಹಾಸ್ವಾಮಿಗಳು, ಭುವನಗಿರಿ ಆಶ್ರಮದ ಶ್ರೀ ಸುವಿದ್ಯೇಂದ್ರತೀರ್ಥ ಶ್ರೀಪಾದರು, ಬನ್ನಂಜೆ ಶ್ರೀ ರಾಘವೇಂದ್ರತೀರ್ಥ ಶ್ರೀಪಾದರು, ರಾಮೋಹಳ್ಳಿ ಶ್ರೀ ವಿಶ್ವಭೂಷಣತೀರ್ಥ ಶ್ರೀಪಾದರು, ಮಧ್ಯಾಹ್ನ 3.30 ರಿಂದ ವಾಕ್ಯಾರ್ಥಗೋಷ್ಠಿ, ಸಂಜೆ 5.30ಕ್ಕೆ ಸಭಾ ಕಾರ್ಯಕ್ರಮ, ಭವ್ಯ ರಜತಸಿಂಹಾಸನದಲ್ಲಿ ಶ್ರೀ ವ್ಯಾಸರಾಜರಿಗೆ ಸಾಂಪ್ರದಾಯಿಕ ದರ್ಬಾರ್, ಸಂತರ ಸಮಾಗಮ, ಶ್ರೀ ಸುಬುಧೇಂದ್ರತೀರ್ಥ ಶ್ರೀಪಾದರು, ಶ್ರೀ ಸುಜಯನಿಧಿತೀರ್ಥ ಶ್ರೀಪಾದರು, ಶ್ರೀ ಅಕ್ಷೋಭ್ಯರಾಮಪ್ರಿಯತೀರ್ಥ ಶ್ರೀಪಾದರು, ಶ್ರೀ ವಿದ್ಯಾಕಣ್ವವಿರಾಜತೀರ್ಥ ಶ್ರೀಪಾದರು, ಶ್ರೀ ವಿಶ್ವಪ್ರಸನ್ನತೀರ್ಥ ಶ್ರೀಪಾದರು, ಶ್ರೀ ವಿಶ್ವವಲ್ಲಭತೀರ್ಥ ಶ್ರೀಪಾದರು, ಶ್ರೀ ರಘುವರೇಂದ್ರತೀರ್ಥ ಶ್ರೀಪಾದರು, ಶ್ರೀ ಈಶಪ್ರಿಯತೀರ್ಥ ಶ್ರೀಪಾದರು, ಪ್ರಶಸ್ತಿ ಪ್ರದಾನ : ಶ್ರೀ ವೇದವ್ಯಾಸಾನುಗ್ರಹ ಪ್ರಶಸ್ತಿ : ನವದೆಹಲಿ ಕೇಂದ್ರೀಯ ಸಂಸ್ಕೃತ ವಿಶ್ವವಿದ್ಯಾಲಯ ಕುಲಪತಿ ಡಾ. ಶ್ರೀನಿವಾಸಾಚಾರ್ಯ ವರಖೇಡಿ, ಶ್ರೀ ವ್ಯಾಸರಾಜ ಸೇವಾಧುರಂಧರ ಪ್ರಶಸ್ತಿ : ಪೇಜಾವರ ಶ್ರೀಧಾಮ ಟ್ರಸ್ಟಿ ಹೆಚ್.ಎಂ. ಗುರುನಾಥ್, ಶ್ರೀ ಪುರಂದರಾನುಗ್ರಹ ಪ್ರಶಸ್ತಿ : ದಾಸ ಸಾಹಿತ್ಯ ಸಂಶೋಧಕ ವಿದುಷಿ ಡಾ. ಟಿ.ಎನ್. ನಾಗರತ್ನ, ಶ್ರೀಶಾಭಿನಂದನಮ್, ಸೋಸಲೆ ಶ್ರೀ ವ್ಯಾಸರಾಜ ಮಠಾಧೀಶರಾದ ಶ್ರೀ ವಿದ್ಯಾಶ್ರೀಶತೀರ್ಥ ಶ್ರೀಪಾದರಿಗೆ ಅಭಿನಂದನಾ ಕಾರ್ಯಕ್ರಮ, ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಶ್ರೀ ನಿರಂಜನಾನಂದಪುರಿ ಮಹಾಸ್ವಾಮೀಜಿ, ಶ್ರೀ ಮದಭಿನವವಾಗೀಶ ಬ್ರಹ್ಮತಂತ್ರ ಸ್ವತಂತ್ರ ಪರಕಾಲ ಮಹಾದೇಶಿಕ ಸ್ವಾಮಿಗಳು, ಶ್ರೀ ದತ್ತವಿಜಯಾನಂದತೀರ್ಥ ಶ್ರೀಪಾದರು, ಮುಖ್ಯ ಅತಿಥಿಗಳು : ನ್ಯಾಯಮೂರ್ತಿ ವಿ. ಶ್ರೀಶಾನಂದ, ತಿರುಪತಿ ತಿರುಮಲ ದೇವಸ್ಥಾನಂ ಕಾರ್ಯನಿರ್ವಹಣಾ ಅಧಿಕಾರಿ ಧರ್ಮಾರೆಡ್ಡಿ, ಶ್ರೀ ವ್ಯಾಸರಾಜ ಸಲಹಾ ಸಮಿತಿ ಅಧ್ಯಕ್ಷ ಕೆ. ಜಯರಾಜ್, ಶ್ರೀ ವ್ಯಾಸರಾಜ ಮಠದ ಆಡಳಿತಾಧಿಕಾರಿ ಸಿ.ಎಸ್. ಸುರಂಜನ್, ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ಅಧ್ಯಕ್ಷ ಅಶೋಕ್ ಹಾರನಹಳ್ಳಿ, ಸಂಜೆ 6ಕ್ಕೆ ವಿಟ್ಠಲದೇವರ ಸನ್ನಿಧಾನದಲ್ಲಿ ಚಕ್ರಾಬ್ಜಮಂಡಲಪೂಜೆ, ರಾತ್ರಿ 8ಕ್ಕೆ ಸಾಂಸ್ಕೃತಿಕ ಕಾರ್ಯಕ್ರಮ, ಶ್ರೀಮತಿ ಮೇಧಾವಿನೀ ವರಖೇಡಿ ಅವರಿಂದ ಭರತನಾಟ್ಯ ಕಾರ್ಯಕ್ರಮ.

■ **ಶ್ರೀ ಶ್ರೀನಿವಾಸ ಸ್ವಾಮಿ ಕೈಂಕರ್ಯ ಸಭಾ :** ಶ್ರೀ ಶ್ರೀನಿವಾಸಸ್ವಾಮಿಯವರ ವಾರ್ಷಿಕ ಮಹೋತ್ಸವ, ಸಂಜೆ 7ಕ್ಕೆ ಶೇರ್ತಿ ಸೇವೆ, ತಿರುಪ್ಪಾವಾಡೆ ಸೇವೆ, ಸ್ಥಳ: ಸಭಾ ಆವರಣ, ತಿಲಕ್‌ನಗರ.

■ **ಶ್ರೀರಾಮಕೃಷ್ಣ ಆಶ್ರಮ :** ಸ್ವಾಮಿ ಇಷ್ಟನಾಥಾನಂದ ಅವರಿಂದ ಆತ್ಮಬೋಧ ಕುರಿತು ಉಪನ್ಯಾಸ, ಸ್ಥಳ: ಆಶ್ರಮದ ಸಭಾಂಗಣ, ಯಾದವಗಿರಿ, ಸಂಜೆ 6ಕ್ಕೆ.

■ **ಇನ್‌ಸ್ಟಿಟ್ಯೂಷನ್ ಆಫ್ ಇಂಜಿನಿಯರ್ಸ್ :** ಎಂ.ಎನ್. ಚಂದನ ಅವರಿಂದ ನೆಟ್ ಆಪ್ ಸ್ಟೋರೇಜ್ ಕುರಿತು ಉಪನ್ಯಾಸ, ಅಧ್ಯಕ್ಷತೆ : ಇನ್‌ಸ್ಟಿಟ್ಯೂಷನ್ ಆಫ್ ಇಂಜಿನಿಯರ್ಸ್ ಅಧ್ಯಕ್ಷ ಡಾ. ಆರ್. ದೀಪು, ಸ್ಥಳ: ಎಸ್.ಪಿ. ಭಟ್ ಹಾಲ್, ಇನ್‌ಸ್ಟಿಟ್ಯೂಷನ್ ಆಫ್ ಇಂಜಿನಿಯರ್ಸ್, ಸಂಜೆ 6ಕ್ಕೆ.

■ **ಶ್ರೀ ತ್ಯಾಗರಾಜ ಸಂಗೀತ ಸಭಾ ಚಾರಿಟಬಲ್ ಟ್ರಸ್ಟ್ :** ವಿದುಷಿ ಅಶ್ವಿನಿ ಸತೀಶ್ ಅವರಿಂದ ಗಾಯನ, ವಿದ್ವಾನ್ ಕೇಶವ್ ಮೋಹನ್ ಕುಮಾರ್–ಪಿಟೀಲು, ವಿದ್ವಾನ್ ನಂದನ್ ಕಶ್ಯಪ್–ಮೃದಂಗ, ವಿದ್ವಾನ್ ದಾಸಪ್ಪ–ಘಟಂ, ಸ್ಥಳ: ಶ್ರೀ ಲಕ್ಷ್ಮೀನರಸಿಂಹ ಗಾಯತ್ರಿ ದೇವಸ್ಥಾನ, ಎಸ್‌ಬಿಎಂ ಕಾಲೋನಿ, ಶ್ರೀರಾಂಪುರ, ಸಂಜೆ 6ಕ್ಕೆ.

■ **ಶ್ರೀರಾಮ ಪಟ್ಟಾಭಿಷೇಕ ಸೇವಾ ಸಮಿತಿ :** ಶ್ರೀರಾಮ ಪಟ್ಟಾಭಿಷೇಕ ಮತ್ತು ಸೀತಾ ಕಲ್ಯಾಣ ಮಹೋತ್ಸವ, ಸಂಜೆ 6ಕ್ಕೆ ಗಣಪತಿ ಪೂಜೆ, ಪುಣ್ಯಾಹ ವಾಚನ, ಕಳಸ ಸ್ಥಾಪನೆ, ಪ್ರಾರ್ಥನೆ, ಸಂಜೆ 6.30ಕ್ಕೆ ವರಾಗಮನ, ಶ್ರೀರಾಮದೇವರನ್ನು ಮಂಗಳವಾದ್ಯಗಳೊಂದಿಗೆ ಮೆರವಣಿಗೆ ಮೂಲಕ ಕಲ್ಯಾಣ ಮಂಟಪಕ್ಕೆ ಬರಮಾಡಿಕೊಳ್ಳುವುದು, ಲಗ್ನ ಪತ್ರಿಕೆ, ವರಪೂಜೆ ಶಾಸ್ತ್ರ, ಅಷ್ಟಾವಧಾನ ಸೇವೆ, ಮಹಾಮಂಗಳಾರತಿ, ಪ್ರಸಾದ ವಿನಿಯೋಗ, ಸ್ಥಳ: ನಟರಾಜ ಕಲ್ಯಾಣ ಮಂಟಪ.

■ **ಕಲಾಸುರುಚಿ, ಕುತೂಹಲಿ–ಕನ್ನಡ ಮತ್ತು ದಿ ಅಕಾಡೆಮಿ ಟ್ರಸ್ಟ್ :** ಸೈನ್ಸ್ ಸಂಜೆ ನಾವು ಮತ್ತು ನಮ್ಮ ಅಸ್ಥಿಪಂಜರ ಕುರಿತು ಮೂಳೆ ಮತ್ತು ಕೀಲು ವೈದ್ಯ ಡಾ. ಎಂ.ಆರ್. ಸೀತಾರಾಂ ಅವರಿಂದ ಉಪನ್ಯಾಸ, ಸ್ಥಳ: ಸುರುಚಿ ರಂಗಮನೆ, ಕುವೆಂಪುನಗರ, ಸಂಜೆ 6.30 ರಿಂದ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಮತ್ತು ಸಂಜೆ 6.10 CFTRI 'ಶೋಧ– ಅನುಶೋಧ' ಪ್ರಾಯೋಜಿತ ಬಾನುಲಿ ಸರಣಿ, ಪ್ರಾಯೋಜಕರು–CSIR, CFTRI, Mysuru, 6.40 ಪದಸಂಸ್ಕೃತಿ–ಪರಮೇಶ್ವರ. ವಿ.ಭಟ್, 6.50 ರೈತರಿಗೆ ಸಲಹೆ, 7.15 ಭಾವಗೀತೆಗಳು, 8.30 ಹಾದಿಯಲ್ಲಿ ಕಂಡ ಮುಖ–ಬಾನುಲಿ ಸರಣಿ, ಕಂಪೆನಿ ನಾಟಕ ಕಲಾ ವಿದರಾದ ಮಂಜುನಾಥ್ ಮತ್ತು ಅವರ ಮಡದಿ ಸುಬ್ಬಮ್ಮ ಅವರೊಂದಿಗೆ ಸಂವಾದ. ಪ್ರಸ್ತುತಿ: ಅಬ್ದುಲ್ ರಶೀದ್, 10.00 ಕರ್ನಾಟಕ ಶಾಸ್ತ್ರೀಯ ಸಂಗೀತ : ವಿ. ಶ್ರೀಕಾಂತ್ – ವೈಯೋಲಿನ್, 11.00 ಮಿಶ್ರಮಾಧುರ್ಯ

ಮಧ್ಯಾಹ್ನ: 12.30 ದೇವರನಾಮ, 12.45 ಜನಪದ ಸಂಗೀತ, 1.20 ಭಾವಗೀತೆಗಳು–ಕೆ. ಎಸ್. ಸುರೇಖಾ, 3.00 ಜನಪದ ಸಂಗೀತ, 3.30 ಮಕ್ಕಳ ಮಂಟಪ–ಶ್ರೀರಂಗರಾವ್ ಸ್ಮಾರಕ ವಿಕಲಚೇತನ ಹೆಣ್ಣು ಮಕ್ಕಳ ಶಾಲೆಯ ಮಕ್ಕಳಿಂದ ಕಾರ್ಯಕ್ರಮ, 4.00 ನಾಟಕ 'ಶುಭಾಷಿಣಿ', ಮೂಲಕಥೆ: ರವೀಂದ್ರನಾಥ್ ಟ್ಯಾಗೋರ್, ಕನ್ನಡ ಬಾನುಲಿ ರೂಪ: ಚಂದ್ರಕಾಂತ ಪಡೇಸೂರ, ನಿರ್ವಹಣ: ಸುನಂದಾ ಮೂರ್ತಿ, 4.30 ನೆನಪಿನಂಗಳ: ಡಾ. ಕೆ.ಶಿವರಾಮ ಕಾರಂತರಿಂದ ಸಣ್ಣ ಕಥೆ, 'ಸಿಂಹ ಮೂಲದ ಕಥೆ', 'ಜೀವನದಲ್ಲಿ ನಂಬಿಕೆಯ ಪಾತ್ರ' ಪ್ರೊ. ದೇ. ಜವರೇಗೌಡರ ಭಾಷಣದ ಧ್ವನಿಮುದ್ರಣ, 6.55 ಕೃಷಿರಂಗ : ಕಿಸಾನ್ ವಾಣಿ, ಜೋಳದ ಸುಧಾರಿತ ಬೇಸಾಯ ತಾಂತ್ರಿಕತೆಗಳು. ಈ ಕುರಿತು ಚಾಮರಾಜನಗರ ತಾಲೂಕು ಹರದನಹಳ್ಳಿಯ ಅಖಿಲ ಭಾರತ ಸುಸಂಘಟಿತ ಜೋಳ ಸಂಶೋಧನಾ ಯೋಜನೆಯ ಮುಖ್ಯಸ್ಥರಾದ ಡಾ. ಜಿ. ಸೋಮು ಅವರೊಂದಿಗೆ ಸಂದರ್ಶನ. ಸಂದರ್ಶಕರು: ಎನ್. ಕೇಶವಮೂರ್ತಿ., 8.00 ಯುವವಾಣಿ, 9.30 ಸೌಹಾರ್ದತೆಯ ಸಂಕೇತಗಳು–ಬಾನುಲಿ ಮಾಲಿಕೆಯಲ್ಲಿ ಹಲಗೂರು ಬಳಿಯ ಮುತ್ತತಿ ಕುರಿತು ಮಾತನಾಡುತ್ತಾರೆ ಡಾ. ಪ್ರದೀಪ್ ಕುಮಾರ್, 10.00 ರಾಷ್ಟ್ರೀಯ ಸಂಗೀತ ಕಾರ್ಯಕ್ರಮ, ಭುವನೇಶ್ ಕೋಂಕಲಿ – ಗಾಯನ

ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಜೂನ್ 8 ಶನಿವಾರ 2024

₹4

ಸಂಪುಟ: 45 | ಸಂಚಿಕೆ: 53 | ಪುಟಗಳು: 12

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, *website: www.mysurumithra.com*

ನಕ್ಕರೆ ಅದೇ ಸ್ವರ್ಗ

ಹೆಂಡ್ತಿ : ಏನ್ರೀ ಕಲ್ಲು ಇದ್ದ ಹಾಗೇ ಇದ್ದೀರ?

ಗಂಡ : ಹೂ ಕಣೇ, ಅಕ್ಕೀಲಿ ಕಲ್ಲನ್ನು ಸೋಸಿ ಹಾಕಂದ್ರೆ ಹಾಗೇ ಬೇಯ್ಸಿ ಹಾಕ್ತೀಯಲ್ಲ, ಅದನ್ನು ತಿಂದು ಕಲ್ಲಿದ್ದಂಗೆ ಇದ್ದೀನಿ.

ಮೈಸೂರು ಮಿತ್ರ

ಶನಿವಾರ, 8 ಜೂನ್ 2024

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ *M.A.*

ಅಮೃತವಾಹಿನಿ.........

ಬುದ್ಧಿವಂತರು ತಾವು ಇಚ್ಛಾಪೂರ್ವಕವಾಗಿ ಕೈಗೊಂಡ ಕಾರ್ಯವನ್ನು ಕೈಗೂಡುವವರೆಗೂ ಬಿಡುವುದಿಲ್ಲ – ಸಮಯೋಚಿತ ಪದ್ಯಮಾಲಿಕಾ

ವೇದ ಸುಳ್ಳಾದರೂ { ಕೈಗೆಟುಕದ
ಗಾದೆ ಸುಳ್ಳಾಗದು { ದ್ರಾಕ್ಷಿ ಹುಳಿ

ನಿಮ್ಮ ಪತ್ರಗಳು

ಉತ್ತರಾಖಂಡ ದುರಂತ ದುಃಖಕರ

ಮಾನ್ಯರೆ,

ಉತ್ತರಾಖಂಡದ ಉತ್ತರಕಾಶಿಯ ಸಹಸ್ತ್ರತಾಲ್ ಬಳಿ ಚಾರಣಕ್ಕೆ ಹೋಗಿದ್ದ ಕರ್ನಾಟಕದ 22 ಜನರ ಪೈಕಿ 9 ಮಂದಿ ಮೃತಪಟ್ಟಿರುವುದು ದುರದೃಷ್ಟಕರವಾಗಿದ್ದು, ಉಳಿದ 13 ಜನರನ್ನು ಎನ್‌ಡಿಆರ್‌ಎಫ್ ತಂಡ ರಕ್ಷಣೆ ಮಾಡಿರುವುದು ಸಮಾಧಾನಕರ ಸಂಗತಿಯಾಗಿದೆ.

ಪ್ರವಾಸಕ್ಕೆ ಹೊರಡುವ ಪ್ರವಾಸಿಗರು ಮೊದಲು ತಾವು ಭೇಟಿ ನೀಡುವ ಸ್ಥಳಗಳ ಬಗ್ಗೆ ಮೊದಲೇ ಮಾಹಿತಿ ಸಂಗ್ರಹಿಸಬೇಕು. ಆ ಪ್ರದೇಶದ ಹವಾಮಾನ, ತಂಗುವ ಹೋಟೆಲ್, ಪ್ರವಾಸಿ ಸ್ಥಳದಲ್ಲಿ ಮೂಲಭೂತ ಸೌಕರ್ಯ, ರಕ್ಷಣೆ, ಸಂಪರ್ಕ ವ್ಯವಸ್ಥೆ, ಹತ್ತಿರದ ಪೊಲೀಸ್ ಠಾಣೆಗಳು, ಆಸ್ಪತ್ರೆಗಳು ಹೀಗೆ ಇನ್ನೂ ಮುಂತಾದ ವಿಷಯಗಳ ಬಗ್ಗೆ ಮೊದಲೇ ಮಾಹಿತಿ ಸಂಗ್ರಹಿಸಿದರೆ ಸುರಕ್ಷಿತವಾಗಿ ಪ್ರವಾಸ ಕೈಗೊಳ್ಳಬಹುದಾಗಿದೆ.

ಇಂದಿನ ಅಂತರ್ಜಾಲ ಯುಗದಲ್ಲಿ ಯಾವುದೇ ಪ್ರವಾಸಿ ಸ್ಥಳದ ಬಗ್ಗೆ ಮಾಹಿತಿ ಸಂಗ್ರಹಿಸುವುದು ಸುಲಭವಾದ ಕಾರ್ಯವಾಗಿದೆ. ವೆಬ್‌ಸೈಟ್ ಮತ್ತು ಯೂಟ್ಯೂಬ್‌ಗಳಲ್ಲಿ ಹಲವಾರು ವೀಡಿಯೋ ಸಹಿತ ಮಾಹಿತಿಯಿದ್ದು, ಆ ಸ್ಥಳದ ಬಗ್ಗೆ ಸಂಪೂರ್ಣ ಮಾಹಿತಿ ಲಭ್ಯವಿರುತ್ತದೆ. ಜೊತೆಗೆ ಆ ಸ್ಥಳದಲ್ಲಿ ಉತ್ತಮ ಸೌಲಭ್ಯಗಳಿದ್ದರೆ ಒಳ್ಳೆಯ ರೇಟಿಂಗ್ ಪಾಯಿಂಟ್ ಹಾಗೂ ಒಳ್ಳೆಯ ಪ್ರತಿಕ್ರಿಯೆ ಕೂಡ ಇರುತ್ತದೆ.

ಪ್ರವಾಸೋದ್ಯಮ ಎಂಬುದು ಸರ್ಕಾರಕ್ಕೆ ದೊಡ್ಡ ಮಟ್ಟದ ಆದಾಯ ತಂದುಕೊಡುವ ಮೂಲವಾಗಿದ್ದು, ಸರ್ಕಾರಗಳು ಪ್ರವಾಸಿ ಸ್ಥಳಗಳಲ್ಲಿ ಮೂಲಭೂತ ಸೌಕರ್ಯಗಳನ್ನು ಅಭಿವೃದ್ಧಿಪಡಿಸಬೇಕು. ಕೆಲವೊಂದು ಪ್ರವಾಸಿ ಸ್ಥಳಗಳಲ್ಲಿ ಅನಗತ್ಯ ಟೋಲ್ ಸಂಗ್ರಹ ಕೇಂದ್ರಗಳಿರುತ್ತವೆ. ಮತ್ತು ಕೆಲವು ಕಡೆ ಹೆಸರಿಗೆ ಒಬ್ಬರಾದರೂ ಪೊಲೀಸ್ ಇರುವುದಿಲ್ಲ. ಇಂತಹ ಕಡೆ ಪ್ರವಾಸಿಗರ ಭದ್ರತೆಗೆ ಯಾರು ಹೊಣೆ. ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಪ್ರವಾಸಿ ಕೇಂದ್ರಗಳಲ್ಲಿ ಮೂಲಭೂತ ಸೌಕರ್ಯಗಳನ್ನು ದೊಡ್ಡ ಮಟ್ಟದಲ್ಲಿ ಅಭಿವೃದ್ಧಿಪಡಿಸುವ ಮೂಲಕ ಪ್ರವಾಸೋದ್ಯಮದ ಅಭಿವೃದ್ಧಿಗೆ ಆದ್ಯತೆ ನೀಡಿದರೆ ಸರ್ಕಾರಕ್ಕೆ ಆದಾಯವು ಬರುತ್ತದೆ ಮತ್ತು ಹಲವಾರು ಉದ್ಯೋಗಗಳು ಸೃಷ್ಟಿಯಾಗುತ್ತದೆ. ಈ ವರ್ಷದ ಮೇ ತಿಂಗಳಿನಲ್ಲಿ ಚಾರ್ ಧಾಮ್ ಯಾತ್ರೆಯಲ್ಲಿ 50 ಜನ ಮೃತಪಟ್ಟಿದ್ದು ಹವಾಮಾನ ವೈಪರೀತ್ಯದಿಂದಾಗಿ ಮುನ್ನೆಚ್ಚರಿಕೆ ವಹಿಸುವುದು ಸರ್ಕಾರ ಮತ್ತು ಚಾರಣಿಗರಿಗೆ ಅನಿವಾರ್ಯ.

ಸರ್ಕಾರ ಇಂತಹ ಚಾರಣ ಸ್ಥಳಗಳಲ್ಲಿ ನಿಯಮಗಳನ್ನು ಕಠಿಣಗೊಳಿಸಬೇಕು ಮತ್ತು ಚಾರಣಿಗರಿಗೆ ಸೂಕ್ತ ರಕ್ಷಣೆಯ ವ್ಯವಸ್ಥೆಯನ್ನು ಕಲ್ಪಿಸಬೇಕು. ಮೃತರಾದ ಕನ್ನಡಿಗರ ಆತ್ಮಕ್ಕೆ ಶಾಂತಿ ಸಿಗಲೆಂದು ಆಶಿಸೋಣ.

–ರಾಸುಮ ಭಟ್, ಕುವೆಂಪು ವಿಶ್ವವಿದ್ಯಾನಿಲಯ, ಚಿಕ್ಕಮಗಳೂರು.

ವಿವಿಧ ಪಕ್ಷಗಳಿಗೆ ಪಾಠ ಕಲಿಸಿದೆ ಈ ಬಾರಿಯ ಚುನಾವಣಾ ಫಲಿತಾಂಶ!

ಮಾನ್ಯರೆ,

ಬಹು ನಿರೀಕ್ಷಿತ 2024ರ ಲೋಕಸಭಾ ಚುನಾವಣೆ ಫಲಿತಾಂಶ ಪ್ರಕಟಗೊಳ್ಳುವ ಜೊತೆಗೆ, ದೇಶ ಯಾವ ದಾರಿಯಲ್ಲಿ ಸಾಗಬೇಕು ಎಂಬ ಮತದಾರನ ತೀರ್ಮಾನವೂ ಪ್ರಕಟವಾಗಿದೆ. ಅತಿಯಾದ ಆತ್ಮವಿಶ್ವಾಸದಿಂದ ಬೀಗುತ್ತಿದ್ದ ವಿವಿಧ ರಾಜಕೀಯ ಪಕ್ಷಗಳಿಗೆ ಸರಿಯಾದ ಪೆಟ್ಟನ್ನೇ ಈ ಬಾರಿಯ ಲೋಕಸಭಾ ಫಲಿತಾಂಶ ನೀಡಿದೆ. 400ರ ಗಡಿ ತಲುಪುತ್ತೇವೆ ಎಂಬ ಬಿಜೆಪಿಯ ಬಹು ನಿರೀಕ್ಷೆಯನ್ನು ದೇಶದ ಮತದಾರರು ಹುಸಿಗೊಳಿಸಿ, ಆ ಮೂಲಕ ಎಚ್ಚರಿಕೆಯ ಸಂದೇಶವನ್ನು ಬಿಜೆಪಿಗೆ ನೀಡಿದ್ದಾರೆ.

ಏಕೆಂದರೆ ಕಳೆದ ಹತ್ತು ವರ್ಷಗಳಿಂದ ಮೋದಿ ಪ್ರಶ್ನಾತೀತ ನಾಯಕರಾಗಿದ್ದರು. ಈಗ ಪರಿಸ್ಥಿತಿ ಬದಲಾಗಿದೆ. ಈ ಫಲಿತಾಂಶ ನರೇಂದ್ರಮೋದಿ ಅವರಿಗೆ ವೈಯಕ್ತಿಕವಾಗಿ ನಿರಾಶಾದಾಯಕವಾಗಿದೆ ಎಂಬ ಮಾತು ವಿಶ್ಲೇಷಣೆಗೆ ದಾರಿ ಮಾಡಿಕೊಟ್ಟಿರುವುದರ ಜೊತೆಗೆ, ನರೇಂದ್ರಮೋದಿ ಅವರ ವ್ಯಕ್ತಿತ್ವದ ಸುತ್ತ ಸೃಷ್ಟಿಯಾಗಿದ್ದ ಶ್ರೇಷ್ಠತೆಯ ಗ್ರಹಿಕೆಯನ್ನು ಅನಿರೀಕ್ಷಿತವಾಗಿ ಕುಸಿಯುವಂತೆ ಮಾಡಿದೆ ಎಂದರೆ ತಪ್ಪಾಗಲಾರದು. ಅಲ್ಲದೇ ಸಂವಿಧಾನ ಬದಲಾವಣೆಯ ಅಪಾಯದ ಬಗ್ಗೆ ಹಿಂದುಳಿದ ವರ್ಗದಲ್ಲಿ ಒಂದು ರೀತಿಯ ಆತಂಕ, ಅಭದ್ರತೆ ಇದ್ದದ್ದು, ಬರೀ ರಾಮನ ಜಪ, ಹಿಂದುತ್ವದ ಮಂತ್ರವನ್ನು ಬಡಬಡಿಸಿ ಅಲ್ಪಸಂಖ್ಯಾತರ ಕೆಂಗಣ್ಣಿಗೆ ಗುರಿಯಾಗಿದ್ದು ಬಿಜೆಪಿಯ ಬಹುನಿರೀಕ್ಷೆಯ ಫಲಿತಾಂಶದ ತಡೆಗೆ ಪ್ರಮುಖ ಕಾರಣವಾಗಿದೆ.

ಇದಲ್ಲದೇ ಕಾಂಗ್ರೆಸ್‌ನವರು ಈ ಬಾರಿಯ ಲೋಕಸಭಾ ಚುನಾವಣೆಯಲ್ಲಿ ಸ್ಥಳೀಯ ಹಾಗೂ ರಾಷ್ಟ್ರೀಯ ಸಮಸ್ಯೆಗಳಿಗಿಂತ 'ಗ್ಯಾರಂಟಿ' ಯೋಜನೆಗಳನ್ನೇ ಚುನಾವಣಾ ಟ್ರಂಪ್ ಕಾರ್ಡ್ ಆಗಿ ಬಳಸಿ, ಮತ ಸೆಳೆಯಲು ಮುಂದಾಗಿದ್ದು, ಇದು ಕೂಡ ಸುಶಿಕ್ಷಿತ ಮತದಾರರ ಕೆಂಗಣ್ಣಿಗೆ ಗುರಿಯಾಗಲು ಕಾರಣವಾಯಿತು. ಹೀಗಾಗಿ ಇವೆರಡೂ ಪಕ್ಷಗಳು ಸ್ಪಷ್ಟ ಬಹುಮತದತ್ತ ತಲುಪಲು ವಿಫಲವಾದವು. ಅಂತಿಮವಾಗಿ ಈ ಬಾರಿಯ ಚುನಾವಣೆಯಲ್ಲಿ ದೇಶದ ಸಂವಿಧಾನವೇ ಗೆದ್ದಿದೆ. ಪ್ರಜಾಪ್ರಭುತ್ವ ವಿಜಯದ ನಗೆ ಬೀರಿದೆ ಎಂಬುದನ್ನು ನಮ್ಮ ಪ್ರಜ್ಞಾವಂತ ಮತದಾರ ವಿವಿಧ ರಾಜಕೀಯ ಪಕ್ಷಗಳಿಗೆ ಮನದಟ್ಟು ಮಾಡಿದ್ದಾನೆ ಎಂಬುದು ದಿಟವಾಗಿದೆ.

–ಹರಳಹಳ್ಳಿ ಪುಟ್ಟರಾಜು, ಪಾಂಡವಪುರ.

ಕಲಾಮಂದಿರಕ್ಕೆ ಬಸ್ ಸೌಕರ್ಯ ಕಲ್ಪಿಸಿ


ಮಾನ್ಯರೆ,

ಸಾಂಸ್ಕೃತಿಕ ನಗರ ಮೈಸೂರಿಗೆ ಮುಕುಟ ಮಣಿಯಂತಿರುವ ಮೈಸೂರಿನ ಹೃದಯ ಭಾಗದಲ್ಲಿರುವ ಕರ್ನಾಟಕ ಕಲಾಮಂದಿರದಲ್ಲಿ ಮತ್ತು ರಂಗಾಯಣದಲ್ಲಿ ವರ್ಷದ ಪ್ರತಿ ದಿನವೂ ಒಂದಿಲ್ಲೊಂದು ಸಾಂಸ್ಕೃತಿಕ ಕಾರ್ಯಕ್ರಮಗಳು ಮತ್ತು ಸಾರ್ವಜನಿಕ ಕಾರ್ಯಕ್ರಮಗಳು ನಡೆಯುತ್ತಲೇ ಇರುತ್ತವೆ.

ಆದರೆ ಇಲ್ಲಿಗೆ ಸಾರ್ವಜನಿಕರು ಬಂದು ಹೋಗಲು ಯಾವುದೇ ಸಾರಿಗೆ ಸಂಸ್ಥೆಯ ಬಸ್‌ಗಳ ವ್ಯವಸ್ಥೆಯೇ ಇಲ್ಲ. ಇದರ ಅಕ್ಕಪಕ್ಕದಲ್ಲಿ ಯಾವುದೇ ಸಾರ್ವಜನಿಕ ಬಸ್ ನಿಲ್ದಾಣವೂ ಇಲ್ಲ. ಕಲಾಮಂದಿರ ಮತ್ತು ರಂಗಭೂಮಿ ಭೂಮಿಗೆ ಸಂಬಂಧಿಸಿದ ಯಾವುದೇ ಕಾರ್ಯಕ್ರಮಗಳಿಗೆ ಸಾಮಾನ್ಯ ಜನರು ಬರಲು ಸಾಧ್ಯವೇ ಇಲ್ಲ. ಏನಿದ್ದರೂ ಸ್ವಂತ ವಾಹನಗಳಿರುವ ಶ್ರೀಮಂತ ವರ್ಗದವರು ಮಾತ್ರ ಇಲ್ಲಿ ನಡೆಯುವ ಕಾರ್ಯಕ್ರಮಕ್ಕೆ ಬರಬಹುದು.

ಪ್ರತಿ ದಿನವೂ ನಗರ ಸಾರಿಗೆ ಬಸ್ ನಿಲ್ದಾಣದಿಂದ ಕುಕ್ಕರಹಳ್ಳಿ ಕೆರೆಯ ಮಾರ್ಗವಾಗಿ ಬೋಗಾದಿ ಮತ್ತಿತರ ಬಡಾವಣೆಗಳಿಗೆ ಹತ್ತಾರು ನಗರ ಸಾರಿಗೆ ಬಸ್‌ಗಳು ಓಡಾಡುತ್ತವೆ. ಈ ಮಾರ್ಗವಾಗಿ ಓಡಾಡುವ ಒಂದೆರಡು ಬಸ್‌ಗಳನ್ನಾದರೂ ಕುಕ್ಕರಹಳ್ಳಿ ಕೆರೆಯ ಮಾರ್ಗವಾಗಿ ಕಲಾಮಂದಿರ, ರೈಲ್ವೇ ಸ್ಟೇಷನ್ ಮಾರ್ಗವಾಗಿ ಸಿಟಿ ಬಸ್ ನಿಲ್ದಾಣವನ್ನು ಸೇರುವಂತಾದರೆ ಕಲಾಮಂದಿರದಲ್ಲಿ ನಡೆಯುವ ಕಾರ್ಯಕ್ರಮಗಳಿಗೆ ಜನರು ಬಂದು–ಹೋಗಲು ಅನುಕೂಲವಾಗುತ್ತದೆ. ಈ ಬಗ್ಗೆ ಸಾರಿಗೆ ಸಂಸ್ಥೆಯ ಅಧಿಕಾರಿಗಳು ಸೂಕ್ತ ಕ್ರಮ ಕೈಗೊಂಡು, ಸಾರ್ವಜನಿಕರಿಗೆ ಅನುಕೂಲ ಮಾಡಿಕೊಡಲಿ.

–ಬೂಕನಕೆರೆ ವಿಜೇಂದ್ರ, ಕುವೆಂಪು ನಗರ, ಮೈಸೂರು



ಕೆಬಿಜೆಯವರ

ಭೂಮಂತ್ರ... ಭೂಮಂತ್ರ... ಭೂಮಂತ್ರ...

ಎರಡು ಆಟದಲ್ಲಿ ಗೆದ್ದು ಮೂರನೇ ಆಟದಲ್ಲಿ ಸೋತು–ಗೆದ್ದ ಪ್ರಧಾನಿ ಮೋದಿ

ಹೌದು, ಆಟ ಮುಗಿದಿದೆ. ಬಿಜೆಪಿ ಗೆದ್ದಿದೆ ಆದರೆ...

ಭಾರತ್ ಮಾತಾ ಕೀ ಜೈ. ನಾವು ಭಾರತದ ಜನರು, ಅರ್ಥಾತ್ ಭಾರತೀಯರು, 2024ರ ಲೋಕಸಭಾ ಚುನಾವಣೆಯಲ್ಲಿ ಮತ ಚಲಾಯಿಸಿದ್ದೆವು. ಇದೇ ಜೂನ್ 4ರಂದು ಫಲಿತಾಂಶ ಪ್ರಕಟವಾದಾಗ ಸಂಸತ್ತಿನ ಒಟ್ಟು 543 ಸ್ಥಾನಗಳಲ್ಲಿ ಯಾವುದೇ ಒಂದು ರಾಜಕೀಯ ಪಕ್ಷವು ಸರಕಾರ ರಚಿಸಲು ಅವಶ್ಯವಿರುವ ಮ್ಯಾಜಿಕ್ ಸಂಖ್ಯೆ 272 ಸ್ಥಾನಗಳನ್ನು ಪಡೆಯಲು ಸಾಧ್ಯವಾಗಲಿಲ್ಲ. ಇದು ಈ ಚುನಾವಣೆಯ ದುರಂತ.

ಬಹು ರಾಜಕೀಯ ಪಕ್ಷಗಳನ್ನು ಹೊಂದಿರುವ ನಮ್ಮ ದೇಶದಲ್ಲಿ ಎರಡು ಪಕ್ಷಗಳು ಮಾತ್ರ ಇಡೀ ದೇಶವನ್ನು ಆವರಿಸಿ, ಭಾರತದಾದ್ಯಂತ ಅಸ್ತಿತ್ವವನ್ನು ಹೊಂದಿವೆ – **ಕಾಂಗ್ರೆಸ್** ಮತ್ತು **ಬಿಜೆಪಿ**. ಚುನಾವಣಾ ಕದನವನ್ನು ಏಕಾಂಗಿಯಾಗಿ ಎದುರಿಸುವ ವಿಶ್ವಾಸವಿಲ್ಲದ ಈ ಎರಡೂ ಪಕ್ಷಗಳು ಸಮಾನ ಮನಸ್ಕ ಪ್ರಾದೇಶಿಕ ಪಕ್ಷಗಳೊಡಗೂಡಿ ಒಂದು ಒಕ್ಕೂಟದ ಪಾಲುದಾರರರಾಗಿ ರೂಪುಗೊಂಡವು. ಈ ಒಂದು ರಾಜಕೀಯ ಪ್ರಹಸನ **ಎರಡು ರಾಷ್ಟ್ರೀಯ ಒಕ್ಕೂಟಗಳಿಗೆ ಜನ್ಮ ನೀಡಿತು**. ಒಂದು, **ಬಿಜೆಪಿ ನೇತೃತ್ವದ ಎನ್‌ಡಿಎ** (ಎನ್‌ಡಿಎ–ನ್ಯಾಷನಲ್ ಡೆಮಾಕ್ರೆಟಿಕ್ ಅಲೆಯನ್ಸ್–ರಾಷ್ಟ್ರೀಯ ಪ್ರಜಾಸತ್ತಾತ್ಮಕ ಒಕ್ಕೂಟ) ಮತ್ತು ಇನ್ನೊಂದು, **ಕಾಂಗ್ರೆಸ್ ನೇತೃತ್ವದ ಐಎನ್‌ಡಿಐಎ** (ಐಎನ್‌ಡಿಐಎ– ಇಂಡಿಯನ್ ನ್ಯಾಷನಲ್ ಡೆವಲಪ್‌ಮೆಂಟಲ್ ಇನ್‌ಕ್ಲುಸಿವ್ ಅಲೆಯನ್ಸ್– ಭಾರತೀಯ ರಾಷ್ಟ್ರೀಯ ಅಭಿವೃದ್ಧಿಗೆ ಒಳಗೂಡಿದ ಮೈತ್ರಿ).

ಈಗ ಫಲಿತಾಂಶವು ಭಾರತದ ಜನರ ಮುಂದಿದೆ. ಆದರೆ ಈ ಫಲಿತಾಂಶ ಹರಿದು ಹಂಚಿ ಹೋಗಿದೆ. ಜನಾದೇಶವು ಯಾವ ಒಂದು ಪಕ್ಷಕ್ಕೂ ಸರಕಾರ ರಚಿಸಲು ಬೇಕಾದ ಮ್ಯಾಜಿಕ್ ಸಂಖ್ಯೆ 272 ಲಭಿಸಿಲ್ಲ. ಕಾಂಗ್ರೆಸ್ 99 ಮತ್ತು ಬಿಜೆಪಿ 240 ಸ್ಥಾನಗಳನ್ನು ಪಡೆದುಕೊಂಡಿವೆ. ಆದಾಗ್ಯೂ, ಸಮ್ಮಿಶ್ರ ಪಾಲುದಾರರ ಬೆಂಬಲದೊಂದಿಗೆ ಬಿಜೆಪಿ (ಎನ್‌ಡಿಎ) 293 ಸ್ಥಾನಗಳನ್ನು ಮತ್ತು ಕಾಂಗ್ರೆಸ್ (ಐಎನ್‌ಡಿಐಎ) 234 ಸ್ಥಾನಗಳನ್ನು ಪಡೆದುಕೊಂಡಿವೆ. **ಈ ಅಂಕಿ –ಸಂಖ್ಯೆಗಳ ಪ್ರಕಾರ ಬಿಜೆಪಿಯ ಎನ್‌ಡಿಎ ಸರಕಾರ ರಚಿಸಬಹುದು**.

ಈ ಪ್ರಕಾರವಾಗಿ ಮೋದಿ ಸತತವಾಗಿ 3ನೇ ಬಾರಿಗೆ ಪ್ರಧಾನಿಯಾಗಿ ಭಾನುವಾರ (ಜೂ.9)ದಂದು ಪ್ರಮಾಣ ವಚನ ಸ್ವೀಕರಿಸುತ್ತಿದ್ದಾರೆ. ಅದು ಸರಿ. ನಿಜವಾದ ಆಟ ಈಗ ಶುರುವಾಗಿದೆ.


ಎನ್‌ಡಿಎ ಮತ್ತು ಐಎನ್ ಡಿಐಎ ಎರಡೂ ಒಕ್ಕೂಟಗಳು ಸರ್ಕಾರವನ್ನು ರಚಿಸುವ ಹಕ್ಕನ್ನು ಪ್ರತಿಪಾದಿಸಬಹುದಿತ್ತು. ಆದರೆ ಸಂಖ್ಯಾಬಲದಿಂದ ಬಿಜೆಪಿಗೆ ಲಾಭ ಅಂತೂ ಪ್ರಧಾನಿ ಮೋದಿ ಮೂರನೇ ಬಾರಿ ಪ್ರಧಾನಿಯಾಗುತ್ತಿದ್ದಾರೆ. ದೇಶದ ಮೊದಲ ಪ್ರಧಾನಿ ಜವಾಹರಲಾಲ್ ನೆಹರೂ ಅವರಿಗೂ ಈ ರೀತಿ ಸತತ ಮೂರನೇ ಬಾರಿಗೆ ಪ್ರಧಾನ ಮಂತ್ರಿಯಾಗಿ ಪಟ್ಟಾಭಿಷೇಕ ಮಾಡಲಾಗಿತ್ತು.

ಪ್ರಧಾನಿ ಕಚೇರಿಗೆ ಮೋದಿಯವರ ರಾಜಕೀಯ ಪಯಣವನ್ನು ಹಿಂತಿರುಗಿ ನೋಡಿದಾಗ ಇದು ಸುಲಭದ ಪ್ರಯಾಣವಲ್ಲ ಎಂಬುದು ಅರಿವಿಗೆ ಬರುತ್ತದೆ. ವಿಶೇಷವಾಗಿ 2024ರ ಸಂಸತ್ ಚುನಾವಣೆಯ ಭಾರವನ್ನು ಮೋದಿಯವರು ಒಬ್ಬರೇ ಹೊತ್ತರು ಎನ್ನಬಹುದು.

ಹಿಂದೆಲ್ಲಾ ಈ ರೀತಿಯ ಅತಂತ್ರ ಹಾಗೂ ಅನಿಶ್ಚಿತ ಫಲಿತಾಂಶ ಬಂದಾಗ ರಾಷ್ಟ್ರೀಯ ಪಕ್ಷಗಳು ಚುನಾಯಿತ ಪ್ರತಿನಿಧಿಗಳೊಂದಿಗೆ **'ಕುದುರೆ ವ್ಯಾಪಾರ'** ಇಲ್ಲವೇ **'ರೆಸಾರ್ಟ್ ರಾಜಕಾರಣ'** ಮಾಡುವುದನ್ನು ನೋಡಿದ್ದೇವೆ. ಕಾಂಗ್ರೆಸ್ ನಾಯಕ, ಅಂದಿನ ರಕ್ಷಣಾ ಸಚಿವ ವೈ.ಬಿ. ಚವಾಣ್, 'ಆಯಾ ರಾಮರು ಮತ್ತು ಗಯಾ ರಾಮರು' ಎಂದು ಈ ರೀತಿ ಬಿಕರಿಯಾಗುವ ಚುನಾಯಿತ ಪ್ರತಿನಿಧಿಗಳನ್ನು ಕರೆಯುತ್ತಿದ್ದರು. ನೆನಪಿದೆಯೇ?



ನರೇಂದ್ರ ಮೋದಿ



ರಾಹುಲ್ ಗಾಂಧಿ

> ❝ ನಾನು, ಪ್ರಸ್ತುತ ಚುನಾವಣಾ ಸನ್ನಿವೇಶದ ಬಗ್ಗೆ ಚಿಂತಿಸುವಾಗ ಮತ್ತು ಮತದಾರರು ತಮ್ಮ ಪ್ರತಿನಿಧಿಗಳನ್ನು ಆಯ್ಕೆ ಮಾಡುವ ಆದ್ಯತೆಯ ಪರಿಮಳವನ್ನು ಅನುಭವಿಸುತ್ತಿರುವಾಗ, ನನಗೆ ನೆನಪಿಗೆ ಬಂದದ್ದು ಅಮೇರಿಕದ ಸಂವಿಧಾನವನ್ನು ತಿದ್ದುಪಡಿ ಮಾಡಿದ ಅಮೇರಿಕನ್ ಕಾನೂನು ರೂಪಿಸುವ ಜನಪ್ರತಿನಿಧಿಗಳ ಬುದ್ಧಿವಂತಿಕೆಯ ಬಗ್ಗೆ. ಅಮೇರಿಕದ ಅಧ್ಯಕ್ಷರ ಅವಧಿಯನ್ನು ಒಬ್ಬ ವ್ಯಕ್ತಿಗೆ ಕೇವಲ ಎರಡು ಅವಧಿಗೆ ಸೀಮಿತಗೊಳಿಸಲಾಗಿದೆ. ಈಗ ಯಾವುದೇ ವ್ಯಕ್ತಿ ಎರಡು ಅವಧಿಗಿಂತ ಹೆಚ್ಚು ಕಾಲ ಅಮೆರಿಕದ ಅಧ್ಯಕ್ಷರ ಹುದ್ದೆಯನ್ನು ಹೊಂದುವಂತಿಲ್ಲ. ನಮ್ಮದು ಪ್ರಜಾಪ್ರಭುತ್ವದ ಸಂಸದೀಯ (Parliamentary) ರೂಪವಾಗಿರುವುದರಿಂದ, ಅಮೆರಿಕದ ಅಧ್ಯಕ್ಷೀಯ (Presidential) ಸ್ವರೂಪಕ್ಕಿಂತ ಭಿನ್ನವಾಗಿದೆ. ನಮ್ಮಲ್ಲಿಯೂ ಒಬ್ಬ ವ್ಯಕ್ತಿ ಎರಡು ಅವಧಿಗಿಂತ ಹೆಚ್ಚು ಅವಧಿಗೆ ಪ್ರಧಾನಮಂತ್ರಿಯಾಗುವುದನ್ನು ನಿರ್ಬಂಧಿಸಬಹುದು. ಹೇಳಬೇಕೆಂದರೆ ಪಂಡಿತ್ ನೆಹರು ಅವರು ಮೂರನೇ ಅವಧಿಗೆ ಪ್ರಧಾನಿಯಾಗಿ ಆಯ್ಕೆಯಾದಾಗಲೇ ಈ ಪರಿಕಲ್ಪನೆಯ ಬಗ್ಗೆ ಮಾತನಾಡಿದ್ದರಂತೆ. ಆದರೆ ಅವರ ಸುತ್ತಲಿನ ಹೊಗಳುಭಟ್ಟರು ನೆಹರೂ ಅವರ ಈ ಮಹಾನ್ ಆದರ್ಶ ಪರಿಕಲ್ಪನೆಯನ್ನು ತಳ್ಳಿಹಾಕಿದರು!

ಕೆಲವು ಟಿವಿ ಚಾನೆಲ್‌ಗಳ ಪ್ರಕಾರ, ಈ ರೀತಿಯ ಅನೈತಿಕ ರಾಜಕೀಯವನ್ನು ಮಾಡುವ ಪ್ರಯತ್ನವನ್ನು ಕಾಂಗ್ರೆಸ್ ನೇತೃತ್ವದ ಐಎನ್‌ಡಿಐಎ ಮೈತ್ರಿಯು ಮಾಡಿತ್ತಂತೆ. ಹಾಲಿ ಎನ್‌ಡಿಎ ಮೈತ್ರಿಕೂಟದ ಪಾಲುದಾರರಾದ ಜೆಡಿಯುನ ನಿತೀಶ್ ಕುಮಾರ್ ಮತ್ತು ಟಿಡಿಪಿಯ ಎನ್. ಚಂದ್ರಬಾಬು ನಾಯ್ಡು ಅವರ ಭೇಟಿಗಾಗಿ ತಮ್ಮ ರಾಯಭಾರಿಗಳನ್ನು ಕಳುಹಿಸಿದ್ದರಂತೆ. ಈ ಇಬ್ಬರ ಬೆಂಬಲದೊಂದಿಗೆ ಮಾತ್ರ ಈಗ ಸ್ಥಿರ ಸರ್ಕಾರವನ್ನು ರಚಿಸಬಹುದಾಗಿದೆ. ಬಿಜೆಪಿಗೆ, ಅದೃಷ್ಟವಶಾತ್ ಈ ಇಬ್ಬರು ತಮ್ಮ ಚುನಾವಣಾ ಪೂರ್ವ ಒಪ್ಪಂದದ ಬದ್ಧತೆಯಂತೆ ನಡೆದುಕೊಳ್ಳುವುದಾಗಿ ವಾಗ್ದಾನ ಮಾಡಿದ್ದಾರೆ. ಇದು ಮತ್ತೊಮ್ಮೆ ಮೋದಿ ಪ್ರಧಾನಿಯಾಗಿ ಎನ್‌ಡಿಎ ಸರ್ಕಾರವನ್ನು ರಚಿಸಲು ದಾರಿ ಮಾಡಿಕೊಟ್ಟಿದೆ. ಆದರೆ ಕೇಂದ್ರದಲ್ಲಿ ಹಿಂದೆಲ್ಲಾ ಈ ರೀತಿಯ ಸಮ್ಮಿಶ್ರ ಸರ್ಕಾರ ರಚಿಸುವಾಗ ಇವರಿಬ್ಬರು ಆಡಿದ ಮಾತು, ನಡೆದುಕೊಂಡ ರೀತಿ, ಅವರಿಬ್ಬರ ರಾಜಕೀಯ ಆಟವನ್ನು ಅವಲೋಕಿಸಿದರೆ, ಅವರು ಒಕ್ಕೂಟದಿಂದ ಹೊರ ಬಂದರೂ ಆಶ್ಚರ್ಯಪಡಬೇಕಾಗಿಲ್ಲ. ಒಂದೊಮ್ಮೆ ಅವರು ಐಎನ್‌ಡಿಐಎ ಒಕ್ಕೂಟದ ಆಮಿಷಕ್ಕೆ ಬಲಿಯಾಗಿ ಹೊರ ನಡೆದರೂ ನಡೆಯಬಹುದು. 1989, 1996 ಮತ್ತು 2004ರಲ್ಲಿನ ಬೆಳವಣಿಗೆಗಳ ನೆನಪಿಸಿಕೊಂಡರೆ ಸಾಕು.

ಆಗಾದರೆ, ಪ್ರಧಾನಿ ಮೋದಿ ಅವರು ಸರಕಾರವನ್ನು ಉಳಿಸಿಕೊಳ್ಳುವುದು ಕ್ಲಿಷ್ಟಕರವಾಗಿರುತ್ತದೆ. ಮೋದಿಯವರು ಹ್ಯಾಟ್ರಿಕ್ ಪ್ರಧಾನಿಯಾಗಬಹುದು. ಆದರೆ, 2014ರಲ್ಲಿ ದೇಶಕ್ಕೆ ಮಾದರಿ ಆಡಳಿತವನ್ನು ಜಾರಿಗೆ ತಂದವರು. ನಮ್ಮ ದೇಶದ ರಕ್ಷಣೆ, ಆಂತರಿಕ ಭದ್ರತೆ, ಜಮ್ಮು ಮತ್ತು ಕಾಶ್ಮೀರಕ್ಕೆ ಕಲ್ಪಿಸಿದ್ದ ವಿಶೇಷ ಸ್ಥಾನಮಾನವನ್ನು ತೆಗೆದು ಹಾಕಿದ್ದು, ಹೇಯ ವಸಾಹತುಶಾಹಿ ಕಾನೂನುಗಳನ್ನು ತೆಗೆದು ಹಾಕಿದ್ದು, 1,000 ವರ್ಷಗಳ ವಿದೇಶಿಯರ ಆಳ್ವಿಕೆಯ ಕುರುಹುಗಳನ್ನು ಅಳಿಸಿ ಹಾಕಿದ್ದು ಮೋದಿಯವರ ಆಡಳಿತದ ವೈಖರಿ, ಶ್ರೇಷ್ಠತೆ. ಪರಕೀಯರು ನೆಲಸಮ ಮಾಡಿದ ನಮ್ಮ ಪಾರಂಪರಿಕತೆ, ದೇಗುಲಗಳನ್ನು ಮತ್ತೆ ಪಡೆದುಕೊಳ್ಳುವುದರ ಜೊತೆಗೆ ಸಿಎಎ, ಯುಸಿಸಿ, ಒಂದು ರಾಷ್ಟ್ರ, ಒಂದು ಚುನಾವಣೆ ಇತ್ಯಾದಿ ಕಾನೂನುಗಳನ್ನು ತಂದು ಭಾರತವನ್ನು ಬೆಳಗಿಸಲು ಈ ಮೂರನೇ ಅವಧಿಯಲ್ಲಿ ಮೋದಿಯವರಿಗೆ ಅವಕಾಶವಿದೆ.

ಅದೇನೇ ಇರಲಿ, ಈ 76 ವರ್ಷಗಳ ಪ್ರಜಾಪ್ರಭುತ್ವದಲ್ಲಿನ ಪತ್ರಕರ್ತ ಹಾಗೂ ಹಿರಿಯ ನಾಗರಿಕನಾಗಿ ನಾನು ಕಲಿತ ಮೊದಲ ಪಾಠವೆಂದರೆ ಚುನಾವಣಾ ಫಲಿತಾಂಶಗಳನ್ನು ಮುನ್ಸೂಚಿಸುವ **ಜ್ಯೋತಿಷ್ಯ** ಮತ್ತು **ಎಕ್ಸಿಟ್ ಪೋಲ್** (ಸಮೀಕ್ಷಾ ವರದಿ) ಅನ್ನು ನಂಬಬಾರದು. ಅವು ಸಾಕಷ್ಟು ಅಪೂರ್ಣ ಹಾಗೂ ತಪ್ಪು ಮಾಹಿತಿಗಳನ್ನು ಆಧರಿಸಿರುವುದರಿಂದ ಈ ಎರಡೂ ಸುಳ್ಳು ಭವಿಷ್ಯವನ್ನು ಹೇಳುತ್ತವೆ ಎಂದು ನಾನು ಭಾವಿಸುತ್ತೇನೆ.

ಇದೇ 2024ರ ಸಂಸತ್ ಚುನಾವಣೆಯ ನಂತರ ಮೋದಿ ಅವರು 3ನೇ ಬಾರಿಗೆ ಪ್ರಧಾನಿ ಕಚೇರಿಯನ್ನು ಪ್ರವೇಶಿಸುವ ಹೊಸ್ತಿಲಲ್ಲಿದ್ದಾರೆ ಎಂದು ನಾನು ಏ.21, 2024ರ ಇದೇ ಅಂಕಣದಲ್ಲಿ (ನರೇಂದ್ರ ಮೋದಿ: ಭಾರತದ ನವೋದಯ ಪ್ರಧಾನಿ) ಉಲ್ಲೇಖಿಸಿದ್ದೆ. ದಿಗ್ಭ್ರಮೆಗೊಳಿಸುವ ಈ ಚುನಾವಣಾ ಫಲಿತಾಂಶ ಮತ್ತು ಐಎನ್‌ಡಿಐಎ ಮೈತ್ರಿಕೂಟದ ಅತಿರೇಕದ ಸವಾಲುಗಳ ನಡುವೆಯೂ, ಮೋದಿ ಅವರು ಮೂರನೇ ಬಾರಿಗೆ ಎಲ್ಲಾ ಅಡೆತಡೆಗಳ ದಾಟಿ ಪ್ರಧಾನಿ ಕಚೇರಿಯನ್ನು ಪ್ರವೇಶಿಸುತ್ತಾರೆ ಎಂದು ನಾನು ಭಾವಿಸುತ್ತೇನೆ.

ನಾನು, ಪ್ರಸ್ತುತ ಚುನಾವಣಾ ಸನ್ನಿವೇಶದ ಬಗ್ಗೆ ಚಿಂತಿಸುವಾಗ ಮತ್ತು ಮತದಾರರು ತಮ್ಮ ಪ್ರತಿನಿಧಿಗಳನ್ನು ಆಯ್ಕೆ ಮಾಡುವ ಆದ್ಯತೆಯ ಪರಿಮಳವನ್ನು ಅನುಭವಿಸುತ್ತಿರುವಾಗ, ನನಗೆ ನೆನಪಿಗೆ ಬಂದದ್ದು ಅಮೇರಿಕದ ಸಂವಿಧಾನವನ್ನು ತಿದ್ದುಪಡಿ ಮಾಡಿದ ಅಮೇರಿಕನ್ ಕಾನೂನು ರೂಪಿಸುವ ಜನಪ್ರತಿನಿಧಿಗಳ ಬುದ್ಧಿವಂತಿಕೆಯ ಬಗ್ಗೆ ಅಮೇರಿಕದ ಅಧ್ಯಕ್ಷರ ಅವಧಿಯನ್ನು, ಒಬ್ಬ ವ್ಯಕ್ತಿಗೆ ಕೇವಲ ಎರಡು ಅವಧಿಗೆ ಸೀಮಿತಗೊಳಿಸಲಾಗಿದೆ. ಈಗ ಯಾವುದೇ ವ್ಯಕ್ತಿ ಎರಡು ಅವಧಿಗಿಂತ ಹೆಚ್ಚು ಕಾಲ ಅಮೆರಿಕದ ಅಧ್ಯಕ್ಷರ ಹುದ್ದೆಯನ್ನು ಹೊಂದುವಂತಿಲ್ಲ. ಇವರದು ಅಧ್ಯಕ್ಷೀಯ ವ್ಯವಸ್ಥೆ ಬಿಡಿ!

ನಮ್ಮದು ಪ್ರಜಾಪ್ರಭುತ್ವದ ಸಂಸದೀಯ (Parliamentary) ರೂಪವಾಗಿರುವುದರಿಂದ, ಅಮೆರಿಕದ ಅಧ್ಯಕ್ಷೀಯ (Presidential) ಸ್ವರೂಪಕ್ಕಿಂತ ಭಿನ್ನವಾಗಿದೆ. ನಮ್ಮಲ್ಲಿಯೂ ಒಬ್ಬ ವ್ಯಕ್ತಿ ಎರಡು ಅವಧಿಗಿಂತ ಹೆಚ್ಚು ಅವಧಿಗೆ ಪ್ರಧಾನಮಂತ್ರಿಯಾಗುವುದನ್ನು ನಿರ್ಬಂಧಿಸಬಹುದು. ಹೇಳಬೇಕೆಂದರೆ, ಪಂಡಿತ್ ನೆಹರು ಅವರು ಮೂರನೇ ಅವಧಿಗೆ ಪ್ರಧಾನಿಯಾಗಿ ಆಯ್ಕೆಯಾದಾಗಲೇ ಈ ಪರಿಕಲ್ಪನೆಯ ಬಗ್ಗೆ ಪ್ರಸ್ತಾಪಿಸಿದ್ದರಂತೆ. ಆದರೆ ಅವರ ಸುತ್ತಲಿನ ಹೊಗಳು ಭಟರು ನೆಹರೂ ಅವರ ಈ ಮಹಾನ್ ಆದರ್ಶ ಪರಿಕಲ್ಪನೆಯನ್ನು ತಳ್ಳಿ ಹಾಕಿದರು!

ಕೊನೆಯ ಮಾತು: ಈ ಬಾರಿಯ, 2024ರ ಸಂಸತ್ ಚುನಾವಣೆಯ ಫಲಿತಾಂಶ ಬಂದ ಮೇಲೆ ನನಗೆ ಕೆಲವರು ಕಳುಹಿಸಿದ ವಾಟ್ಸಾಪ್‌ಗಳು ನನ್ನ ದೇಶದ ಭವಿಷ್ಯದ ಬಗ್ಗೆ ನನ್ನಲ್ಲಿ ಭಯ ಹುಟ್ಟಿಸಿಬಿಟ್ಟಿದ್ದವು. ವಿಶೇಷವಾಗಿ ದೇಶದ ಬಹುಸಂಖ್ಯಾತರ ಬಗ್ಗೆ ಕೆಲವು ಸಂದೇಶಗಳು ಹಾಗೂ ಉಪದೇಶಗಳು ಈ ರೀತಿ ಇವೆ.

*** ಕೊಯಮತ್ತೂರಿನಲ್ಲಿ ಬಿಜೆಪಿಯಿಂದ ಸ್ಪರ್ಧಿಸಿ ಸೋತ... ಅಣ್ಣಾಮಲೈ ಬಗ್ಗೆ –ವಿದ್ಯಾವಂತರಿಗೆ ರಾಜಕೀಯದಲ್ಲಿ ಬೆಲೆ ಇಲ್ಲ. ನಮ್ಮ ಜನರಿಗೆ ಬೇಕಾಗಿರುವುದು ಗುಲಾಮಗಿರಿ, ಬಿಟ್ಟಿ ಭಾಗ್ಯ, ಸುಳ್ಳು ಭರವಸೆ ಹಾಗೂ ಜಾತಿ. ಸಾರಿ ಬಾಸ್. ನಮ್ಮ ಜನ ಇರೋದೇ ಹೀಗೆ!**

*** ಆಯೋಧ್ಯೆಯಲ್ಲಿ ಬಿಜೆಪಿ ಸೋತ ಬಗ್ಗೆ: ರಾಮನಿಗಿಂತ ಬಾಬರ್ ಮೇಲೆ ಒಲವು ತೋರಿಸಿದ ಉತ್ತರ ಪ್ರದೇಶದ ಜನ!**

*** ರಾಮಜನ್ಮಭೂಮಿಯಲ್ಲೇ ರಾಮ ಮಂದಿರ ಕಟ್ಟಲು ಏಕೆ 500 ವರ್ಷ ಬೇಕಾಯಿತು. ಈಗ ಅರ್ಥವಾಯಿತಾ!?**

ನಮ್ಮ ಚುನಾವಣಾ ಪ್ರಕ್ರಿಯೆಯಲ್ಲಿ ಅಭ್ಯರ್ಥಿಗಳ ಅರ್ಹತೆಯನ್ನು ನಿರ್ಣಯಿಸುವಲ್ಲಿ ಕೆಲವು ತೀಕ್ಷ್ಣವಾದ ಕ್ರಮವನ್ನು ಕಾನೂನಿನನ್ವಯ ಅಳವಡಿಸಬೇಕೆಂದು ನನಗೆ ಈ ಚುನಾವಣೆಯ ಫಲಿತಾಂಶ ನೋಡಿದ ಮೇಲೆ ಅನ್ನಿಸುತ್ತದೆ. ಕೆಲವು ಟಿವಿ ಚಾನಲ್‌ಗಳು, ಅಂಕಣಕಾರರು ಅದನ್ನೇ ಹೇಳುತ್ತಾರೆ.

'ಜ್ಯೋತಿಷಿ' ಮತ್ತು 'ಎಕ್ಸಿಟ್ ಪೋಲ್' ತಜ್ಞರು ಈ ಬಾರಿಯ ಸಂಸತ್ ಚುನಾವಣೆಯಲ್ಲಿ ಬಿಜೆಪಿ ಅತ್ಯಧಿಕ ಸ್ಥಾನಗಳನ್ನು ಪಡೆಯುವುದಾಗಿ ಭವಿಷ್ಯ ನುಡಿದ/ಬರೆದ ವಿಚಾರವಾಗಿ ಸೋಮವಾರ ತೀಕ್ಷ್ಣವಾಗಿ ಪ್ರತಿಕ್ರಿಯಿಸಿದ್ದ ಕಾಂಗ್ರೆಸ್ ನಾಯಕಿ ಶ್ರೀಮತಿ ಸೋನಿಯಾ ಗಾಂಧಿ ಹೇಳುತ್ತಾರೆ: "ಎಕ್ಸಿಟ್ ಪೋಲ್‌ಗಳಲ್ಲಿ ತೋರಿಸುತ್ತಿರುವುದಕ್ಕಿಂತ ನಮ್ಮ ಫಲಿತಾಂಶಗಳು ಸಂಪೂರ್ಣ ವಿರುದ್ಧವಾಗಿರುತ್ತವೆ ಎಂಬ ಭರವಸೆ ನಮ್ಮದಾಗಿದೆ. ನಾವು ಕಾಯಬೇಕು, ಕಾದು ನೋಡಬೇಕು". ಈಗಿನ ಫಲಿತಾಂಶ ನೋಡಿದಾಗ ಸೋನಿಯಾ ಗಾಂಧಿ ಅವರು ಚುನಾವಣಾ ಫಲಿತಾಂಶದ ಭವಿಷ್ಯದ ಬಗ್ಗೆ ಸರಿಯಾಗಿಯೇ ನುಡಿದಿದ್ದಾರೆ ಎಂಬುದು ಮನದಟ್ಟಾಗುತ್ತಿದೆ.

ಇಂದು ನರೇಂದ್ರ ಮೋದಿ ಎನ್‌ಡಿಎ ಸಂಸದೀಯ ಪಕ್ಷದ ನಾಯಕರಾಗಿ ಆಯ್ಕೆಯಾದ ನಂತರ ಪ್ರತಿಕ್ರಿಯಿಸಿರುವ ಕಾಂಗ್ರೆಸ್ ನಾಯಕ ಜಯರಾಂ ರಮೇಶ್ ಅವರು, ಚಂದ್ರಬಾಬು ನಾಯ್ಡು ಹಾಗೂ ನಿತೀಶ್ ಕುಮಾರ್ ಜೊತೆ ಸೇರಿ ಸರ್ಕಾರ ರಚಿಸುತ್ತಿರುವ ಮೋದಿಯವರನ್ನು **"ಮೂರನೇ ಒಂದು ಭಾಗದ ಪ್ರಧಾನಿ"** ಎಂದು ಲೇವಡಿ ಮಾಡಿರುವುದು ಭವಿಷ್ಯದ ರಾಜಕೀಯ ಚಿತ್ರಣವನ್ನ ಬಿಂಬಿಸುವಂತಿದೆ.

ಒಟ್ಟಾರೆ, ಕಾಂಗ್ರೆಸ್ ಸೋಲಿನಲ್ಲೂ ಗೆಲುವು ಕಂಡಿದೆ. ಇತ್ತ ಬಿಜೆಪಿ ಅಧಿಕಾರ ಗದ್ದುಗೆ ಏರಲು ಸನ್ನದ್ಧವಾಗಿದೆ. ಆದರೆ ಇಷ್ಟಕ್ಕೆ ಆಟ ಮುಗಿದಿಲ್ಲ. ಬಿಜೆಪಿ ಪಾಲಿಗೆ ಆಟ ಈಗಷ್ಟೇ ಶುರುವಾಗಿದೆ.

Email:voice@starofmysore.com

ಭಾರತದ ಶಾಸ್ತ್ರೀಯ ಭಾಷೆಗಳ ರಾಷ್ಟ್ರೀಯ ಸಮ್ಮೇಳನ

ಮೈಸೂರು, ಜೂ.7– ಭಾರತೀಯ ಭಾಷಾ ಸಂಸ್ಥಾನದ ವತಿಯಿಂದ ಜೂನ್ 10 ರಿಂದ 12 ರವರೆಗೆ ಮೂರು ದಿನಗಳ ಭಾರತದ ಶಾಸ್ತ್ರೀಯ ಭಾಷೆಗಳ ರಾಷ್ಟ್ರೀಯ ಸಮ್ಮೇಳನ (ಸಿಸಿಎಲ್‌ಐ–24) ವನ್ನು ಸಂಸ್ಥೆಯ ಪ್ರಿವ್ಯೂ ಥಿಯೇಟರ್‌ನಲ್ಲಿ ಹಮ್ಮಿಕೊಳ್ಳಲಾಗಿದೆ.

ಸಮ್ಮೇಳನದ ಉದ್ಘಾಟನಾ ಸಮಾರಂಭವು ಜೂ.10 ರಂದು ಬೆಳಗ್ಗೆ 10 ಗಂಟೆಗೆ ನಡೆಯಲಿದ್ದು, ಗುರ್ಗಾಂವ್‌ನ ಅಮಿಟಿ ವಿಶ್ವವಿದ್ಯಾಲಯದ ಭಾಷಾಶಾಸ್ತ್ರ ವಿಭಾಗದ ಮುಖ್ಯಸ್ಥ ಪ್ರೊ. ಉದಯ ನಾರಾಯಣ ಸಿಂಗ್ ಉದ್ಘಾಟನಾ ಭಾಷಣವನ್ನು ನೆರವೇರಿಸಲಿದ್ದಾರೆ. ಭಾರತೀಯ ಭಾಷಾ ಸಂಸ್ಥಾನದ ನಿರ್ದೇಶಕ ಪ್ರೊ.ಶೈಲೇಂದ್ರ ಮೋಹನ್ ಉದ್ಘಾಟನಾ ಸಮಾರಂಭದ ಅಧ್ಯಕ್ಷತೆಯನ್ನು ವಹಿಸಲಿದ್ದಾರೆ ಎಂದು ಭಾರತೀಯ ಭಾಷಾ ಸಂಸ್ಥಾನದ ಸಹಾಯಕ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy News papers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com, website: www.mysurumithra.com

ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಜೂನ್ 8 ಶನಿವಾರ 2024

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

45

ಸಂಪುಟ: 45 | ಸಂಚಿಕೆ: 53 | ಪುಟಗಳು: 12
ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4

ಕೆಬಿಜಿಯವರ



ಭೂಮಂತ್ರ...

ಎರಡು ಆಟದಲ್ಲಿ ಗೆದ್ದು ಮೂರನೇ ಆಟದಲ್ಲಿ ಸೋತು–ಗೆದ್ದ ಪ್ರಧಾನಿ ಮೋದಿ

ಹೌದು, ಆಟ ಮುಗಿದಿದೆ. ಬಿಜೆಪಿ ಗೆದ್ದಿದೆ ಆದರೆ...

■ ಪುಟ–4

ನಾಳೆ ಸಂಜೆ 7.15ಕ್ಕೆ ಪ್ರಧಾನಿಯಾಗಿ ಮೋದಿ ಪ್ರಮಾಣ

● ಸರ್ಕಾರ ರಚನೆಗೆ ರಾಷ್ಟ್ರಪತಿಗಳಿಂದ ಆಹ್ವಾನ ● ಎನ್‌ಡಿಎ ಸಂಸದೀಯ ಪಕ್ಷದ ನಾಯಕರಾಗಿ ಮೋದಿ ಸರ್ವಾನುಮತದ ಆಯ್ಕೆ ● ಮೋದಿಯವರಲ್ಲಿ ಪೂರ್ಣ ವಿಶ್ವಾಸ ವ್ಯಕ್ತಪಡಿಸಿದ ಮಿತ್ರ ಪಕ್ಷಗಳ ನಾಯಕರಾದ ಚಂದ್ರಬಾಬು ನಾಯ್ಡು, ಪವನ್ ಕಲ್ಯಾಣ್, ಹೆಚ್.ಡಿ.ಕುಮಾರಸ್ವಾಮಿ, ನಿತೀಶ್ ಕುಮಾರ್ ● ಅಡ್ವಾನಿ, ಜೋಷಿ ಆಶೀರ್ವಾದ ಪಡೆದ ಮೋದಿ

ನವದೆಹಲಿ, ಜೂ.7–ನರೇಂದ್ರ ಮೋದಿಯವರು ಜೂನ್ 9ರಂದು ಸಂಜೆ 7.15ಕ್ಕೆ ಪ್ರಧಾನಮಂತ್ರಿಯಾಗಿ ಪದಗ್ರಹಣ ಮಾಡಲಿದ್ದಾರೆ ಎಂದು ರಾಷ್ಟ್ರಪತಿ ಭವನದ ಪ್ರಕಟಣೆ ತಿಳಿಸಿದೆ.

ಶುಕ್ರವಾರ ನರೇಂದ್ರ ಮೋದಿಯವರು ರಾಷ್ಟ್ರಪತಿ ದ್ರೌಪತಿ ಮುರ್ಮು ಅವರನ್ನು ಭೇಟಿ ಮಾಡಿ ಸರ್ಕಾರ ರಚನೆಗೆ ಹಕ್ಕು ಮಂಡಿಸಿದರು. ರಾಷ್ಟ್ರಪತಿಗಳು ಸರ್ಕಾರ ರಚನೆಗೆ ಆಹ್ವಾನಿಸುತ್ತಿದ್ದಂತೆ ಮೋದಿ ಪದಗ್ರಹಣದ ದಿನಾಂಕ ಮತ್ತು ಸಮಯ ಪ್ರಕಟಣೆ ಹೊರಬಿದ್ದಿದೆ. ಮೋದಿ ರಾಷ್ಟ್ರಪತಿ ಭೇಟಿ ವೇಳೆ ಅವರೊಂದಿಗೆ ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ.ನಡ್ಡಾ, ಚಂದ್ರಬಾಬು ನಾಯ್ಡು, ನಿತೀಶ್ ಕುಮಾರ್ ಏಕನಾಥ್ ಶಿಂಧೆ ಮುಂತಾದವರಿದ್ದರು. ರಾಷ್ಟ್ರಪತಿಗಳ ಭೇಟಿಗೂ ಮುನ್ನ ನರೇಂದ್ರ ಮೋದಿಯವರು ಬಿಜೆಪಿ ಹಿರಿಯ ನಾಯಕರಾದ ಎಲ್.ಕೆ.ಅಡ್ವಾಣಿ, ಮುರಳಿ ಮನೋಹರ್ ಜೋಷಿ ಮತ್ತು ಮಾಜಿ ರಾಷ್ಟ್ರಪತಿ ರಾಮನಾಥ್ ಕೋವಿಂದ್ ಅವರನ್ನು ಭೇಟಿ ಮಾಡಿ ಆಶೀರ್ವಾದ ಪಡೆದರು.

ಇದಕ್ಕೂ ಮುನ್ನ ನವದೆಹಲಿಯ ಸಂಸತ್ ಹಾಲ್‌ನಲ್ಲಿ ನಡೆದ ಎನ್‌ಡಿಎ ಮೈತ್ರಿ ಕೂಟದ ಸಂಸದೀಯ ಸಭೆಯಲ್ಲಿ ನರೇಂದ್ರ ಮೋದಿ ಎನ್‌ಡಿಎ ಸಂಸದೀಯ ನಾಯಕರಾಗಿ ಸರ್ವಾನುಮತದಿಂದ ಆಯ್ಕೆಯಾದರು. ● 7ನೇ ಪುಟಕ್ಕೆ



ಹಂಗಾಮಿ ಪ್ರಧಾನಿ ಮೋದಿ ಶುಕ್ರವಾರ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರನ್ನು ಭೇಟಿಯಾಗಿ ಸರ್ಕಾರ ರಚನೆ ಹಕ್ಕು ಪ್ರತಿಪಾದಿಸಿದರು.

ವಿಶ್ವಾಸದಿಂದ ದೇಶ ಮುನ್ನಡೆಸುತ್ತೇನೆ : ಮೋದಿ

ನವದೆಹಲಿ,ಜೂ.7–ಎನ್‌ಡಿಎ ಸಭೆಯಲ್ಲಿ ನರೇಂದ್ರ ಮೋದಿ ಸಂಸದೀಯ ನಾಯಕರಾಗಿ ಆಯ್ಕೆಯಾದರು. ಬಳಿಕ ಮಾತನಾಡಿದ ಮೋದಿ, ವಿಶ್ವಾಸದೊಂದಿಗೆ ದೇಶವನ್ನು ಮುನ್ನಡೆಸುತ್ತೇನೆ ಎಂದು ಭರವಸೆ ನೀಡಿದ್ದಾರೆ.

ನಮ್ಮ ಎನ್‌ಡಿಎ ಒಕ್ಕೂಟದ ಎಲ್ಲಾ ಕಾರ್ಯಕರ್ತರು ಬೇಸಿಗೆಯ ಉರಿ ಬಿಸಿನಲ್ಲಿ ಅವಿರತ ಪರಿಶ್ರಮ ವಹಿಸಿದ್ದಾರೆ. ಈ ಸೆಂಟ್ರಲ್ ಹಾಲ್‌ನಿಂದ ಆ ಎಲ್ಲಾ ಕಾರ್ಯಕರ್ತರಿಗೆ ಪ್ರಣಾಮ ಸಲ್ಲಿಸುತ್ತೇನೆ. ಎಲ್ಲಾ ಎನ್‌ಡಿಎ ಪಕ್ಷಗಳು ಸಂಸದೀಯ ನಾಯಕನಾಗಿ ಆಯ್ಕೆ ಮಾಡಿದ ನಿಮ್ಮೆಲ್ಲರಿಗೂ ಆಭಾರಿಯಾಗಿದ್ದೇನೆ ಎಂದು ಮೋದಿ ಹೇಳಿದ್ದಾರೆ. 2019ರಲ್ಲಿ ಇದೇ ಸದನದಲ್ಲಿ ಮಾತನಾಡಿದ ವೇಳೆ ನಾನು ಒಂದು ಮಾತು ಹೇಳಿದ್ದೆ, ವಿಶ್ವಾಸದ ಭರವಸೆ ನೀಡಿದ್ದೆ. ಇದೀಗ ಮತ್ತೆ ಅದೇ ವಿಶ್ವಾಸವನ್ನು ಪುನರುಚ್ಚರಿಸುತ್ತಿದ್ದೇನೆ. ವಿಶ್ವಾಸ ಇಷ್ಟು ಗಟ್ಟಿಯಾಗಿರುವ ಕಾರಣ ಇದೀಗ ಒಗ್ಗಟ್ಟಿನಿಂದ ನಾವು ಮುನ್ನಡೆಯುತ್ತಿದ್ದೇವೆ ಎಂದು ಮೋದಿ ಹೇಳಿದ್ದಾರೆ. ಆದಿವಾಸಿ ಹೆಚ್ಚಿರುವ 10 ರಾಜ್ಯಗಳ ಪೈಕಿ ● 7ನೇ ಪುಟಕ್ಕೆ

ಮಾನನಷ್ಟ ಮೊಕದ್ದಮೆ ಪ್ರಕರಣ ಬೆಂಗಳೂರು ಕೋರ್ಟ್‌ನಿಂದ ರಾಹುಲ್ ಗಾಂಧಿಗೆ ಜಾಮೀನು



ಬೆಂಗಳೂರು, ಜೂ.7(ಕೆಎಂಶಿ)– ಬಿಜೆಪಿ ಹೂಡಿರುವ ಮಾನನಷ್ಟ ಮೊಕದ್ದಮೆ ಪ್ರಕರಣದಲ್ಲಿ ಕಾಂಗ್ರೆಸ್ ಅಧಿನಾಯಕ ರಾಹುಲ್ ಗಾಂಧಿ ಅವರಿಗೆ ನಗರದ 42ನೇ ಎಸಿಎಂಎಂ ನ್ಯಾಯಾಲಯ ಷರತ್ತುಬದ್ಧ ಜಾಮೀನು ಮಂಜೂರು ಮಾಡಿದೆ.

ಜಾಮೀನು ಮಂಜೂರು ನಂತರ ಪ್ರಕರಣದ ಮುಂದಿನ ವಿಚಾರಣೆಯನ್ನು ಜೂನ್ 30ಕ್ಕೆ ಮುಂದೂಡಿತು. ಇತ್ತೀಚೆಗೆ ನಡೆದ ಲೋಕಸಭಾ ಚುನಾವಣೆಯಲ್ಲಿ ಸೋಲನನುಭವಿಸಿದ ಕಾಂಗ್ರೆಸ್ ಅಭ್ಯರ್ಥಿ ಹಾಗೂ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಸಹೋದರ ಡಿ.ಕೆ. ಸುರೇಶ್ ಅವರು ರಾಹುಲ್ ಗಾಂಧಿಗೆ 75 ಲಕ್ಷ ರೂ. ಮೌಲ್ಯದ ಶ್ಯೂರಿಟಿ ಒದಗಿಸಿದರು, ಕಾಗದ–ಪತ್ರಗಳಿಗೆ ● 6ನೇ ಪುಟಕ್ಕೆ

ಪದವೀಧರ, ಶಿಕ್ಷಕರ ಕ್ಷೇತ್ರದಿಂದ ಕಾಂಗ್ರೆಸ್ 3, ಎನ್‌ಡಿಎಯ 3 ವಿಧಾನಪರಿಷತ್‌ಗೆ ಆಯ್ಕೆ

ಬೆಂಗಳೂರು, ಜೂ.7(ಕೆಎಂಶಿ)– ಪದವೀಧರ ಹಾಗೂ ಶಿಕ್ಷಕರ ಕ್ಷೇತ್ರದಿಂದ ವಿಧಾನ ಪರಿಷತ್ತಿನ ಆರು ಸ್ಥಾನಗಳಿಗೆ ನಡೆದ ಚುನಾವಣೆಯಲ್ಲಿ ಪ್ರಜ್ಞಾವಂತ ಮತದಾರರು ಆಡಳಿತಾರೂಢ ಕಾಂಗ್ರೆಸ್ ಕೈಹಿಡಿದಿದ್ದಾರೆ.

ಆರು ಕ್ಷೇತ್ರಗಳಲ್ಲಿ ಕಾಂಗ್ರೆಸ್ ಮೂರರಲ್ಲೂ, ಎನ್‌ಡಿಎ ಮೈತ್ರಿಕೂಟದ ಜೆಡಿಎಸ್ ಎರಡು ಹಾಗೂ ಬಿಜೆಪಿ ಒಂದರಲ್ಲಿ ಜಯಭೇರಿ ಬಾರಿಸಿವೆ.

ಗ್ಯಾರಂಟಿ ಯೋಜನೆಗಳನ್ನು ಮುಂದಿಟ್ಟುಕೊಂಡು ಲೋಕಸಭಾ ಚುನಾವಣೆಯಲ್ಲಿ ಮತ ಕೇಳಿದ ಕಾಂಗ್ರೆಸ್‌ಗೆ ಅದರ ಲಾಭ ದೊರೆಯಲಿಲ್ಲ. ರಾಜ್ಯದ 28 ಕ್ಷೇತ್ರಗಳ ಪೈಕಿ ಕಾಂಗ್ರೆಸ್‌ಗೆ ಕೇವಲ ● 6ನೇ ಪುಟಕ್ಕೆ

ಕುಮಾರಸ್ವಾಮಿ ಕೇಂದ್ರ ಸಂಪುಟ ಸೇರ್ಪಡೆ ಖಚಿತ

ಕೃಷಿ, ಗ್ರಾಮೀಣಾಭಿವೃದ್ಧಿ ಇಲ್ಲವೇ ಜಲಸಂಪನ್ಮೂಲ ಖಾತೆ ಲಭಿಸುವ ಸಾಧ್ಯತೆ

ಬೆಂಗಳೂರು, ಜೂ.7(ಕೆಎಂಶಿ)– ನರೇಂದ್ರ ಮೋದಿ ಅವರು ಮೂರನೇ ಬಾರಿಗೆ ಪ್ರಧಾನಿಯಾಗಿ ಸರ್ಕಾರ ರಚನೆ ಮಾಡುವ ಸಂದರ್ಭದಲ್ಲೇ ಹೆಚ್.ಡಿ. ಕುಮಾರಸ್ವಾಮಿ ಕೇಂದ್ರ ಸಂಪುಟ ಸೇರ್ಪಡೆಗೊಳ್ಳಲಿದ್ದಾರೆ.

ಮೋದಿ ಅವರು ಭಾನುವಾರ ಸಂಜೆ ಸರ್ಕಾರ ರಚನೆ ಮಾಡುತ್ತಿದ್ದು ಮೊದಲ ಹಂತದಲ್ಲೇ ತಮ್ಮ ಸಂಪುಟಕ್ಕೆ ಬಿಜೆಪಿ ಹಾಗೂ ಎನ್‌ಡಿಎ ಕೂಟದ ಕೆಲವರನ್ನು ಸೇರ್ಪಡೆ ಮಾಡಿಕೊಳ್ಳಲಿದ್ದಾರೆ. ಸರ್ಕಾರ ರಚನೆ ಹಾಗೂ ಮಂತ್ರಿ ಸ್ಥಾನಕ್ಕೆ ಸಂಬಂಧಿಸಿದಂತೆ ಬಿಜೆಪಿಯ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ.ನಡ್ಡ ಹಾಗೂ ಕೇಂದ್ರದ ಮಾಜಿ ಗೃಹ ಸಚಿವ ಅಮಿತ್ ಷಾ ಅವರು, ಕುಮಾರಸ್ವಾಮಿ ಅವರೊಂದಿಗೆ ಚರ್ಚಿಸಿದ್ದಾರೆ. ಚರ್ಚೆ ಸಂದರ್ಭದಲ್ಲೇ, ಸರ್ಕಾರ ರಚನೆ ವೇಳೆ ನೀವೂ ಇರುತ್ತೀರಿ ಎಂಬ ಇಂಗಿತವನ್ನು ವ್ಯಕ್ತಪಡಿಸಿರುವುದಲ್ಲದೆ, ತಮಗೆ ಜನರ ಸೇವೆ ಸಲ್ಲಿಸುವ ಇಲಾಖೆ ದೊರೆಯಲಿದೆ ಎಂಬ ಮಾಹಿತಿಯನ್ನೂ ನೀಡಿದ್ದಾರೆ.



ಕಳೆದ 5ರಂದು ನಡ್ಡ ಅವರ ಅಧ್ಯಕ್ಷತೆಯಲ್ಲಿ ನಡೆದ ಎನ್‌ಡಿಎ ಕೂಟದ ಮಿತ್ರ ಪಕ್ಷಗಳ ಸಭೆಯಲ್ಲಿ ಮೋದಿ ಅವರನ್ನು ಮತ್ತೆ ಪ್ರಧಾನಿ ಮಾಡುವ ತೀರ್ಮಾನ ಕೈಗೊಳ್ಳಲಾಗಿತ್ತು. ಸಭೆ ನಂತರ ಮೈತ್ರಿ ಕೂಟದ ಎಲ್ಲಾ ಮುಖಂಡರೊಂದಿಗೆ ನರೇಂದ್ರ ಮೋದಿ, ಅಮಿತ್ ಷಾ, ಜೆ.ಪಿ.ನಡ್ಡ ಹಾಗೂ ಬಿ.ಎಲ್.ಸಂತೋಷ್ ಅವರು ಅನೌಪಚಾರಿಕವಾಗಿ ಚರ್ಚೆ ನಡೆಸಿದ್ದರು. ಸಭೆ ಮುಗಿಸಿಕೊಂಡು ನಗರಕ್ಕೆ ಹಿಂತಿರುಗಿದ ಕುಮಾರಸ್ವಾಮಿ ಅವರು, ಇಂದು ಬೆಳಗ್ಗೆ ದೆಹಲಿಗೆ ತೆರಳಿ ಸಂಸತ್‌ನ ಸೆಂಟ್ರಲ್ ಹಾಲ್‌ನಲ್ಲಿ ಮೋದಿ ಅವರನ್ನು ಅಧಿಕೃತವಾಗಿ ನಾಯಕರನ್ನಾಗಿ ಮಾಡುವ ಸಭೆಯಲ್ಲಿ ಭಾಗವಹಿಸಿ, ಪಕ್ಷದ ಬೆಂಬಲ ವ್ಯಕ್ತಪಡಿಸಿದರು. ಭಾನುವಾರ ಕುಮಾರಸ್ವಾಮಿ ಸಚಿವರಾಗಿ ಪ್ರಮಾಣವಚನ ● 6ನೇ ಪುಟಕ್ಕೆ

ಎನ್‌ಡಿಎ ಅತ್ಯಂತ ಯಶಸ್ವಿ ಮೈತ್ರಿ

● ಮೈತ್ರಿ ಪಕ್ಷಗಳಲ್ಲಿನ ಬಾಂಧವ್ಯದ ಬಗ್ಗೆ ಹಂಗಾಮಿ ಪ್ರಧಾನಿ ಮೋದಿ ಪ್ರಸ್ತಾಪ ● ಭಾರತದ ಇತಿಹಾಸದಲ್ಲಿ ಎನ್‌ಡಿಎ ಮೈತ್ರಿ ಯಶಸ್ವಿಯಾಗಿದೆ ● ಕರ್ನಾಟಕ ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಹೇಗೆ ಬಂತು ಎಂಬುದನ್ನು ಸಣ್ಣ ಬಾಲಕನ ಕೇಳಿದರೂ ಹೇಳುತ್ತಾನೆ

ನವದೆಹಲಿ, ಜೂ.7–ಭಾರತದ ಇತಿಹಾಸದಲ್ಲಿ ಎನ್‌ಡಿಎ ಅತ್ಯಂತ ಯಶಸ್ವಿ ಮೈತ್ರಿಯಾಗಿದ್ದು, ನಮ್ಮ ಎಲ್ಲಾ ನಿರ್ಧಾರಗಳಲ್ಲಿ ಸರ್ವಾನುಮತವನ್ನು ತಲುಪುವುದು ನಮ್ಮ ಗುರಿಯಾಗಿದೆ. ಮೈತ್ರಿಯು 'ಸರ್ವ ಪಂಥ್ ಸಂಭವ್' ತತ್ವಕ್ಕೆ ಬದ್ಧವಾಗಿದೆ ಎಂದು ಹಂಗಾಮಿ ಪ್ರಧಾನಿ ನರೇಂದ್ರ ಮೋದಿಯವರು ವಿಶ್ವಾಸ ವ್ಯಕ್ತಪಡಿಸಿದ್ದಾರೆ.

ನವದೆಹಲಿಯ ಸಂಸತ್ ಸೆಂಟ್ರಲ್ ಹಾಲ್‌ನಲ್ಲಿ ಶುಕ್ರವಾರ ನಡೆದ ಎನ್‌ಡಿಎ ಸಂಸದೀಯ ಸಭೆಯಲ್ಲಿ ನಾಯಕರಾಗಿ ಸರ್ವಾನುಮತದಿಂದ ಆಯ್ಕೆಯಾದ ನಂತರ ಎನ್‌ಡಿಎ ಒಕ್ಕೂಟದ ನಾಯಕರನ್ನುದ್ದೇಶಿಸಿ ಅವರು ಮಾತನಾಡಿದರು.

ತಮ್ಮನ್ನು ಬಿಜೆಪಿಯ ನಾಯಕರಾಗಿ, ಎನ್‌ಡಿಎ ಸಂಸದೀಯ ಪಕ್ಷದ ನಾಯಕರಾಗಿ ಮತ್ತು ಲೋಕಸಭೆಯ ನಾಯಕರಾಗಿ ಆಯ್ಕೆ ಮಾಡಿದ್ದಕ್ಕಾಗಿ ಎನ್‌ಡಿಎಯ ನೂತನ ಸಂಸದರಿಗೆ ಮೋದಿ ಧನ್ಯವಾದ ಹೇಳಿದರು. ಎಲ್ಲರೂ ನನ್ನನ್ನು ಎನ್‌ಡಿಎ ನಾಯಕನನ್ನಾಗಿ ಸರ್ವಾನುಮತದಿಂದ ಆಯ್ಕೆ ಮಾಡಿರುವುದು ನನ್ನ ಅದೃಷ್ಟ, ನೀವೆಲ್ಲರೂ ನನಗೆ ಹೊಸ ಜವಾಬ್ದಾರಿಯನ್ನು ನೀಡಿದ್ದೀರಿ ಅದಕ್ಕೆ ನಾನು ತುಂಬಾ ಕೃತಜ್ಞನಾಗಿದ್ದೇನೆ. ಬಲವಾದ ನಂಬಿಕೆ ಮೇಲೆ ಸರ್ಕಾರ ನಡೆಯುತ್ತದೆ ಎಂದರು.

ಸರ್ಕಾರ ನಡೆಸಲು ಬಹುಮತ ಅಗತ್ಯ, ಪ್ರಜಾಪ್ರಭುತ್ವದ ಸ್ಥಾನವು ಒಂದು ತತ್ವವಾಗಿದೆ. ಆದರೆ ದೇಶವನ್ನು ನಡೆಸಲು ಸಾರ್ವಭೌಮತ್ವ ಬಹಳ ಮುಖ್ಯ ಎಂದು ಭಾವಿಸುತ್ತೇನೆ. ನಾವು ದೇಶವನ್ನು ಸಮರ್ಥವಾಗಿ ಮುನ್ನಡೆಸಲು ● 7ನೇ ಪುಟಕ್ಕೆ

ನೀಟ್‌ನಲ್ಲಿ ಭಾರೀ ಅಕ್ರಮದ ಶಂಕೆ; ತನಿಖೆಗೆ ಸಿಎಂ ಸಿದ್ದರಾಮಯ್ಯ ಆಗ್ರಹ

● ಪತ್ರಿಕಾ ಪ್ರಕಟಣೆಯಲ್ಲಿ ಈ ಬಾರಿ 67 ಮಂದಿ ಟಾಪರ್ ಆದ ಬಗ್ಗೆ ಅನುಮಾನ
● ಈಗಾಗಲೇ ಹತಾಶ ಇಬ್ಬರು ವಿದ್ಯಾರ್ಥಿಗಳು ಆತ್ಮಹತ್ಯೆ ಮಾಡಿಕೊಂಡಿರುವುದರ ಉಲ್ಲೇಖ



ಬೆಂಗಳೂರು, ಜೂ.7(ಕೆಎಂಶಿ)–ನರೇಂದ್ರ ಮೋದಿ ಅವರ ಸರ್ಕಾರ ರಚನೆ ಕಸರತ್ತು ಮುಗಿದಿದ್ದರೆ, ನೊಂದ ನೀಟ್ ಪರೀಕ್ಷಾರ್ಥಿಗಳ ಅಹವಾಲು ಆಲಿಸಿ, ಪರೀಕ್ಷಾ ಅಕ್ರಮದ ಬಗ್ಗೆ ತನಿಖೆ ನಡೆಸಲಿ ಎಂದು ಸಿಎಂ ಸಿದ್ದರಾಮಯ್ಯ ಒತ್ತಾಯಿಸಿದ್ದಾರೆ.

ಈ ಸಂಬಂಧ ಪತ್ರಿಕಾ ಪ್ರಕಟಣೆ ನೀಡಿರುವ ಅವರು, ನೀಟ್ ಫಲಿತಾಂಶದಲ್ಲಿ ಭಾರೀ ಅಕ್ರಮ ನಡೆದಿರಬಹುದಾದ ಶಂಕೆ ದೇಶಾದ್ಯಂತ ವ್ಯಕ್ತವಾಗುತ್ತಿದೆ. ಪರೀಕ್ಷೆ ಬರೆದಿರುವ 24 ಲಕ್ಷ ಯುವಜನರು ಹಾಗೂ ಅವರ ಪೋಷಕರಲ್ಲಿ ಮೂಡಿರುವ ಆತಂಕಕ್ಕೆ, ಪರೀಕ್ಷೆ ವಿಶ್ವಾಸಾರ್ಹತೆ ಬಗ್ಗೆ ಎದ್ದಿರುವ ಪ್ರಶ್ನೆಗಳಿಗೆ ಎನ್‌ಟಿಎ ಆಗಲಿ, ಕೇಂದ್ರ ಸರ್ಕಾರವಾಗಲೀ ಉತ್ತರಿಸದೆ ಲಕ್ಷಾಂತರ ಯುವಜನರ ಭವಿಷ್ಯ ಮಣ್ಣುಪಾಲು ಮಾಡಲು ಹೊರಟಿದೆ ಎಂದಿದ್ದಾರೆ.



ನೀಟ್ ಪರೀಕ್ಷೆಯಲ್ಲಿ 67 ಅಭ್ಯರ್ಥಿಗಳಿಗೆ 720ಕ್ಕೆ 720 ಅಂಕಗಳು ಬಂದಿವೆ. ಅಂದರೆ 100% ಅಂಕಗಳು ಬಂದಿವೆ, ಈ ಹಿಂದೆ ಬಂದ ಟಾಪರ್‌ಗಳ ಸಂಖ್ಯೆ ಎಷ್ಟು ಎಂಬುದನ್ನು ಹೋಲಿಕೆ ಮಾಡಿದರೆ ಈ ಬಾರಿಯ ಫಲಿತಾಂಶದಲ್ಲಿ ಅಕ್ರಮದ ವಾಸನೆ ಬರುತ್ತಿದೆ.

2019ರಲ್ಲಿ ಒಬ್ಬ ವಿದ್ಯಾರ್ಥಿ, 2020ರಲ್ಲಿ ಒಬ್ಬ, 2021ರಲ್ಲಿ ಮೂವರು, 2022ರಲ್ಲಿ ಒಬ್ಬ, 2023ರಲ್ಲಿ ಇಬ್ಬರು ವಿದ್ಯಾರ್ಥಿಗಳು ನೂರಕ್ಕೆ ನೂರು ಪ್ರತಿಶತ ಅಂಕ ಪಡೆದಿದ್ದರೆ ಈ ವರ್ಷ 67 ವಿದ್ಯಾರ್ಥಿಗಳು ಟಾಪರ್‌ಗಳಾಗಿ ಹೊರಹೊಮ್ಮಿದ್ದಾರೆ. ನೀಟ್‌ನ 67 ಟಾಪರ್‌ಗಳಲ್ಲಿ 44 ಮಂದಿ 'ಗ್ರೇಸ್‌ಮಾರ್ಕ್' ಆಧಾರದ ಮೇಲೆ ಟಾಪರ್‌ಗಳಾಗಿದ್ದಾರೆ.

ನೀಟ್ ಪರೀಕ್ಷೆಯಲ್ಲಿ ಪ್ರತಿ ತಪ್ಪು ಉತ್ತರಕ್ಕೆ ಋಣಾತ್ಮಕ ಅಂಕಗಳಿರುವ ಕಾರಣ ಇಷ್ಟೊಂದು ಮಂದಿ ನೂರು ಪ್ರತಿಶತ ಅಂಕ ಗಳಿಸುವುದು ಅಸಾಧ್ಯ. ಅಚ್ಚರಿಯ ವಿಷಯವೆಂದರೆ 62 ರಿಂದ 69 ರವರೆಗಿನ ನೋಂದಿತ ಸರಣಿ ಸಂಖ್ಯೆಗಳ ನೀಟ್ ಟಾಪರ್‌ಗಳು ಹರಿಯಾಣದ ಫರಿದಾಬಾದ್‌ನಲ್ಲಿರುವ ಒಂದೇ ಪರೀಕ್ಷಾ ಕೇಂದ್ರದಲ್ಲಿ ಪರೀಕ್ಷೆ ಬರೆದವರು. ಈ ಪೈಕಿ 6 ಜನರು 720ಕ್ಕೆ 720 ಅಂಕಗಳೊಂದಿಗೆ ನೀಟ್‌ನಲ್ಲಿ ಅಗ್ರಸ್ಥಾನದಲ್ಲಿದ್ದಾರೆ ಮತ್ತು 718 ಮತ್ತು 719 ಅಂಕಗಳನ್ನು 2 ಮಂದಿ ಪಡೆದಿದ್ದಾರೆ. ಫರಿದಾಬಾದ್‌ನ ನೀಟ್ ಪರೀಕ್ಷಾ ಕೇಂದ್ರದಲ್ಲಿ ತಪ್ಪು ಪತ್ರಿಕೆ ವಿತರಿಸಲಾಗಿತ್ತು. ಇದರಿಂದಾಗಿ ಅಭ್ಯರ್ಥಿಗಳು 45 ನಿಮಿಷ ಕಳೆದುಕೊಳ್ಳುವಂತಾಯಿತು, ಈ ವ್ಯರ್ಥ ಸಮಯಕ್ಕೆ ಪ್ರತಿಯಾಗಿ ● 6ನೇ ಪುಟಕ್ಕೆ

ಭವಾನಿ ರೇವಣ್ಣಗೆ ಹೈಕೋರ್ಟ್ ಮಧ್ಯಂತರ ಜಾಮೀನು

ತಕ್ಷಣವೇ ಎಸ್‌ಐಟಿ ಮುಂದೆ ವಿಚಾರಣೆ ಹಾಜರು

ಬೆಂಗಳೂರು,ಜೂ.7– ಪ್ರಜ್ವಲ್ ರೇವಣ್ಣ ಲೈಂಗಿಕ ದೌರ್ಜನ್ಯ ಪ್ರಕರಣದ ಸಂತ್ರಸ್ತೆ ಅಪಹರಣ ಸಂಬಂಧ ಕಳೆದ 1 ತಿಂಗಳಿನಿಂದ ತಲೆಮರೆಸಿಕೊಂಡಿದ್ದ ಪ್ರಜ್ವಲ್ ತಾಯಿ ಭವಾನಿ ರೇವಣ್ಣಗೆ ಹೈಕೋರ್ಟ್ ಮಧ್ಯಂತರ ನಿರೀಕ್ಷಣಾ ಜಾಮೀನು ಮಂಜೂರು ಮಾಡಿದೆ. ಈ ಮೂಲಕ ತಲೆಮರೆಸಿಕೊಂಡಿದ್ದ ಭವಾನಿ ರೇವಣ್ಣಗೆ ಬಿಗ್ ರಿಲೀಫ್ ಸಿಕ್ಕಿದಂತಾಗಿದೆ. ಇದರ ಜೊತೆಗೆ ಕೋರ್ಟ್ ಹಲವು ಷರತ್ತುಗಳನ್ನು ವಿಧಿಸಿದೆ. ಎಸ್‌ಐಟಿ ವಿಚಾರಣೆಗೆ ಹಾಜರಾಗಬೇಕು. ಮಾತ್ರವಲ್ಲ ಕೆ.ಆರ್.ನಗರ ಮತ್ತು ಹಾಸನಕ್ಕೆ ತೆರಳದಂತೆ ಭವಾನಿಗೆ ಸೂಚನೆ ನೀಡಿದೆ. ಮುಂದಿನ ಶುಕ್ರವಾರದವರೆಗೆ ಮಾತ್ರ ಮಧ್ಯಂತರ ನಿರೀಕ್ಷಣಾ ಜಾಮೀನು ನೀಡಿ ಮುಂದಿನ ವಿಚಾರಣೆಯನ್ನು ಕೂಡ ಅದೇ ದಿನ ಅಂದರೆ ಜೂ.14ಕ್ಕೆ ನ್ಯಾಯಾಧೀಶ ಕೃಷ್ಣ ಎಸ್ ದೀಕ್ಷಿತ್ ಮುಂದೂಡಿದ್ದಾರೆ. ಮಧ್ಯಾಹ್ನ 1 ಗಂಟೆ ಒಳಗೆ ಎಸ್‌ಐಟಿ ವಿಚಾರಣೆಗೆ ಹಾಜರಾಗಲು ಸೂಚಿಸಿದ ಹಿನ್ನೆಲೆಯಲ್ಲಿ ಭವಾನಿ ರೇವಣ್ಣ ಎಸ್‌ಐಟಿ ವಿಚಾರಣೆಗೆ ಹಾಜರಾಗಿದ್ದಾರೆ.



ಪ್ರಕರಣದ ಹಿನ್ನೆಲೆ: ಅಪಹರಣಕ್ಕೆ ಒಳಗಾಗಿದ್ದಾರೆ ಎನ್ನಲಾದ ಮಹಿಳೆಯ ಪುತ್ರ ಹೆಚ್.ಡಿ. ರಾಜು 2024ರ ಮೇ.2ರಂದು ಕೆ.ಆರ್.ನಗರ ಪೊಲೀಸ್ ಠಾಣೆಗೆ ದೂರು ದಾಖಲಿಸಿದ್ದರು. ● 7ನೇ ಪುಟಕ್ಕೆ

ಮೈಸೂರು ಹಳೇ ಕೆಸರೆಯಲ್ಲಿನ ಗುಜರಿಯಲ್ಲಿ ಕ್ಲೋರಿನ್ ಸೋರಿಕೆಯಿಂದ

ಮಕ್ಕಳೂ ಸೇರಿ 20ಕ್ಕೂ ಅಧಿಕ ಮಂದಿ ಅಸ್ವಸ್ಥ

● ಹಲವರಿಗೆ ಉಸಿರಾಟ ತೊಂದರೆ, ವಾಂತಿ, ಕೆಮ್ಮು ● ತಕ್ಷಣ ವಿವಿಧ ಆಸ್ಪತ್ರೆಗೆ ದಾಖಲು ● ದಾವಣಗೆರೆ ಪಾಲಿಕೆಯ ನೀರು ಸಂಸ್ಕರಣ ಘಟಕದಿಂದ ಹರಾಜಿನಲ್ಲಿ ಖರೀದಿಸಿದ ಖಾಲಿ ಕ್ಲೋರಿನ್ ಸಿಲಿಂಡರ್‌ನಲ್ಲಿದ್ದ ಅನಿಲ ಸೋರಿಕೆ ● ಪೊಲೀಸ್ ಆಯುಕ್ತ ರಮೇಶ್ ಸ್ಥಳ ಪರಿಶೀಲನೆ; ಪ್ರಕರಣ ದಾಖಲಿಸಲು ಸೂಚನೆ

ಮೈಸೂರು, ಜೂ.7(ಎಸ್‌ಬಿಡಿ)– ಮೈಸೂರಿನ ಗುಜರಿ ಅಂಗಡಿಯೊಂದರಲ್ಲಿ ಕ್ಲೋರಿನ್ ಸೋರಿಕೆಯಾದ ಪರಿಣಾಮ ಮಕ್ಕಳು ಸೇರಿದಂತೆ 20ಕ್ಕೂ ಹೆಚ್ಚು ಮಂದಿ ಅಸ್ವಸ್ಥಗೊಂಡಿರುವ ಘಟನೆ ಶುಕ್ರವಾರ ಸಂಜೆ ನಡೆದಿದೆ.

ನಗರದ ಹಳೇ ಕೆಸರೆಯ ರಿದಾ ಸ್ಟೀಲ್ ಟ್ರೇಡರ್ಸ್ ಶೆಡ್‌ನಲ್ಲಿ ಖಾಲಿ ಎಂದು ಕೊಂಡಿದ್ದ ಕ್ಲೋರಿನ್ ಸಿಲಿಂಡರ್ ಅನ್ನು ಕ್ರಶ್ ಮಾಡಲೆಂದು ಅದರ ವಾಲ್ವ್ ತೆಗೆದಾಗ ಈ ಅವಘಡ ಸಂಭವಿಸಿದೆ. ಸಿಲಿಂಡರ್‌ನಲ್ಲಿ ಉಳಿದಿದ್ದ ಕ್ಲೋರಿನ್ ಸೋರಿಕೆಯಾಗಿ ಗಾಳಿಯಲ್ಲಿ ಹರಡುತ್ತಿದ್ದಂತೆ ಅಲ್ಲಿನ ಇಬ್ಬರು ಕೆಲಸಗಾರರು, ಗುಜರಿ ಹಿಂಭಾಗದಲ್ಲಿನ ಸೋಫಾ ತಯಾರಿಸುವ ಮಳಿಗೆಯ ಐದಾರು ಮಂದಿ ಹಾಗೂ ಅಕ್ಕಪಕ್ಕದ ನಿವಾಸಿಗಳು ಅಸ್ವಸ್ಥರಾಗಿದ್ದಾರೆ. ಒಂದೂವರೆ ವರ್ಷದ ಮಗು ಸೇರಿದಂತೆ 20ಕ್ಕೂ ಹೆಚ್ಚು ಮಂದಿ ಅಸ್ವಸ್ಥಗೊಂಡಿದ್ದಾರೆ ಎನ್ನಲಾಗಿದ್ದು, ಇವರಲ್ಲಿ ಕೆಲವರಿಗೆ ಉಸಿರಾಟ ತೊಂದರೆ, ವಾಂತಿ, ಕೆಮ್ಮು ಇನ್ನಿತರ ಸಮಸ್ಯೆಯಾಗಿದೆ. ತೀವ್ರ ಅಸ್ವಸ್ಥರಾಗಿದ್ದ ಐದಾರು ಮಂದಿಯನ್ನು ಹತ್ತಿರದ ಪ್ರಜ್ವಲ್ ಆಸ್ಪತ್ರೆಗೆ ದಾಖಲಿಸಿದ್ದಾರೆ. ಮತ್ತಷ್ಟು ಜನರನ್ನು ಕೆ.ಆರ್. ಆಸ್ಪತ್ರೆಗೆ ದಾಖಲಿಸಲಾಗಿದೆ. ಅದೃಷ್ಟವಶಾತ್ ಎಲ್ಲರೂ ಪ್ರಾಣಾಪಾಯದಿಂದ ಪಾರಾಗಿದ್ದಾರೆ ● 6ನೇ ಪುಟಕ್ಕೆ









ಎರಡು ವರ್ಷದ ಹಿಂದೆ ಹೀಗೆ ಆಗಿತ್ತು

ಯಾದವಗಿರಿಯಲ್ಲಿನ ವಾಣಿ ವಿಲಾಸ ನೀರು ಸರಬರಾಜು ಕೇಂದ್ರದ ಎದುರು, ರೈಲ್ವೆ ಸಿಬ್ಬಂದಿ ಕ್ವಾಟ್ರರ್ಸ್ ಬಳಿ 2022ರ ಮಾರ್ಚ್ 8 ರಂದು ಇದೇ ರೀತಿಯ ಘಟನೆ ಸಂಭವಿಸಿತ್ತು. ನೀರು ಶುದ್ಧೀಕರಣಕ್ಕಾಗಿ ಇಡಲಾಗಿದ್ದ ಕ್ಲೋರಿನ್ ತುಂಬಿದ್ದ ದೊಡ್ಡ ಸಿಲಿಂಡರ್‌ನ ವಾಲ್ವ್ ತುಂಡಾಗಿ ಅಪಾರ ಪ್ರಮಾಣದ ಕ್ಲೋರಿನ್ ಸೋರಿಕೆಯಾಗಿತ್ತು. ಪರಿಣಾಮ ಕೆಆರ್‌ಎಸ್ ರಸ್ತೆಯಲ್ಲಿ ವಾಹನಗಳಲ್ಲಿ ತೆರಳುತ್ತಿದ್ದವರು, ವಾಣಿ ವಿಲಾಸ ನೀರು ಸರಬರಾಜು ಕೇಂದ್ರದ ಉದ್ಯೋಗಿಗಳು, ರೈಲ್ವೆ ಕ್ವಾಟ್ರರ್ಸ್ ನಿವಾಸಿಗಳು ಸೇರಿದಂತೆ 70ಕ್ಕೂ ಹೆಚ್ಚು ಮಂದಿ ಅಸ್ವಸ್ಥಗೊಂಡಿದ್ದರು. ರೈಲ್ವೆ ಆಸ್ಪತ್ರೆ, ಕೆ.ಆರ್.ಆಸ್ಪತ್ರೆ ಹಾಗೂ ಖಾಸಗಿ ಆಸ್ಪತ್ರೆಗಳಲ್ಲಿ ಚಿಕಿತ್ಸೆ ಪಡೆದು, ಎಲ್ಲರೂ ಚೇತರಿಸಿಕೊಂಡರು. ರಸ್ತೆ ಸಂಚಾರವನ್ನು ಬಂದ್ ಮಾಡಿ, ಅಗ್ನಿಶಾಮಕ ದಳದ ಸಿಬ್ಬಂದಿ ಕ್ಲೋರಿನ್ ಹರಡದಂತೆ ಕ್ರಮ ವಹಿಸಿದ್ದರು. ವಾಣಿ ವಿಲಾಸ ಕೇಂದ್ರದ ನಿವೃತ್ತ ನೌಕರರೊಬ್ಬರು ಸಿಲಿಂಡರ್ ವಾಲ್ವ್‌ನಿಂದ ಸೋರಿಕೆಯನ್ನು ನಿಲ್ಲಿಸಿದ್ದರು. ನಂತರ ಆ ಸಿಲಿಂಡರ್ ಅನ್ನು ಸ್ಥಳಾಂತರಿಸಲಾಗಿತ್ತು.



ಗುಜರಿಯಲ್ಲಿ ಕ್ಲೋರಿನ್ ಸೋರಿಕೆಗೆ ಕಾರಣ


ಹಳೇ ಕೆಸರೆಯ ರಿದಾ ಸ್ಟೀಲ್ ಟ್ರೇಡರ್ಸ್ ಮಾಲೀಕ ಮಹಮ್ಮದ್ ಅವರು ಮೂರು ತಿಂಗಳ ಹಿಂದೆ ದಾವಣಗೆರೆ ಮಹಾನಗರ ಪಾಲಿಕೆಯ ನೀರಿನ ಸಂಸ್ಕರಣಾ ಘಟಕದ ಹಳೇ ಯಂತ್ರೋಪಕರಗಳು, ಕ್ಲೋರಿನ್ ಸಿಲಿಂಡರ್‌ಗಳು ಇನ್ನಿತರ ವಸ್ತುಗಳನ್ನು ಬಿಡ್ ಮೂಲಕ ಖರೀದಿಸಿ, ತಮ್ಮ ಗುಜರಿಯಲ್ಲಿ ದಾಸ್ತಾನು ಮಾಡಿದ್ದರು. ಖಾಲಿ ಸಿಲಿಂಡರ್‌ಗಳನ್ನು ಶುಕ್ರವಾರ ಸಂಜೆ 6 ಗಂಟೆ ಸುಮಾರಿಗೆ ಕ್ರಶ್ ಮಾಡಲು ಮುಂದಾಗಿದ್ದರು. ಇದಕ್ಕೂ ಮುನ್ನ ಸಿಲಿಂಡರ್‌ನ ವಾಲ್ವ್ ತೆಗೆದಾಗ ಅದರಲ್ಲಿ ಉಳಿದಿದ್ದ ಕ್ಲೋರಿನ್ ಸೋರಿಕೆಯಾಗಿ ಈ ಘಟನೆ ಸಂಭವಿಸಿದೆ ಎಂದು ನಗರ ಪೊಲೀಸ್ ಆಯುಕ್ತ ಬಿ.ರಮೇಶ್ ಹಾಗೂ ಬನ್ನಿಮಂಟಪ ಠಾಣೆ ಜಿಲ್ಲಾ ಅಗ್ನಿಶಾಮಕ ಅಧಿಕಾರಿ ರಮೇಶ್ ತಿಳಿಸಿದ್ದಾರೆ.

ಮೈಸೂರು ಮಿತ್ರ ಶನಿವಾರ 8 ಜೂನ್ 2024

ಹೆಚ್‌ಡಿಕೆ ಕೇಂದ್ರದಲ್ಲಿ ಸಚಿವ ಸ್ಥಾನಕ್ಕೆ ಡಿಮ್ಯಾಂಡ್ ಮಾಡಲ್ಲ

ಜೆಡಿಎಸ್ ಯುವ ಘಟಕದ ರಾಜ್ಯಾಧ್ಯಕ್ಷ ನಿಖಿಲ್ ಕುಮಾರಸ್ವಾಮಿ ಸ್ಪಷ್ಟನೆ

ಮಂಡ್ಯ, ಜೂ. 7– 2019ರ ಮಂಡ್ಯ ಸಾರ್ವತ್ರಿಕ ಲೋಕಸಭಾ ಚುನಾವಣೆಯಲ್ಲಿ ತಮ್ಮ ಸೋಲು ಸೋಲಾಗಿರಲಿಲ್ಲ. ನಮ್ಮಲ್ಲಾದ ತಪ್ಪುಗಳಿಂದ ಹಿನ್ನಡೆ ಆಯ್ತು ಎಂದು ಸ್ಪಷ್ಟಪಡಿಸಿದ ಪರಾಜಿತ ಅಭ್ಯರ್ಥಿಯೂ ಆದ ಜೆಡಿಎಸ್ ಯುವ ಘಟಕದ ರಾಜ್ಯಾಧ್ಯಕ್ಷ ನಿಖಿಲ್ ತಮ್ಮ ತಂದೆ ಕುಮಾರಸ್ವಾಮಿ ಕೇಂದ್ರದಲ್ಲಿ ಸಚಿವ ಸ್ಥಾನಕ್ಕೆ ಡಿಮ್ಯಾಂಡ್ ಮಾಡಲ್ಲ ಎಂದರು.



ಮಂಡ್ಯಕ್ಕೆ ಆಗಮಿಸಿದ ನಿಖಿಲ್ ಕುಮಾರಸ್ವಾಮಿ ಅವರನ್ನು ಅಭಿನಂದಿಸಲಾಯಿತು.

ಶುಕ್ರವಾರ ನಗರದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಮಂಡ್ಯ ಜನ ನನಗೆ ಹೃದಯದಲ್ಲಿ ಸ್ಥಾನ ನೀಡಿದ್ದಾರೆ. ಕುಮಾರಣ್ಣ ಸಿಎಂ ಆಗಿದ್ದಾಗ ರಾಜ್ಯಕ್ಕೆ ಕೊಟ್ಟ ಕೊಡುಗೆ ಅಪಾರ. ಮಂಡ್ಯದಿಂದ ಕುಮಾರಸ್ವಾಮಿ ಸ್ಪರ್ಧೆಗೆ ಕಾರ್ಯಕರ್ತರ ಅಪೇಕ್ಷೆ ಇತ್ತು. ಅದರಂತೆ ಮಹಿಳೆಯರು, ರೈತರು, ಹಿರಿಯರು ಎಲ್ಲಾ ವರ್ಗದವರು ಕುಮಾರಸ್ವಾಮಿ ಅವರನ್ನು ಹೆಚ್ಚಿನ ಅಂತರದಲ್ಲಿ ಆಯ್ಕೆ ಮಾಡಿದ್ದಾರೆ ಎಂದು ಹೇಳಿದರು.

ಮುಂದಿನ 5 ವರ್ಷ ಪ್ರಾಮಾಣಿಕವಾಗಿ ಕೆಲಸ ಮಾಡುತ್ತಾರೆ. ಹೆಚ್ಡಿಕೆ ಮೇಲೆ ಇಟ್ಟಿರುವ ಗೌರವ, ಪ್ರೀತಿ, ವಿಶ್ವಾಸವನ್ನು ತಮ್ಮ ಕುಟುಂಬ ಉಳಿಸಿಕೊಳ್ಳುತ್ತದೆ. ಕಾಂಗ್ರೆಸ್ಸಿಗರ ಟೀಕೆಗಳಿಗೆ ಮಂಡ್ಯ ಜನ ಉತ್ತರ ಕೊಟ್ಟಿದ್ದಾರೆ. ಅಧಿಕಾರದಲ್ಲಿದ್ದಾಗ ಏನು ಬೇಕಾದರೂ ಮಾತನಾಡಿದರೆ ಜನ ತಕ್ಕ ಪಾಠ ಕಲಿಸುತ್ತಾರೆ. ರಾಜ್ಯವನ್ನು ಕಟ್ಟುವ ಕಲ್ಪನೆ ಕುಮಾರಸ್ವಾಮಿ ಅವರದ್ದು. ದೂರದೃಷ್ಟಿ ಹೊಂದಿರುವ ಕುಮಾರಸ್ವಾಮಿ ಅವರ ನಾಯಕತ್ವವನ್ನು ಬಿಜೆಪಿ ಬಳಸಿಕೊಳ್ಳಲಿದೆ ಎಂಬ ಭರವಸೆ ಇದೆ ಎಂದರು.

ಕುಮಾರಸ್ವಾಮಿ ಅವರು ಕೇಂದ್ರದಲ್ಲಿ ಸಚಿವ ಸ್ಥಾನಕ್ಕಾಗಿ ಡಿಮ್ಯಾಂಡ್ ಮಾಡಲ್ಲ. ಕುಮಾರಸ್ವಾಮಿ ಹಿರಿತನ ಆಧಾರದ ಮೇಲೆ ಸ್ಥಾನ ಸಿಗಲಿದೆ. ರಾಜ್ಯದಲ್ಲಿ ಎರಡು ಉಪ ಚುನಾವಣೆ ನಡೆಯಬೇಕಿದೆ. ಶಿಗ್ಗಾಂವಿ ಹಾಗೂ ಚನ್ನಪಟ್ಟಣದಲ್ಲಿ ಉಪಚುನಾವಣೆ ಆಗಬೇಕು. ಮೈತ್ರಿ ಪಕ್ಷಗಳ ನಾಯಕರು ಸಮಾಲೋಚನೆ ನಡೆಸಿ ಅಭ್ಯರ್ಥಿ ಆಯ್ಕೆ ಮಾಡುತ್ತಾರೆ. ನನ್ನ ಆಸಕ್ತಿ ಪಕ್ಷ ಸಂಘಟನೆಯಲ್ಲಿದೆ ಎಂದು ತಿಳಿಸಿದರು.

ಚನ್ನಪಟ್ಟಣ ಉಪಚುನಾವಣೆ ವಿಚಾರ ಮಾತನಾಡುವುದು ಸದ್ಯಕ್ಕೀಗ ಅಪ್ರಸ್ತುತ. ಸುಮಲತಾರವರು ಬಿಜೆಪಿ ಸದಸ್ಯರು. ಕುಮಾರಸ್ವಾಮಿ ಗೆಲುವನ್ನು ಅವರೂ ಬಯಸಿದ್ದರು. ಪ್ರಚಾರ ವೇದಿಕೆ ಹಂಚಿಕೊಳ್ಳಲು ಸಾಧ್ಯವಾಗದಿದ್ದರೂ ಅವರ ಬೆಂಬಲಿಗರಿಗೆ ಹೇಳಿದ್ದಾರೆ. ನಾನೇ ಸ್ವತಃ ಕಾಲ್ ಮಾಡಿ ಮಾತನಾಡಿ ಧನ್ಯವಾದ ಹೇಳುತ್ತೇನೆ ಎಂದು ಸುಮಲತಾ ಬಗ್ಗೆ ಪ್ರತಿಕ್ರಿಯಿಸಿದರು.

ನಾನು ಈಗ 24x7 ರಾಜಕಾರಣಿ, ಸಿನಿಮಾ ಮಾಡೋದನ್ನು ನಾನು ಬಂದ್ ಮಾಡಿದ್ದೇನೆ. ನಾನು ಇನ್ನೂ ಪಕ್ಷ ಕಟ್ಟುವ ಕಡೆ ಗಮನ ಕೊಡುತ್ತೇನೆ. ರಾಜ್ಯಾದ್ಯಂತ ಸಂಚಾರ ಮಾಡಿ ಪಕ್ಷ ಸಂಘಟನೆ ಮಾಡುತ್ತೇನೆ ನಾನು ಇನ್ನೂ ಫುಲ್ ಟೈಮ್ ರಾಜ ಕಾರಣಿ ಎನ್ನುವ ಮೂಲಕ ಸಿನಿಮಾ ಕ್ಷೇತ್ರಕ್ಕೆ ವಿರಾಮ ಹೇಳಿದ್ದೇನೆ ಎಂದರು.

ಈ ಸಂದರ್ಭದಲ್ಲಿ ಜೆಡಿಎಸ್ ಜಿಲ್ಲಾ ಘಟಕದ ಅಧ್ಯಕ್ಷ ಡಿ.ರಮೇಶ್, ಮನ್ ಮುಲ್ ಮಾಜಿ ಅಧ್ಯಕ್ಷ ಬಿ.ಆರ್.ರಾಮಚಂದ್ರು ಉಪಾಧ್ಯಕ್ಷ ಎಂ.ಎಸ್.ರಘುನಂದನ್, ಜೆಡಿಎಸ್ ತಾಲೂಕು ಅಧ್ಯಕ್ಷ ಸ್ವಾಮಿ ಇತರರಿದ್ದರು.

ನಕಲಿ ಪೈಪ್ ಮಾರುತ್ತಿದ್ದ ಅಂಗಡಿ ಮೇಲೆ ದಾಳಿ

40 ಸಾವಿರ ರೂ ಮೌಲ್ಯದ ನಕಲಿ ಪೈಪುಗಳ ವಶ



ಶ್ರೀರಂಗಪಟ್ಟಣ, ಜೂ. 7– ನಕಲಿ ನೀರಿನ ಪೈಪುಗಳನ್ನು ಮಾರುತ್ತಿದ್ದ ಅಂಗಡಿಯ ಮೇಲೆ ಕಂಪನಿಯ ತಂಡ ದಾಳಿ ನಡೆಸಿ 40 ಸಾವಿರ ರೂ ಮೌಲ್ಯದ ನಕಲಿ ಪೈಪುಗಳನ್ನು ವಶಪಡಿಸಿಕೊಂಡಿದ್ದಾರೆ.

ತಾಲೂಕಿನ ಮೊಗರಹಳ್ಳಿ ಗ್ರಾಮದ ಕೆಆರ್. ಸಾಗರ–ಮೈಸೂರು ಮುಖ್ಯ ರಸ್ತೆಯಲ್ಲಿರುವ ಎಲೆಕ್ಟ್ರಿಕಲ್ ಹಾಗೂ ಹಾರ್ಡ್‌ವೇರ್ ಅಂಗಡಿಯವರು ಪೈಪ್ ಕಂಪನಿಯ ನಕಲಿ ಪೈಪ್‌ಗಳನ್ನು ಮಾರಾಟ ಮಾಡುತ್ತಿರುವ ಬಗ್ಗೆ ಮಾಹಿತಿ ಮೇರೆಗೆ ದೊರೆತ ಹಿನ್ನಲೆಯಲ್ಲಿ ಕಂಪನಿಯ ತಂಡ ದಾಳಿ ನಡೆಸಿತು.

ಈ ಸಂಬಂಧ ಕೆ.ಆರ್.ಸಾಗರ ಪೊಲೀಸ್ ಠಾಣೆಯಲ್ಲಿ ಅಂಗಡಿ ಮಾಲೀಕರ ವಿರುದ್ಧ ಪ್ರಕರಣ ದಾಖಲು ಮಾಡಿದ್ದಾರೆ.

ಹಲವು ದಿನಗಳಿಂದ ಸಾರ್ವಜನಿಕರಿಗೆ ಮೋಸ ಮಾಡಿ ಕಂಪನಿ ಹೆಸರಿನ ನಕಲಿ ಪೈಪ್ ಮಾರಾಟ ಮಾಡುತ್ತಿರುವ ಮಾಹಿತಿ ಪಡೆದ ಪೈಪ್ ಕಂಪನಿಯ ಪ್ರೊ.ಬಾಲನ್ ನೇತೃತ್ವದಲ್ಲಿ ಲಿಗಲ್ ತಂಡ ದಾಳಿ ನಡೆಸಿ ನಕಲಿ ಪೈಪ್ ವಶಕ್ಕೆ ಪಡೆದು ದೂರು ನೀಡಿ ಪ್ರಕರಣ ದಾಖಲಿಸಿದೆ.

ಜನರಿಗೆ ನಕಲಿ ಪೈಪ್ ಮಾರಾಟ ಮಾಡುತ್ತಿರುವ ಬಗ್ಗೆ ಸಾರ್ವಜನಿಕರು ಆಕ್ರೋಶ ವ್ಯಕ್ತಪಡಿಸಿದ್ದು, ಈ ಅಂಗಡಿಗೆ ನೀಡಿರುವ ಲೈಸೆನ್ಸ್ ರದ್ದು ಪಡಿಸಬೇಕೆಂದು ಆಗ್ರಹಪಡಿಸಿದ್ದಾರೆ.

ಜೂ.11ರಂದು ಚುಂಚನಗಿರಿ ವಿವಿಯಲ್ಲಿ ಆರನೇ ಘಟಿಕೋತ್ಸವ

ಮಂಡ್ಯ, ಜೂ.7– ಆದಿಚುಂಚನಗಿರಿ ವಿಶ್ವವಿದ್ಯಾನಿಲಯದ ಆರನೇ ವಾರ್ಷಿಕ ಘಟಿಕೋತ್ಸವ ಜೂನ್ 11ರಂದು ಬೆಳಿಗ್ಗೆ 10.30 ಗಂಟೆಗೆ ವಿಶ್ವವಿದ್ಯಾಲಯದ ಆವರಣದಲ್ಲಿರುವ ಬಾಲ ಗಂಗಾಧರನಾಥ ಸ್ವಾಮೀಜಿ ಸಭಾಂಗಣದಲ್ಲಿ ನಡೆಯಲಿದೆ ಎಂದು ವಿಶ್ವವಿದ್ಯಾಲಯದ ಕುಲಪತಿ ಡಾ.ಎಂ.ಎ.ಶೇಖರ್ ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಆದಿಚುಂಚನಗಿರಿ ವಿಶ್ವವಿದ್ಯಾಲಯದ ಘಟಿಕೋತ್ಸವವು ಆದಿಚುಂಚನಗಿರಿ ವಿಶ್ವವಿದ್ಯಾನಿಲಯದ ಕುಲಪತಿ ಶ್ರೀ ನಿರ್ಮಲಾನಂದನಾಥ ಮಹಾ ಸ್ವಾಮೀಜಿ ಅವರ ದಿವ್ಯ ಸಾನಿಧ್ಯದಲ್ಲಿ, ಉನ್ನತ ಶಿಕ್ಷಣ ಸಚಿವ ಡಾ.ಎಂ.ಸಿ.ಸುಧಾಕರ್ ಅವರ ಅಧ್ಯಕ್ಷತೆಯಲ್ಲಿ ನಡೆಯಲಿದೆ ಎಂದು ತಿಳಿಸಿದರು.

ಬೌದ್ಧಿಕ ಸಂಶೋಧನಾ ಪ್ರಯೋಗಾಲಯದ ನಿರ್ವಹಣಾ ಮಂಡಳಿ ಅಧ್ಯಕ್ಷ ಡಾ.ಕಿರಣ್‌ಕುಮಾರ್ ಅವರು ಮುಖ್ಯ ಅತಿಥಿಗಳಾಗಿ ಭಾಗವಹಿಸಲಿದ್ದು, ಈ ಸಂದರ್ಭದಲ್ಲಿ 1365 ಅಭ್ಯರ್ಥಿಗಳಿಗೆ ವಿವಿಧ ಪದವಿಗಳನ್ನು ನೀಡಲಾಗುವುದು. ಐದು ಅಭ್ಯರ್ಥಿಗಳಿಗೆ ಡಾಕ್ಟರ್ ಆಫ್ ಫಿಲಾಸಫಿ ಪದವಿ ನೀಡಲಾಗುವುದು. ಅಲ್ಲದೇ ಇದೆ ಸಂದರ್ಭದಲ್ಲಿ ಕಾಲೇಜಿನ 131 ಅಭ್ಯರ್ಥಿಗಳು ವೈದ್ಯಕೀಯ ಪದವಿ ಪಡೆಯಲಿದ್ದಾರೆ ಎಂದು ತಿಳಿಸಿದರು.

ಗೋಷ್ಠಿಯಲ್ಲಿ ಡಾ.ಪ್ರಾಣೇಶ್, ಡಾ.ನಾರಾಯಣಗೌಡ ಉಪಸ್ಥಿತರಿದ್ದರು.

ಶ್ರೀವೆಂಕಟೇಶ್ವರ ದೇವಾಲಯದಲ್ಲಿ ಮೊದಲನೇ ವಾರ್ಷಿಕೋತ್ಸವ

ಭಾರತೀನಗರ, ಜೂ.7– ಕೆ.ಎಂ.ದೊಡ್ಡಿಯ ಶ್ರೀ ವೆಂಕಟೇಶ್ವರ ಸ್ವಾಮಿ ದೇವಾಲಯದಲ್ಲಿ 2ನೇ ವರ್ಷದ ವಾರ್ಷಿಕ ಮಹೋತ್ಸವ ಮತ್ತು ಶ್ರೀನಿವಾಸ ಕಲ್ಯಾಣೋತ್ಸವ ಇಂದಿನಿಂದ ಆರಂಭವಾಗಿದ್ದು, ಜೂ.8 ರವರೆಗೆ ನಡೆಯಲಿದೆ.



ಭಾರತೀನಗರದ ಮಾರಿಗುಡಿ ಮುಂಭಾಗವಿದ್ದ 15 ಗುಂಟೆ ಜಾಗದಲ್ಲಿ ಕಾಳಮುದ್ದನದೊಡ್ಡಿ ಗ್ರಾಮದಲ್ಲಿ ಇರುವ ಶ್ರೀ ವೆಂಕಟೇಶ್ವರಸ್ವಾಮಿ ಹಾಗೂ ಹೊಸಕೆರೆ ಮಾಸ್ತಮ್ಮ ದೇವರ ಒಕ್ಕಲಿಗ ಕುಲಬಾಂಧವರು ಈ ದೇವಾಲಯ ನಿರ್ಮಾಣ ಮಾಡಿ 2 ವರ್ಷವಾಗಿದೆ. ಅದರ ಅಂಗವಾಗಿ ವಾರ್ಷಿಕೋತ್ಸವವನ್ನು ವಿಜೃಂಭಣೆಯಿಂದ ಆಚರಿಸಲಾಗುತ್ತಿದೆ. ಪ್ರತೀ ವರ್ಷದಂತೆ ಈ ವರ್ಷವೂ ಹರಿಸೇವೆ ಕಾರ್ಯಕ್ರಮವು ಜರುಗಲಿದೆ. ಜೂ. 7 ರಂದು ಶ್ರೀ ಸ್ವಾಮಿಗೆ ಪಂಚಾಮೃತ ಅಭಿಷೇಕ ಮತ್ತು ವಿಶೇಷ ಪೂಜೆ, ಸಂಜೆ 4 ಗಂಟೆಗೆ ಶ್ರೀನಿವಾಸ ಕಲ್ಯಾಣೋತ್ಸವ ಕಾರ್ಯಕ್ರಮ ನಡೆಯಿತು.

ಜೂ.8 ರಂದು ಶನಿವಾರ ಬೆಳಿಗ್ಗೆ 10 ಗಂಟೆಗೆ ಪ್ರಶಾಂತ್ ಶಾಲೆಯ ಹತ್ತಿರದಿಂದ ಜನಪದ ಕಲಾತಂಡಗಳೊಂದಿಗೆ ಹಾಗೂ ಹೂ–ಹೊಂಬಾಳೆ ಮೂಲಕ ರಥದಲ್ಲಿ ಶ್ರೀವೆಂಕಟೇಶ್ವರಸ್ವಾಮಿ ಮೆರವಣಿಗೆ ಮತ್ತು ಮಣಿಸೇವೆ ಮೂಲಕ ವಿಶೇಷ ಪೂಜಾ ಕಾರ್ಯಕ್ರಮ ನಡೆಯಲಿದೆ.

ನಾಳೆ ಡಾ.ಬೆಸಗರಹಳ್ಳಿ ರಾಮಣ್ಣ ಪ್ರಶಸ್ತಿ ಪ್ರದಾನ

ಮಂಡ್ಯ,ಜೂ.7– ಡಾ.ಬೆಸಗರಹಳ್ಳಿ ರಾಮಣ್ಣ ಪ್ರತಿಷ್ಠಾನದ ಆಶ್ರಯದಲ್ಲಿ 2023ನೇ ಸಾಲಿನ ಡಾ.ಬೆಸಗರಹಳ್ಳಿ ರಾಮಣ್ಣ ಕಥಾ ಸಂಕಲನ ಪ್ರಶಸ್ತಿ ಪ್ರದಾನ ಸಮಾರಂಭ ಹಾಗೂ ಒರೆಗಲ್ಲು ಕೃತಿ ಬಿಡುಗಡೆ ಕಾರ್ಯಕ್ರಮವನ್ನು ಜೂ.9ರಂದು ಮಂಡ್ಯ ನಗರದ ಡಾ.ಬಿ.ಆರ್.ಅಂಬೇಡ್ಕರ್ ಭವನದಲ್ಲಿ ಬೆಳಗ್ಗೆ 10.30ಕ್ಕೆ ಹಮ್ಮಿಕೊಳ್ಳಲಾಗಿದೆ ಎಂದು ಪ್ರತಿಷ್ಠಾನದ ಅಧ್ಯಕ್ಷೆ ಸುಜಾತ ತಿಳಿಸಿದರು. ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 2023 ನೇ ಸಾಲಿನ ಪ್ರಶಸ್ತಿಗೆ ಯುವ ಕತೆಗಾರ ಸ್ವಾಮಿ ಹೊನ್ನಾಚಿ ಅವರ ದಾರಿ ತಪ್ಪಿಸುವ ಗಿಡ ಕೃತಿ ಆಯ್ಕೆ ಮಾಡಲಾಗಿದೆ ಎಂದು ತಿಳಿಸಿದರು. ಈ ಸಾಲಿನಲ್ಲಿ ಒಟ್ಟು 33 ಕಥಾಸಂಕಲನಗಳು ಆಯ್ಕೆ ಸಮಿತಿಯ ಮುಂದೆ ಬಂದಿದ್ದು, ಮೂರು ಸುತ್ತುಗಳ ಪರಿಶೀಲನೆಯ ನಂತರ ಅಂತಿಮವಾಗಿ ಸ್ವಾಮಿ ಪೊನ್ನಾಚಿ ಅವರ ಕೃತಿಯನ್ನು ಪ್ರಶಸ್ತಿಗೆ ಆಯ್ಕೆ ಮಾಡಲಾಗಿದೆ ಎಂದು ತಿಳಿಸಿದರು.

ಅಂದು ಅಂಬೇಡ್ಕರ್ ಭವನದಲ್ಲಿ ನಡೆಯಲ್ಲಿರುವ ಕಾರ್ಯಕ್ರಮದಲ್ಲಿ ಪ್ರೊ.ಕಾಳೇಗೌಡ ನಾಗವಾರ ಅವರು ಪ್ರಶಸ್ತಿ ಪ್ರದಾನ ಮಾಡಲಿದ್ದು, ಪ್ರಶಸ್ತಿ ವಿಜೇತ ಕೃತಿ ಕುರಿತು ವಿಮರ್ಶಕಿ ಆರ್.ಸುನಂದಮ್ಮ ಮಾತನಾಡಲಿದ್ದಾರೆ. ಮುಖ್ಯ ಅತಿಥಿಗಳಾಗಿ ಸಂಸ್ಕೃತಿ ಚಿಂತಕ ಕೋಟಿಗಾನಹಳ್ಳಿ ರಾಮಯ್ಯ, ಪ್ರಶಸ್ತಿ ಪುರಸ್ಕೃತ ಕೃತಿಯ ಲೇಖಕ ಪೊನ್ನಾಚಿ ಸ್ವಾಮಿ, ಡಾಕ್ಟರ್ ಬೆಸಗರಹಳ್ಳಿ ರಾಮಣ್ಣ ಪ್ರತಿಷ್ಠಾನದ ಅಜೀವ ಸದಸ್ಯರಾದ ಪಿ.ರಾಜಮ್ಮ ರಾಮಣ್ಣ ಭಾಗವಹಿಸಲಿದ್ದಾರೆ.

ಡಾಂಬರ್ ರಸ್ತೆ ಅಗೆದು ಅವೈಜ್ಞಾನಿಕ ಕಾಮಗಾರಿ

ಗುತ್ತಿಗೆದಾರನ ವಿರುದ್ಧ ಸ್ಥಳೀಯರ ಆಕ್ರೋಶ, ಸಿ.ಎಸ್.ಪುಟ್ಟರಾಜು ತರಾಟೆ

ಚಿನಕುರಳಿ, ಜೂ.7– ಕನಗನಹಳ್ಳಿಯಿಂದ ಕೆರೆ ತೊಣ್ಣೂರು ಗ್ರಾಮಕ್ಕೆ ಸಂಪರ್ಕಿಸುವ ಮುಖ್ಯರಸ್ತೆ ತಿರುಲಾಪುರ ಗ್ರಾಮದ ಬಳಿ ಗುತ್ತಿಗೆದಾರರು ಚೆನ್ನಾಗಿದ್ದ ಡಾಂಬರ್ ರಸ್ತೆಯನ್ನೇ ಅಗೆದು ಅವೈಜ್ಞಾನಿಕವಾಗಿ ಕಾಮಗಾರಿ ನಡೆಸುತ್ತಿರುವ ಬಗ್ಗೆ ಸುತ್ತಮುತ್ತಲಿನ ಗ್ರಾಮಸ್ಥರು ಆಕ್ರೋಶ ವ್ಯಕ್ತಪಡಿಸಿದ್ದಾರೆ. ವಿಷಯ ತಿಳಿದು ಸ್ಥಳಕ್ಕಾಗಮಿಸಿದ ಮಾಜಿ ಸಚಿವ ಸಿ.ಎಸ್. ಪುಟ್ಟರಾಜು ಕೂಡ ಗುತ್ತಿಗೆದಾರರನ್ನು ತರಾಟೆಗೆ ತೆಗೆದುಕೊಂಡಿದ್ದಾರೆ.



ಅವೈಜ್ಞಾನಿಕ ರಸ್ತೆ ಕಾಮಗಾರಿಯನ್ನು ವಿರೋಧಿಸಿ ಗ್ರಾಮಸ್ಥರ ಪ್ರತಿಭಟನೆ

ತಿರುಲಾಪುರ ಗ್ರಾಮದ ಬಳಿ ಗುತ್ತಿಗೆದಾರರು ಕುಡಿಯುವ ನೀರಿನ ಪೈಪ್ ಲೈನ್ ಅಳವಡಿಸಲು ಹೊಸದಾಗಿ ಡಾಂಬರೀಕರಣ ಮಾಡಿರುವ ರಸ್ತೆ ಅಗೆದು ಪೈಪ್‌ಲೈನ್ ಅಳವಡಿಸುತ್ತಿದ್ದಾಗ ಸುತ್ತ ಮುತ್ತಲ ಗ್ರಾಮಸ್ಥರು ವಿರೋಧಿಸಿದರು. ಈ ವೇಳೆ ಅದೇ ರಸ್ತೆಯಲ್ಲಿ ಬರುತ್ತಿದ್ದ ಮಾಜಿ ಸಚಿವ ಸಿ.ಎಸ್.ಪುಟ್ಟರಾಜು ಅವರಿಗೆ ಗ್ರಾಮಸ್ಥರು ವಿಷಯ ಮುಟ್ಟಿಸಿದ್ದಾರೆ. ಬಳಿಕ ಕಾಮಗಾರಿ ವೀಕ್ಷಿಸಿದ ಸಿ.ಎಸ್.ಪುಟ್ಟರಾಜು, ಗುತ್ತಿಗೆದಾರನ ವಿರುದ್ಧ ಆಕ್ರೋಶ ಹೊರಹಾಕಿದ್ದಾರೆ. ಹೊಸದಾಗಿ ಮಾಡಿರುವ ಡಾಂಬರ್ ರಸ್ತೆ ಅಗೆದು ಕಾಮಗಾರಿ ಮಾಡುತ್ತಿರುವುದು ಸರಿಯಲ್ಲ. ರಸ್ತೆ ಪಕ್ಕದಲ್ಲಿರುವ ಖಾಲಿ ಜಾಗದಲ್ಲಿ ಪೈಪ್‌ಲೈನ್ ಮಾಡಿ ಅದನ್ನು ಬಿಟ್ಟು ರಸ್ತೆ ಅಗೆದು ಅದ್ವಾನಗೊಳಿಸಬೇಡಿ ಎಂದು ತರಾಟೆಗೆ ತೆಗೆದುಕೊಂಡರು.

ಬಳಿಕ ರಸ್ತೆ ಅಗೆಯುತ್ತಿರುವ ವಿಚಾರವನ್ನು ಪಿಡಬ್ಲ್ಯೂಡಿ ಸಹಾಯಕ ಎಕ್ಸಿಕ್ಯೂಟಿವ್ ಇಂಜಿನಿಯರ್ ಆರ್ದಶ್‌ಗೆ ತಿಳಿಸಿ ಸ್ಥಳಕ್ಕೆ ಕರೆಸಿ ತರಾಟೆಗೆ ತೆಗೆದುಕೊಂಡರು.

ಅವೈಜ್ಞಾನಿಕ ಕಾಮಗಾರಿ ವೀಕ್ಷಿಸಿದ ಎಇಇ ಆದರ್ಶ ಗುತ್ತಿಗೆದಾರರನ್ನು ತರಾಟೆಗೆ ತೆಗೆದುಕೊಂಡರು. ರಸ್ತೆ ಪಕ್ಕದ ಜಾಗದಲ್ಲಿ ಪೈಪ್‌ಲೈನ್ ಮಾಡಿ ಅದನ್ನು ಬಿಟ್ಟು ರಸ್ತೆ ಅಗೆಯಬೇಡಿ ಎಂದು ತಿಳಿಸಿ ತೆಗೆದಿರುವ ಗುಂಡಿ ಮುಚ್ಚಿಸಿದರು.

ಹಲವು ವರ್ಷಗಳಿಂದ ಗುಂಡಿ ಬಿದ್ದಿದ್ದ ಕೆರೆ ತೊಣ್ಣೂರು–ಕನಗನಹಳ್ಳಿ ಗ್ರಾಮದ ಸಂಪರ್ಕ ರಸ್ತೆಯನ್ನು ಒಂದು ವರ್ಷದ ಹಿಂದೆ ಮಾಜಿ ಸಚಿವ ಸಿ.ಎಸ್.ಪುಟ್ಟರಾಜು ಅಭಿವೃದ್ಧಿಪಡಿಸಿದ್ದರು. ಇದೀಗ ರಸ್ತೆ ಅಗೆದು ಅದ್ವಾನಗೊಳಿಸುವುದು ಸರಿಯಲ್ಲ. ಕಾಮಗಾರಿ ಮಾಡಿಸುವುದಾದರೆ ವೈಜ್ಞಾನಿಕವಾಗಿ ಮಾಡಿ. ಅದನ್ನು ಬಿಟ್ಟು ಅವೈಜ್ಞಾನಿಕ ಕಾಮಗಾರಿ ಮಾಡಿಸಬೇಡಿ ಎಂದು ಸ್ಥಳೀಯರು ಲೋಕೋಪಯೋಗಿ ಅಧಿಕಾರಿಗಳನ್ನು ತರಾಟೆಗೆ ತೆಗೆದುಕೊಂಡರು. ಬಳಿಕ ಪೈಪ್ ಲೈನ್ ಕಾಮಗಾರಿ ಮಾಡದಂತೆ ಗುತ್ತಿಗೆದಾರರಿಗೆ ಸೂಚಿಸಲಾಯಿತು.

ಸಾಹಿತಿ ಮಂಜುನಾಥ್‌ಗೆ ಕನ್ನಿಕ ಶಿಲ್ಪ ಪ್ರಶಸ್ತಿ

ಕೆ.ಆರ್.ಪೇಟೆ, ಜೂ. 7– ತಾಲೂಕಿನ ತಂಡೇ ಕೆರೆ ಪದವಿ ಪೂರ್ವ ಕಾಲೇಜಿನ ಪ್ರಾಂಶುಪಾಲ ಹಾಗೂ ಸಾಹಿತಿ ಬಲ್ಲೇನಹಳ್ಳಿ ಮಂಜುನಾಥ್‌ಗೆ ಕನ್ನಿಕ ಶಿಲ್ಪ ಸಾಹಿತ್ಯ ಪ್ರಶಸ್ತಿ ಲಭ್ಯವಾಗಿದೆ. ಮಂಡ್ಯದ ಕನ್ನಿಕ ಶಿಲ್ಪ ನವೋದಯ ಎಜುಕೇಷನ್ ಟ್ರಸ್ಟ್ ಜಿಲ್ಲೆಯ ಮೂವರು ಸಾಹಿತಿಗಳನ್ನು ಈ ಪ್ರಶಸ್ತಿಗೆ ಆಯ್ಕೆ ಮಾಡಿದ್ದು, ತಾಲೂಕಿನ ಮಂಜುನಾಥ್ ಬರೆದಿರುವ 'ಅಂತರಂಗದ ತಲ್ಲಣ' ಎಂಬ ಗದ್ಯ ಲೇಖನಗಳ ಸಂಗ್ರಹಕ್ಕೆ ಈ ಪ್ರಶಸ್ತಿ ಲಭ್ಯವಾಗಿದೆ. ಭಾನುವಾರ ಮಂಡ್ಯದ ಪಿಇಎಸ್ ಕಲಾ ಮತ್ತು ವಾಣಿಜ್ಯ ಕಾಲೇಜಿನಲ್ಲಿ ನಡೆಯುವ ಸಮಾರಂಭದಲ್ಲಿ ಪ್ರಶಸ್ತಿ ವಿತರಿಸಲಾಗುವುದು ಎಂದು ಪ್ರಕಟಣೆ ತಿಳಿಸಿದೆ.

ಮಂಜೇಗೌಡ ನಿಧನ

ಕೆ.ಆರ್.ಪೇಟೆ: ತಾಲೂಕಿನ ಕಾಮನಹಳ್ಳಿ ನಿವಾಸಿ, ಬಳ್ಳೇಕೆರೆ ಗ್ರಾಪಂ ಸದಸ್ಯ ಯುವಜನ ಮಂಜೇಗೌಡ(55) ಶುಕ್ರವಾರ ನಿಧನರಾದರು. ಮೃತರು ಪತ್ನಿ, ಪುತ್ರ, ಪುತ್ರಿ ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಶನಿವಾರ ಸ್ವಗ್ರಾಮದಲ್ಲಿ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.



ಐದನೇ ಪುಟದಿಂದ

ಮಕ್ಕಳೂ ಸೇರಿ 20ಕ್ಕೂ ಅಧಿಕ ಮಂದಿ ಅಸ್ವಸ್ಥ

ಎಂದು ತಿಳಿದುಬಂದಿದೆ. ವಿಷಯ ತಿಳಿದು ಸ್ಥಳಕ್ಕೆ ದೌಡಾಯಿಸಿದ ಬನ್ನಿಮಂಟಪ ಅಗ್ನಿಶಾಮಕ ಠಾಣೆ ಸಿಬ್ಬಂದಿ, ಕ್ಲೋರಿನ್ ಸೋರಿಕೆ ಯನ್ನು ಸ್ಥಗಿತಗೊಳಿಸಿ, ಹೆಚ್ಚಿನ ಅಪಾಯವನ್ನು ತಪ್ಪಿಸಿದ್ದಾರೆ. ಮುಖ್ಯ ಅಗ್ನಿಶಾಮಕ ಅಧಿಕಾರಿ ಜಯರಾಮಯ್ಯ, ಪ್ರಾದೇಶಿಕ ಅಗ್ನಿಶಾಮಕ ಅಧಿಕಾರಿ ಚಂದನ್ ಹಾಗೂ ಬನ್ನಿಮಂಟಪ ಜಿಲ್ಲಾ ಅಗ್ನಿಶಾಮಕ ಅಧಿಕಾರಿ ರಮೇಶ್ ಭೇಟಿ ನೀಡಿ, ಪರಿಶೀಲನೆ ನಡೆಸಿದರು. ಜನವಸತಿ ಪ್ರದೇಶದಲ್ಲಿ ಈ ರೀತಿಯ ಸಿಲಿಂಡರ್‌ಗಳನ್ನು ಕ್ರಶ್ ಮಾಡದಂತೆ ಎಚ್ಚರಿಕೆ ನೀಡಿದ್ದಾರೆ.

ಡಿಹೆಚ್‌ಓ ಆಸ್ಪತ್ರೆಗೆ ಭೇಟಿ: ಜಿಲ್ಲಾ ಆರೋಗ್ಯಾಧಿಕಾರಿ ಡಾ.ಪಿ.ಸಿ.ಕುಮಾರಸ್ವಾಮಿ ಘಟನಾ ಸ್ಥಳಕ್ಕೆ ಭೇಟಿ ನೀಡಿ, ಮಾಹಿತಿ ಪಡೆದ ಬಳಿಕ ಅಸ್ವಸ್ಥರು ದಾಖಲಾಗಿರುವ ಆಸ್ಪತ್ರೆಗಳಿಗೆ ತೆರಳಿ ಅವರ ಆರೋಗ್ಯ ಸ್ಥಿತಿಯ ಬಗ್ಗೆ ತಿಳಿದುಕೊಂಡರು. ಈ ಬಗ್ಗೆ 'ಮೈಸೂರು ಮಿತ್ರ'ನಿಗೆ ಪ್ರತಿಕ್ರಿಯಿಸಿದ ಅವರು, ಗುಜರಿಯಲ್ಲಿ ಕ್ಲೋರಿನ್ ಸೋರಿಕೆಯಿಂದ ಸುಮಾರು 17 ಮಂದಿ ಅಸ್ವಸ್ಥಗೊಂಡಿದ್ದರು. ಸೂಕ್ತ ಚಿಕಿತ್ಸೆ ನೀಡಲಾಗಿದ್ದು, ಎಲ್ಲರೂ ಚೇತರಿಸಿಕೊಳ್ಳುತ್ತಿದ್ದು, ಕೆಲವರು ಆಸ್ಪತ್ರೆಯಿಂದ ಬಿಡುಗಡೆಯಾಗಿದ್ದಾರೆ ಎಂದು ತಿಳಿಸಿದರು.

ಕೇಸ್ ಹಾಕಲು ಸೂಚನೆ: ನಗರ ಪೊಲೀಸ್ ಆಯುಕ್ತ ಬಿ.ರಮೇಶ್ ಅವರು ಡಿಸಿಪಿಗಳಾದ ಮುತ್ತುರಾಜ್ ಹಾಗೂ ಜಾಹ್ನವಿ ಇನ್ನಿತರ ಅಧಿಕಾರಿಗಳೊಂದಿಗೆ ಸ್ಥಳ ಪರಿಶೀಲನೆ ನಡೆಸಿ, ಘಟನೆ ಬಗ್ಗೆ ಮಾಹಿತಿ ಪಡೆದುಕೊಂಡರು. ಮುನ್ನೆಚ್ಚರಿಕೆ ವಹಿಸದೆ ಕ್ಲೋರಿನ್ ಸಿಲಿಂಡರ್ ಅನ್ನು ಕ್ರಶ್ ಮಾಡಲು ಮುಂದಾಗಿದ್ದರಿಂದ ಸೋರಿಕೆಯಾಗಿ ಸಾರ್ವಜನಿಕರು ತೊಂದರೆ ಅನುಭವಿಸುವಂತಾಗಿದ್ದರಿಂದ ಗುಜರಿ ಮಾಲೀಕನ ವಿರುದ್ಧ ಪ್ರಕರಣ ದಾಖಲಿಸುವಂತೆ ನರಸಿಂಹರಾಜ ಪೊಲೀಸ್ ಠಾಣೆ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಆತಂಕಗೊಂಡ ಜನ: ಒಂದೂವರೆ ವರ್ಷದ ದಿಯಾ, ಪ್ರೇಮಾ, ಭಾವನಾ, ಪವನ್, ಬಿಹತ್, ಚೈತನ್ಯ ಭಾಸ್ಕರ್, ನಂದನ್, ವಿದ್ಯಾಶ್ರೀ, ಶ್ವೇತಾ, ಜಲೀಲಿಯಾ, ಗೌರಮ್ಮ, ನಾಗರಾಜು, ವಿಜಯಲಕ್ಷ್ಮೀ, ಜ್ಯೋತಿ, ನೇತ್ರಾವತಿ, ದೀಪ್ತಿ ವಿಶಾಲಾಕ್ಷಿ, ಸೋನಿಯಾ ಸೇರಿದಂತೆ ಹಲವರು ಅಸ್ವಸ್ಥರಾಗಿದ್ದು, ಜಿಲ್ಲಾಸ್ಪತ್ರೆ, ಕೆ.ಆರ್.ಆಸ್ಪತ್ರೆ ಹಾಗೂ ಖಾಸಗಿ ಆಸ್ಪತ್ರೆಗಳಲ್ಲಿ ದಾಖಲಾಗಿದ್ದಾರೆ. ಹಲವೆಡೆ ಗ್ಯಾಸ್ ಹರಡುತ್ತಿದ್ದಂತೆ ಒಬ್ಬರ ಹಿಂದೆ ಒಬ್ಬರು ಅಸ್ವಸ್ಥರಾದರು. ಉಸಿರಾಡಲು ಕಷ್ಟಪಡುತ್ತಿದ್ದರು. ಕೆಲವರು ವಾಂತಿ ಮಾಡಿದರು, ಮತ್ತಷ್ಟು ಮಂದಿಯಲ್ಲಿ ಕೆಮ್ಮು ಕಾಣಿಸಿಕೊಂಡಿತ್ತು. ಏನಾಗಿದೆ ಎಂದು ತಕ್ಷಣಕ್ಕೆ ತಿಳಿಯದೆ ಜನರೆಲ್ಲಾ ಆತಂಕಗೊಂಡಿದ್ದು ಎಂದು ಸ್ಥಳೀಯರು ತಿಳಿಸಿದ್ದಾರೆ.

ಕ್ರಮ ವಹಿಸದಿದ್ದರೆ ಭಾರೀ ಅನಾಹುತ

ಮೈಸೂರು ನಗರದಲ್ಲಿ ಅನಧಿಕೃತ ಗುಜರಿಗಳು ಹೆಚ್ಚುತ್ತಿವೆ. ಆಗಾಗ ಸಣ್ಣಪುಟ್ಟ ಅಗ್ನಿ ಅವಘಡಗಳು ಸಂಭವಿಸುತ್ತಲೇ ಇರುತ್ತವೆ. ಜನವಸತಿ ಪ್ರದೇಶದಲ್ಲಿ ಈ ರೀತಿ ಸಿಲಿಂಡರ್‌ಗಳನ್ನು ಕ್ರಶ್ ಮಾಡುವುದು ಎಷ್ಟು ಸುರಕ್ಷಿತ. ಕ್ಲೋರಿನ್ ಸೋರಿಕೆಯಿಂದ ಹಲವು ಜನ ಅಸ್ವಸ್ಥರಾಗಿದ್ದಾರೆ. ಏನಾದರೂ ವಿಷಾನಿಲವಾಗಿದ್ದರೆ ಸಾವು–ನೋವು ಸಂಭವಿಸುತ್ತಿತ್ತು. ಮೈಸೂರು ಮಹಾನಗರ ಪಾಲಿಕೆ ಅಧಿಕಾರಿಗಳಂತೂ ನಿದ್ರೆಗೆ ಜಾರಿದ್ದಾರೆ. ನಗರದಲ್ಲಿ ಯಾವ ಪರಿಸ್ಥಿತಿ ಇದೆ, ಎಲ್ಲಿ ಏನಾಗುತ್ತಿದೆ ಎಂಬುದರ ಅರಿವಿಲ್ಲದಂತೆ ವರ್ತಿಸುತ್ತಿದ್ದಾರೆ. ಜಿಲ್ಲಾಡಳಿತ ಈ ಬಗ್ಗೆ ಗಂಭೀರ ಕ್ರಮ ಕೈಗೊಳ್ಳದಿದ್ದರೆ ಭಾರೀ ಅನಾಹುತವೇ ಸಂಭವಿಸಲಿದೆ ಎಂದು ಸಾರ್ವಜನಿಕರು ಆತಂಕ ವ್ಯಕ್ತಪಡಿಸಿದ್ದಾರೆ.

ಸಿದ್ದರಾಮಯ್ಯ ಆಗ್ರಹ

ಎನ್‌ಟಿಎ ಈ ಕೇಂದ್ರದ ಅಭ್ಯರ್ಥಿಗಳಿಗೆ 'ಗ್ರೇಸ್‌ಮಾರ್ಕ್' ನೀಡಿದೆ. ಇದು ನೂರು ಪ್ರತಿಶತ ಅಂಕ ಗಳಿಕೆಗೆ ಕಾರಣ ಎಂಬುದಾಗಿ ಕೇಂದ್ರ ಸರ್ಕಾರ ಸಮಜಾಯಿಷಿ ನೀಡುತ್ತಿದೆ. 'ಎನ್‌ಟಿಎ ಪ್ರಾಸ್ಪೆಕ್ಟಸ್', 'ನೀಟ್ ಬ್ರೋಷರ್' ಮತ್ತು 'ಸರ್ಕಾರಿ ಸೂಚನೆಗಳಲ್ಲಿ' ಈ ರೀತಿಯಲ್ಲಿ ಗ್ರೇಸ್ ಅಂಕಗಳನ್ನು ನೀಡುವ ಅವಕಾಶ ಇರುವ ಕುರಿತು ಯಾವುದೇ ಮಾಹಿತಿ ಇಲ್ಲ. ಈ ಗ್ರೇಸ್ ಮಾರ್ಕ್‌ಗಳನ್ನು ಯಾವ ಆಧಾರದ ಮೇಲೆ ನೀಡಲಾಗಿದೆ, ಈ ಬಗ್ಗೆ ಸರ್ಕಾರದಿಂದ ಸಾರ್ವಜನಿಕ ಸೂಚನೆ ಅಥವಾ ಜಾಹೀರಾತು ನೀಡಲಾಗಿದೆಯೇ, ಬೇರೆ ಕೇಂದ್ರದಲ್ಲಿ ಇದೇ ರೀತಿ ಗ್ರೇಸ್ ಮಾರ್ಕ್ಸ್ ನೀಡಲಾಗಿದೆಯೇ ಎಂಬ ಮಾಹಿತಿಯನ್ನು ಆತಂಕದಲ್ಲಿರುವ ವಿದ್ಯಾರ್ಥಿಗಳಿಗೆ ಮತ್ತು ಅವರ ಪೋಷಕರಿಗೆ ನೀಡಬೇಕು.

2019 ರಿಂದ 2023 ರವರೆಗೆ, ನೀಟ್ ಪರೀಕ್ಷೆಯಲ್ಲಿ 600 ಅಂಕಗಳನ್ನು ಗಳಿಸಿದವರು ಕೈಗೆಟುಕುವ ಶುಲ್ಕದಲ್ಲಿ ಸರ್ಕಾರಿ ವೈದ್ಯಕೀಯ ಕಾಲೇಜುಗಳಲ್ಲಿ ಸುಲಭವಾಗಿ ಪ್ರವೇಶ ಪಡೆದಿದ್ದರು.

ಈ ವರ್ಷ ನೀಟ್ ಪರೀಕ್ಷೆಯ ಅಂಕ ಮಿತಿಯು 137 ಅಂಕಗಳಿಂದ 164 ಕ್ಕೆ ಏರಿಕೆಯಾಗಿದೆ, ಈ ಬಾರಿ 660 ಅಂಕ ಗಳಿಸಿದ ಅಭ್ಯರ್ಥಿಗಳು ಮಾತ್ರ ಕೈಗೆಟುಕುವ ಶುಲ್ಕದಲ್ಲಿ ಸರ್ಕಾರಿ ವೈದ್ಯಕೀಯ ಕಾಲೇಜುಗಳಲ್ಲಿ ಪ್ರವೇಶ ಪಡೆಯಬಹುದು.

ನೀಟ್ ಪರೀಕ್ಷೆಗೆ ಹಾಜರಾಗಿರುವ 24 ಲಕ್ಷಕ್ಕೂ ಹೆಚ್ಚು ಯುವಕರು ಬಹುತೇಕ ಬಡ–ಮಧ್ಯಮ ವರ್ಗದ ಕುಟುಂಬಗಳಿಂದ ಬಂದವರು, ವೈದ್ಯರಾಗುವ ಹಂಬಲ ಹೊಂದಿದವರು. ಆದರೆ ಪರೀಕ್ಷಾ ಗೊಂದಲದಿಂದಾಗಿ ಲಕ್ಷಾಂತರ ಯುವಕರ ಕನಸುಗಳು ನುಚ್ಚುನೂರಾಗಿದೆ.

ನಿಗದಿತ ವೇಳಾಪಟ್ಟಿಯಂತೆ ನೀಟ್ ಪರೀಕ್ಷೆಯನ್ನು ಮೇ 5, 2024 ರಂದು ನಡೆಸಲಾಯಿತು ಮತ್ತು ಅದರ ಫಲಿತಾಂಶ ಜೂನ್ 14, 2024ರಂದು ಪ್ರಕಟವಾಗಬೇಕಿತ್ತು. ಆದರೆ ಇದ್ದಕ್ಕಿದ್ದಂತೆ ಫಲಿತಾಂಶವನ್ನು ಜೂನ್ 4, 2024 ರಂದು ಪ್ರಕಟಿಸಲಾಯಿತು. ಇದೇ ದಿನ ಲೋಕಸಭಾ ಚುನಾವಣೆಯ ಫಲಿತಾಂಶವೂ ಬಂದಿತು, ಇಡೀ ದೇಶವೇ ಚುನಾವಣೆ ಫಲಿತಾಂಶ ಕೇಳುವುದರಲ್ಲಿ ತಲ್ಲೀನವಾಗಿತ್ತು. ಈ ಗದ್ದಲದಲ್ಲಿ ನೀಟ್ ಫಲಿತಾಂಶವನ್ನು ತರಾತುರಿಯಲ್ಲಿ ಬಿಡುಗಡೆ ಮಾಡಿದ್ದು, ಪರೀಕ್ಷೆಯ ಅಕ್ರಮಗಳನ್ನು ಮುಚ್ಚಿಹಾಕಬಹುದು ಎಂಬ ಕಾರಣಕ್ಕಾಗಿಯೇ, ಇಲ್ಲದಿದ್ದರೆ ತರಾತುರಿಯಲ್ಲಿ ಫಲಿತಾಂಶ ಬಿಡುಗಡೆ ಮಾಡಿದ್ದು ಏಕೆ? ಎಂದು ಪ್ರಶ್ನಿಸಿದ್ದಾರೆ. ಬರೀ ವಿವಾದಗಳಿಂದಲೇ ತುಂಬಿರುವ ಮತ್ತು ಯುವಜನರು ಆತ್ಮಹತ್ಯೆಗೆ ಶರಣಾಗುವಂತೆ ಮಾಡಿರುವ ಎನ್‌ಟಿಎಯ ನೀಟ್ ಪರೀಕ್ಷಾ ವ್ಯವಸ್ಥೆ ನಿಜಕ್ಕೂ ಎಂತಹದ್ದು ಎಂಬ ಪ್ರಶ್ನೆ ಕಾಡಲಾರಂಭಿಸಿದೆ ಎಂದಿದ್ದಾರೆ.

ಚಂದನ್ ಶೆಟ್ಟಿ–ನಿವೇದಿತಾ ಗೌಡ ವಿಚ್ಛೇದನ

ಬೆಂಗಳೂರು, ಜೂ.7–ನಟ, ಗಾಯಕ ಚಂದ್ರಶೆಟ್ಟಿ ಮತ್ತು ಕಿರುತೆರೆ ತಾರೆ ನಿವೇದಿತಾ ಗೌಡ ದಂಪತಿ ವಿಚ್ಛೇದನ ಪಡೆದಿದ್ದು, 4 ವರ್ಷದ ದಾಂಪತ್ಯ ಜೀವನಕ್ಕೆ ಅಂತ್ಯ ಹಾಡಿದ್ದಾರೆ.



ಈ ದಂಪತಿ ಪರಸ್ಪರ ಒಪ್ಪಿಗೆ ವಿಚ್ಛೇದನಕ್ಕಾಗಿ ಗುರುವಾರ ಬೆಂಗಳೂರಿನ ಶಾಂತಿನಗರದಲ್ಲಿರುವ ಕೌಟುಂಬಿಕ ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಿದ್ದು, ಇಂದು ಅರ್ಜಿ ವಿಚಾರಣೆಗೆ ನ್ಯಾಯಾಲಯ ಕೈಗೆತ್ತಿಕೊಂಡಿತ್ತು. ಇದಕ್ಕೂ ಮುನ್ನ ಸಂಧಾನ ಕೇಂದ್ರದಲ್ಲಿ ದಂಪತಿ ವಿಚ್ಛೇದನ ಪಡೆಯುವ ವಿಚಾರವಾಗಿ ಪ್ರಕ್ರಿಯೆಗಳು ನಡೆದಿವೆ. ನಂತರ ನ್ಯಾಯಾಲಯಕ್ಕೆ ಹಾಜರಾದ ದಂಪತಿ ನ್ಯಾಯಾಧೀಶರ ಮುಂದೆ ಪರಸ್ಪರ ಒಪ್ಪಿಗೆಯೊಂದಿಗೆ ವಿಚ್ಛೇದನ ಪಡೆಯುವುದಾಗಿ ತಿಳಿಸಿದರು. ವಿಚ್ಛೇದನಕ್ಕೆ ಕಾರಣವೇನು ಎಂದು ನ್ಯಾಯಾಧೀಶರು ಪ್ರಶ್ನಿಸಿದಾಗ, 'ತಮ್ಮಲ್ಲಿ ಸ್ವಲ್ಪ ಭಿನ್ನಾಭಿಪ್ರಾಯವಿದೆ. ನಮ್ಮ–ನಮ್ಮ ಕೆರಿಯರ್‌ನಲ್ಲಿ ಮುಂದುವರೆಯಲು ಇಚ್ಛಿಸಿದ್ದು, ಸಂತೋಷದಿಂದ ವಿಚ್ಛೇದನ ಪಡೆಯುತ್ತಿದ್ದೇವೆ' ಎಂದು ಹೇಳಿದರು. ಈ ಹಿನ್ನೆಲೆಯಲ್ಲಿ ನ್ಯಾಯಾಧೀಶರು ವಿಚ್ಛೇದನ ಮಂಜೂರು ಮಾಡಲು ಆದೇಶಿಸಿದರು.

ಈ ನಂತರ ನಿವೇದಿತಾ ಮತ್ತು ಚಂದನ್ ಶೆಟ್ಟಿ ಪ್ರತ್ಯೇಕವಾಗಿ ಟ್ವೀಟ್ ಮಾಡಿದ್ದು, ನಾವಿಬ್ಬರೂ ನಮ್ಮ ದಾಂಪತ್ಯ ಜೀವನವನ್ನು ಕಾನೂನುಬದ್ಧವಾಗಿ ಪರಸ್ಪರ ಒಪ್ಪಿಗೆಯಿಂದ ಕೊನೆಗೊಳಿಸಿದ್ದೇವೆ. ನಮ್ಮ ನಿರ್ಧಾರವನ್ನು ಮತ್ತು ನಮ್ಮ ಜೀವನದ ಖಾಸಗೀತನವನ್ನು ಗೌರವಿಸಲು ಕೋರುತ್ತೇವೆ. ಪ್ರತಿ ಸಂದರ್ಭದಲ್ಲೂ ನಮ್ಮೊಂದಿಗೆ ಇದ್ದ ಮಾಧ್ಯಮ ಮಿತ್ರರು, ನಮ್ಮ ಸ್ನೇಹಿತರು ಮತ್ತು ಅಭಿಮಾನಿಗಳಿಂದ ನಾವು ಎಂದಿನಂತೆ ಬೆಂಬಲ ಕೋರುತ್ತೇವೆ. ನಾವು ನಮ್ಮ ಪ್ರತ್ಯೇಕ ಮಾರ್ಗ ಅನುಸರಿಸಿದರೂ, ಒಬ್ಬರನ್ನೊಬ್ಬರು ಗೌರವಿಸುತ್ತೇವೆ. ಸೂಕ್ಷ್ಮ ಪರಿಗಣನೆಗಾಗಿ ಎಲ್ಲರಿಗೂ ಧನ್ಯವಾದಗಳು ಎಂದು ತಿಳಿಸಿದ್ದಾರೆ. ಬಿಗ್ ಬಾಸ್ ರಿಯಾಲಿಟಿ ಶೋನಲ್ಲಿ ಇವರಿಬ್ಬರ ನಡುವೆ ಪ್ರೇಮ ಅರಳಿತ್ತು. 2019ರ ಯುವ ದಸರಾ ವೇದಿಕೆಯಲ್ಲಿ ನಿವೇದಿತಾ ಗೌಡಗೆ ಚಂದನ್ ಶೆಟ್ಟಿ ಪ್ರೇಮ ನಿವೇದನೆ ಮಾಡಿದ್ದು, ತೀವ್ರ ವಿವಾದಕ್ಕೆ ಕಾರಣವಾಗಿತ್ತು. 2020ರ ಮೇ 26ರಂದು ಇವರಿಬ್ಬರೂ ವಿವಾಹವಾಗಿದ್ದರು.

ಬೆಂಗಳೂರು ಕೋರ್ಟ್‌ನಿಂದ ರಾಹುಲ್ ಗಾಂಧಿಗೆ ಜಾಮೀನು

ಸಹಿ ನಂತರ ರಾಹುಲ್ ಗಾಂಧಿ ನ್ಯಾಯಾಲಯದಿಂದ ಹೊರನಡೆದರು. ಕಳೆದ ಬಾರಿ ವಿಚಾರಣೆ ವೇಳೆ ಸಿದ್ದರಾಮಯ್ಯ ಹಾಗೂ ಶಿವಕುಮಾರ್ ನ್ಯಾಯಾಧೀಶರ ಮುಂದೆ ಹಾಜರಾಗಿ ಷರತ್ತುಬದ್ಧ ಜಾಮೀನು ಪಡೆದಿದ್ದರು. ಪ್ರಕರಣದ ನಾಲ್ಕನೇ ಆರೋಪಿ ರಾಹುಲ್ ಗಾಂಧಿ ಗೈರಾಗಿದ್ದಕ್ಕೆ ಗರಂ ಆದ ನ್ಯಾಯಾಧೀಶರು, ಮುಂದಿನ ಬಾರಿ ರಾಹುಲ್ ಖುದ್ದು ಹಾಜರಿರಬೇಕು ಎಂದು ನಿರ್ದೇಶನ ನೀಡಿದ್ದರು. ಚುನಾವಣೆ ಸಂದರ್ಭದಲ್ಲಿ ಆರೋಪ ಮಾಡಿದ್ದ ಕಾಂಗ್ರೆಸ್, 2019ರಿಂದ 2023ರವರೆಗೆ ಬಿಜೆಪಿ ಭ್ರಷ್ಟ ಆಡಳಿತ ನಡೆಸಿತ್ತು, ಮುಖ್ಯಮಂತ್ರಿ ಹುದ್ದೆಗೆ 2,500 ಕೋಟಿ ರೂ., ಸಚಿವ ಹುದ್ದೆಗಳಿಗೆ 500 ಕೋಟಿ ರೂ.ಗಳನ್ನು ಪಕ್ಷದ ಹೈಕಮಾಂಡ್‌ಗೆ ನೀಡಿ ಪಡೆಯಲಾಗಿದೆ. ಕೋವಿಡ್ ಸಮಯದಲ್ಲಿ ಕಿಟ್ ಪೂರೈಕೆ ಗುತ್ತಿಗೆಯಲ್ಲಿ 75% ಡೀಲ್, ಪಿಡಬ್ಲ್ಯೂಡಿ ಗುತ್ತಿಗೆಯಲ್ಲಿ 40% ಡೀಲ್, ಮಠಗಳ ಅನುದಾನದಲ್ಲಿ 30% ಡೀಲ್, ಶಾಲಾ ಮಕ್ಕಳಿಗೆ ನೀಡುವ ಮೊಟ್ಟೆ ಪೂರೈಕೆ ಗುತ್ತಿಗೆಯಲ್ಲಿ 30% ಡೀಲ್, ರಸ್ತೆ ಕಾಮಗಾರಿಯಲ್ಲಿ 40% ಡೀಲ್ ನಡೆದಿದೆ ಎಂದು ಕಾಂಗ್ರೆಸ್ ಆರೋಪಿಸಿತ್ತು. ಬಿಜೆಪಿ ಕಾರ್ಯದರ್ಶಿ ಕೇಶವ ಪ್ರಸಾದ್, 2023ರ ಮೇ 8ರಂದು 42ನೇ ವಿಶೇಷ ನ್ಯಾಯಾಲಯದಲ್ಲಿ ಖಾಸಗಿ ದೂರು ದಾಖಲಿಸಿ, ಕಾಂಗ್ರೆಸ್ ನಾಯಕರು ಸುಳ್ಳು ಆರೋಪ ಮಾಡುವ ಮೂಲಕ ಬಿಜೆಪಿಗೆ ದಕ್ಕೆ ಉಂಟು ಮಾಡಿದ್ದಾರೆ, ಸುಳ್ಳು ಜಾಹೀರಾತು ನೀಡಿದ್ದರಿಂದ ಪಕ್ಷಕ್ಕೆ ಚುನಾವಣೆಯಲ್ಲಿ ಹಾನಿಯಾಗಿದೆ, ಆರೋಪಗಳಿಗೆ ದಾಖಲೆ ನೀಡಬೇಕು ಎಂದು ವಾದ ಮಾಡಿದ್ದರು.

ವಿಧಾನಪರಿಷತ್‌ಗೆ ಆಯ್ಕೆ

9 ಸ್ಥಾನಗಳು ಬಂದು ಉಳಿದವು ಎನ್‌ಡಿಎ ಪಾಲಾಯಿತು.

ಇದುವರೆಗೂ ಶಿಕ್ಷಕರು ಮತ್ತು ಸಾಮಾಜಿಕ ಕ್ಷೇತ್ರದಲ್ಲಿ ಗಣನೀಯ ಸೇವೆ ಸಲ್ಲಿಸಿದವರಿಗೆ ಮತದಾರರು ಅವಕಾಶ ಮಾಡಿಕೊಡುತ್ತಿದ್ದರು, ಆದರೆ, ಈ ಚುನಾವಣೆಯಲ್ಲಿ ಚಿತ್ರಣ ಬದಲಾಗಿದೆ. ಕಳೆದ ಚುನಾವಣೆಯಲ್ಲಿ ಒಂದು ಸ್ಥಾನ ಗಳಿಸಿದ್ದ ಕಾಂಗ್ರೆಸ್ ಈ ಬಾರಿ ಮೂರರಲ್ಲಿ ಜಯ ಗಳಿಸಿದ್ದರೆ, ಜೆಡಿಎಸ್ ತನ್ನ ಎರಡು ಸ್ಥಾನ ಉಳಿಸಿಕೊಂಡರೆ, ಬಿಜೆಪಿ ತನ್ನ ಪಾಲಿನ ಎರಡು ಕ್ಷೇತ್ರವನ್ನು ಕಳೆದುಕೊಂಡಿದೆ.ಈಶಾನ್ಯ ಪದವೀಧರ ಕ್ಷೇತ್ರದಿಂದ ಡಾ.ಚಂದ್ರಶೇಖರ್ ಬಸವರಾಜ ಪಾಟೀಲ್, ಬೆಂಗಳೂರು ಪದವೀಧರ ಕ್ಷೇತ್ರದಿಂದ ನ.ರಾಮೋಜಿ ಗೌಡ, ಆಗ್ನೇಯ ಶಿಕ್ಷಕರ ಕ್ಷೇತ್ರದಿಂದ ಡಿ.ಶ್ರೀನಿವಾಸ ಕಾಂಗ್ರೆಸ್ ಅಭ್ಯರ್ಥಿಗಳಾಗಿ ಜಯ ಗಳಿಸಿದ್ದಾರೆ. ದಕ್ಷಿಣ ಶಿಕ್ಷಕರ ಕ್ಷೇತ್ರದಿಂದ ಕೆ.ವಿವೇಕಾನಂದ, ನೈಋತ್ಯ ಶಿಕ್ಷಕರ ಕ್ಷೇತ್ರದಿಂದ ಎಸ್.ಎಲ್. ಬೋಜೇಗೌಡ, ಜೆಡಿಎಸ್ ಅಭ್ಯರ್ಥಿಗಳಾಗಿ ಪರಿಷತ್ ಪ್ರವೇಶಿಸಿದ್ದಾರೆ. ಇನ್ನು ನೈಋತ್ಯ ಪದವೀಧರ ಕ್ಷೇತ್ರದಿಂದ ಬಿಜೆಪಿಯ ಡಾ.ಧನಂಜಯ ಸರ್ಜಿ ಪರಿಷತ್ತಿಗೆ ಆಯ್ಕೆಗೊಂಡಿದ್ದಾರೆ.

ಸಂಪುಟ ಸೇರ್ಪಡೆ ಖಚಿತ

ಸ್ವೀಕರಿಸುವುದು ಖಚಿತವಾಗುತ್ತಿದ್ದಂತೆ, ಅವರ ತಂದೆ ಹಾಗೂ ಮಾಜಿ ಪ್ರಧಾನಿ ಎಚ್.ಡಿ.ದೇವೇಗೌಡ ಮತ್ತು ಕುಟುಂಬ ವರ್ಗದವರು ಶನಿವಾರ ಬೆಳಗ್ಗೆ ದೆಹಲಿಯತ್ತ ಪ್ರಯಾಣ ಬೆಳೆಸುತ್ತಿದ್ದಾರೆ. ಮೋದಿ ಸಂಪುಟದಲ್ಲಿ ಕುಮಾರಸ್ವಾಮಿ ಅವರಿಗೆ ಮೊದಲ 10 ಸ್ಥಾನದೊಳಗೆ ಅವಕಾಶ ದೊರೆಯಲಿದೆ, ಅಲ್ಲದೆ, ಕೃಷಿ, ಜಲಸಂಪನ್ಮೂಲ ಇಲ್ಲವೇ ಗ್ರಾಮೀಣಾಭಿವೃದ್ಧಿ ಇಲಾಖೆಗಳಲ್ಲಿ ಒಂದು ಖಾತೆ ದೊರೆಯುವ ಸಾಧ್ಯತೆ ಇದೆ ಎಂದು ಉನ್ನತ ಮೂಲಗಳು ತಿಳಿಸಿವೆ.

ಕುಮಾರಸ್ವಾಮಿ ಮಂಡ್ಯ ಲೋಕಸಭಾ ಕ್ಷೇತ್ರದಿಂದ ಆಯ್ಕೆಯಾಗಿದ್ದು, ಇದಕ್ಕೂ ಮೊದಲು 1996ರಲ್ಲಿ ರಾಜಕೀಯ ಪ್ರವೇಶ ಮಾಡಿ, ಬೆಂಗಳೂರು ಗ್ರಾಮಾಂತರ ಕ್ಷೇತ್ರದಿಂದ ಸಂಸತ್‌ಗೆ ಆಯ್ಕೆಗೊಂಡಿದ್ದರು. ರಾಜ್ಯ ರಾಜಕಾರಣಕ್ಕೆ ಹಿಂತಿರುಗಿದ ನಂತರ ಕುಮಾರಸ್ವಾಮಿ, ರಾಮನಗರ ಮತ್ತು ಚನ್ನಪಟ್ಟಣ ವಿಧಾನಸಭಾ ಕ್ಷೇತ್ರದಿಂದ ಸತತವಾಗಿ ಆಯ್ಕೆಗೊಂಡು ಎರಡು ಬಾರಿ ಮುಖ್ಯಮಂತ್ರಿಯಾಗಿ ಸೇವೆ ಸಲ್ಲಿಸಿದ್ದಾರೆ.

ಪರೀಕ್ಷಾ ಕೇಂದ್ರಗಳ ಸುತ್ತಲೂ ನಿಷೇಧಾಜ್ಞೆ ಜಾರಿ

ಮೈಸೂರು, ಜೂ.7– ಮೈಸೂರು ನಗರ ಪೊಲೀಸ್ ಕಮೀಷನರೇಟ್ ವ್ಯಾಪ್ತಿಯ 4 ಪರೀಕ್ಷಾ ಕೇಂದ್ರಗಳಲ್ಲಿ ಜೂ.7 ರಿಂದ 9 ರವರೆಗೆ ಹಾಗೂ ಜೂ.11 ರಿಂದ 23 ರವರೆಗೆ 2024ನೇ ಸಾಲಿನ ಪ್ರಥಮ ಅಧಿವೇಶನದ ಇಲಾಖಾ ಪರೀಕ್ಷೆಗಳು ನಡೆಯಲಿದ್ದು, ಪರೀಕ್ಷಾ ದಿನಗಳಂದು ಬೆಳಿಗ್ಗೆ 6 ಗಂಟೆಯಿಂದ ಸಂಜೆ 6 ಗಂಟೆಯವರೆಗೆ ಸದರಿ ಪರೀಕ್ಷಾ ಕೇಂದ್ರಗಳ ಸುತ್ತಲೂ ಕಲಂ 144 ರಡಿಯಲ್ಲಿ 200 ಮೀಟರ್ ವ್ಯಾಪ್ತಿಯಲ್ಲಿ ನಿಷೇಧಾಜ್ಞೆಯನ್ನು ಘೋಷಿಸಲಾಗಿದೆ.

ಪೀಪಲ್ಸ್ ಪಾರ್ಕ್‌ನ ಬಾಲಕಿಯರ ಸರ್ಕಾರಿ ಪದವಿ ಪೂರ್ವ ಕಾಲೇಜು (ಪ್ರೌಢಶಾಲಾ ವಿಭಾಗ), ಸರ್ಕಾರಿ ವಿಭಜಿತ ಮಹಾ ರಾಜ ಪದವಿ ಪೂರ್ವ ಕಾಲೇಜು (ಪ್ರೌಢಶಾಲಾ ವಿಭಾಗ), ಕೈಲಾಸಪುರಂನ ಪುಲಿಕೇಶಿ ರಸ್ತೆಯ ಸರ್ಕಾರಿ ಪ್ರೌಢಶಾಲೆ, ಜೆಎಲ್‌ಬಿ ರಸ್ತೆಯ ಮಹಾರಾಜ ಸರ್ಕಾರಿ ಪದವಿ ಪೂರ್ವ ಕಾಲೇಜು (ಪ್ರೌಢಶಾಲಾ ವಿಭಾಗ) ಪ್ರದೇಶಗಳಲ್ಲಿ ನಿಷೇಧಾಜ್ಞೆಯನ್ನು ಹೊರಡಿಸಲಾಗಿದ್ದು, ಪರೀಕ್ಷಾರ್ಥಿಗಳು, ಪರೀಕ್ಷಾ ಸಿಬ್ಬಂದಿಗಳನ್ನು ಹೊರತುಪಡಿಸಿ ಅನಧಿಕೃತ ವ್ಯಕ್ತಿಗಳು ಸಂಚರಿಸಬಾರದು. ಯಾರೂ ಆಕ್ಷೇಪಾರ್ಹ ವಸ್ತುಗಳನ್ನು ಒಯ್ಯಬಾರದು ಹಾಗೂ ಪರೀಕ್ಷಾ ಕೇಂದ್ರಗಳ ಸುತ್ತಮುತ್ತಲಿರುವ ಜೆರಾಕ್ಸ್ ಅಂಗಡಿಗಳನ್ನು ಪರೀಕ್ಷಾ ಅವಧಿಯಲ್ಲಿ ಮುಚ್ಚುವಂತೆ ಆದೇಶಿಸ ಲಾಗಿದೆ ಎಂದು ನಗರ ಪೊಲೀಸ್ ಆಯುಕ್ತ ಬಿ.ರಮೇಶ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ನೂತನ ಅಧ್ಯಕ್ಷರಿಗೆ ಅಭಿನಂದನೆ...



ದಿ ಮೈಸೂರು ಕೋ–ಅಪರೇಟಿವ್ ಬ್ಯಾಂಕ್‌ನ ನೂತನ ಅಧ್ಯಕ್ಷರಾಗಿ ಆಯ್ಕೆಯಾದ ಎನ್.ಸೋಮಣ್ಣ ಅವರನ್ನು ಬ್ಯಾಂಕ್ ಉಪಾಧ್ಯಕ್ಷೆ ಪಿ.ಸವಿತಾ, ನಿರ್ದೇಶಕರಾದ ರಾಜಕೀಯ ರವಿಕುಮಾರ್, ಎನ್‌ಬಿಎಂ ಮಂಜು, ಜೆ.ಯೋಗೇಶ್, ಹೆಚ್.ಹರೀಶ್ ಕುಮಾರ್, ಕೆ.ಉಮಾಶಂಕರ್, ಎನ್.ಅರವಿಂದ, ಪಡುವಾರಹಳ್ಳಿ ಎಂ.ರಾಮಕೃಷ್ಣ ಸಿ.ರೇವಣ್ಣ, ಎನ್.ಆರ್. ರವಿಕುಮಾರ್, ಪಿ.ರಾಜೇಶ್ವರಿ, ಕಾರ್ಯದರ್ಶಿ ಕೆ.ರಂಜಿತ್ ಗೌಡ ಅಭಿನಂದಿಸಿದರು.

ನಿಧನ


ಬಿ.ಸಿ.ಸೋಮಯ್ಯ



ಮೈಸೂರು, ಜೂ.7– ಮೈಸೂರು ರೂಪಾನಗರದ ನಿವಾಸಿ, ನೌಕಾಪಡೆ ನಿವೃತ್ತ ಅಧಿಕಾರಿ ಬಿ.ಸಿ.ಸೋಮಯ್ಯ(62) ಅವರು ಶುಕ್ರವಾರ ನಿಧನರಾದರು.

ಇವರು ಪತ್ನಿ, ಪುತ್ರ ಸೇರಿದಂತೆ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ವಿಜಯನಗರ ರುದ್ರಭೂಮಿಯಲ್ಲಿ ಶನಿವಾರ ಮಧ್ಯಾಹ್ನ 1 ಗಂಟೆಗೆ ಅಂತ್ಯಸಂಸ್ಕಾರ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಎನ್.ನಾರಾಯಣ



ಮೈಸೂರು, ಜೂ.7– ಮೈಸೂರಿನ ಒಂಟಿಕೊಪ್ಪಲು ನಿವಾಸಿ ಹಾಗೂ ಮೈಸೂರು ವಿವಿ ನಿವೃತ್ತ ಸಿಬ್ಬಂದಿ ಎನ್.ನಾರಾಯಣ (77) ಶುಕ್ರವಾರ ರಾತ್ರಿ ನಿಧನರಾದರು.

ಮೃತರು ಪತ್ನಿ ಲಕ್ಷ್ಮಿ, ಇಬ್ಬರು ಪುತ್ರಿಯರು, ಓರ್ವ ಪುತ್ರ ಸೇರಿದಂತೆ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ನಾಳೆ(ಜೂ.8) ಮಧ್ಯಾಹ್ನ 12 ಗಂಟೆಗೆ ಗೋಕುಲಂನಲ್ಲಿರುವ ರುದ್ರಭೂಮಿಯಲ್ಲಿ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಐದನೇ ಪುಟದಿಂದ

ಪ್ರಧಾನಿಯಾಗಿ ಮೋದಿ ಪ್ರಮಾಣ

ಈ ವೇಳೆ ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ.ನಡ್ಡಾ, ರಾಜನಾಥ್ ಸಿಂಗ್, ಅಮಿತ್ ಶಾ, ತೆಲುಗು ದೇಶಂ ಪಾರ್ಟಿ ಅಧ್ಯಕ್ಷ ಚಂದ್ರಬಾಬು ನಾಯ್ಡು, ಆಂಧ್ರದ ಜನಸೇನಾ ಅಧ್ಯಕ್ಷ ಪವನ್ ಕಲ್ಯಾಣ್, ಬಿಹಾರ ಮುಖ್ಯಮಂತ್ರಿಗಳೂ ಆದ ಜೆಡಿಯು ನಾಯಕ ನಿತೀಶ್ ಕುಮಾರ್, ಲೋಕಶಕ್ತಿ ಪಕ್ಷದ ಚಿರಾಗ್ ಪಾಸ್ವಾನ್, ಕಾಂಗ್ರೆಸ್ ನ್ಯಾಷನಲಿಸ್ಟ್ ಪಾರ್ಟಿಯ ಅಜಿತ್ ಪವಾರ್, ಶಿವಸೇನೆಯ ಏಕನಾಥ್ ಶಿಂಧೆ, ಕರ್ನಾಟಕದ ಮಾಜಿ ಮುಖ್ಯಮಂತ್ರಿಗಳೂ ಆದ ಜೆಡಿಎಸ್ ರಾಜ್ಯಾಧ್ಯಕ್ಷ ಹೆಚ್.ಡಿ.ಕುಮಾರಸ್ವಾಮಿ, ಕೇರಳದಿಂದ ಸಂಸದರಾಗಿ ಆಯ್ಕೆಯಾಗಿರುವ ಸುರೇಶ್ ಗೋಪಿ, ಕಂಗನಾ ರಣಾವತ್ ಸೇರಿದಂತೆ ಎನ್‌ಡಿಎ ಮೈತ್ರಿಕೂಟದ ಎಲ್ಲಾ ಪಕ್ಷಗಳ ನಾಯಕರು ಭಾಗವಹಿಸಿದ್ದರು. ಈ ಸಭೆಯಲ್ಲಿ ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ.ನಡ್ಡಾ ಅವರು, ಮೋದಿಯವರ ನಾಯಕತ್ವವನ್ನು ಬೆಂಬಲಿಸುವ ನಿರ್ಣಯವನ್ನು ಪ್ರಸ್ತಾಪಿಸಿದಾಗ ಮಿತ್ರ ಪಕ್ಷಗಳು ಅದನ್ನು ಸರ್ವಾನುಮತದಿಂದ ಅಂಗೀಕರಿಸಿದವು. ಈ ವೇಳೆ ಮಾತನಾಡಿದ ಟಿಡಿಪಿ ಅಧ್ಯಕ್ಷ ಚಂದ್ರಬಾಬು ನಾಯ್ಡು, ಭಾರತವನ್ನು ಮತ್ತಷ್ಟು ಮುಂದಕ್ಕೆ ಕೊಂಡೊಯ್ಯಲು ಮೋದಿಯವರ ನಾಯಕತ್ವ ಅತ್ಯವಶ್ಯಕ. ಮೋದಿ ನಾಯಕತ್ವದಲ್ಲಿ ಭಾರತ ಶೂನ್ಯ ಬಡತನದ ರಾಷ್ಟ್ರವಾಗುವುದು ಸಾಧ್ಯವಾಗುತ್ತದೆ. ಅವರ ನಾಯಕತ್ವದಲ್ಲಿ ಈಗಾಗಲೇ ನಮ್ಮ ದೇಶ ಆರ್ಥಿಕವಾಗಿ ಅಭಿವೃದ್ಧಿ ಹೊಂದಿದೆ. ಮುಂದಿನ ದಿನಗಳಲ್ಲಿ ವಿಶ್ವದ ಟಾಪ್-2ರಲ್ಲಿ ಭಾರತ ಸ್ಥಾನ ಪಡೆಯುವ ವಿಶ್ವಾಸವಿದೆ. ಬಿಜೆಪಿ, ಜನಸೇನಾ ಮತ್ತು ಟಿಡಿಪಿ ಆಂಧ್ರಪ್ರದೇಶದಲ್ಲಿ ಜೊತೆಯಾಗಿ ಕೆಲಸ ಮಾಡಿದ್ದರ ಪರಿಣಾಮ ನಮಗೆ ಉತ್ತಮ ಫಲಿತಾಂಶ ದೊರೆತಿದೆ ಎಂದರು.

ಜೆಡಿಎಸ್ ರಾಜ್ಯಾಧ್ಯಕ್ಷ ಹೆಚ್.ಡಿ.ಕುಮಾರಸ್ವಾಮಿ ಮಾತನಾಡಿ, ಕಳೆದ 10 ವರ್ಷದಲ್ಲಿ ನರೇಂದ್ರ ಮೋದಿಯವರು ದೇಶದಲ್ಲಿ ಮಾಡಿರುವ ಕಾರ್ಯವನ್ನು ಮೆಚ್ಚಿ ಬಿಜೆಪಿ ಜೊತೆ ಮೈತ್ರಿ ಮಾಡಿಕೊಂಡೆವು. ಮೋದಿಯವರೊಂದಿಗೆ ನಮ್ಮ ಸಂಪೂರ್ಣ ಬೆಂಬಲ ಇದೆ ಎಂದು ಹೇಳಿದರು.

ಜೆಡಿಯು ಅಧ್ಯಕ್ಷ ನಿತೀಶ್ ಕುಮಾರ್ ಮಾತನಾಡಿ, ಕಳೆದ 10 ವರ್ಷ ಮೋದಿಯವರು ಉತ್ತಮವಾಗಿ ದೇಶದ ಸೇವೆ ಮಾಡಿದ್ದಾರೆ. ಮುಂದಿನ ಅವಧಿಯಲ್ಲಿ ಉಳಿದಿರುವ ಅಭಿವೃದ್ಧಿ ಕಾರ್ಯಗಳನ್ನು ಮಾಡಲಿದ್ದಾರೆ. ಅಲ್ಲಿ-ಇಲ್ಲಿ ವಿರೋಧ ಪಕ್ಷದವರು ಗೆದ್ದಿದ್ದಾರೆ. ಮುಂದಿನ ಬಾರಿ ಅವರು ಸೋಲಲಿದ್ದಾರೆ. ಮೋದಿಯವರಿಗೆ ಈಗ ಮತ್ತೊಂದು ಅವಕಾಶ ಸಿಕ್ಕಿದೆ. ಅವರಿಗೆ ನಮ್ಮ ಬೆಂಬಲವಿದೆ ಎಂದು.

ವಿಶ್ವಾಸದಿಂದ ದೇಶ ಮುನ್ನಡೆಸುತ್ತೇನೆ : ಮೋದಿ

7 ರಾಜ್ಯಗಳಲ್ಲಿ ಎನ್‌ಡಿಎ ಸರ್ಕಾರ ನಡೆಸುತ್ತಿದೆ. ಗೋವಾ, ಈಶಾನ್ಯ ರಾಜ್ಯಗಳಾಗಿರಬಹುದು. ಈ ರಾಜ್ಯಗಳಲ್ಲಿ ಕ್ರಿಶ್ಚಿಯನ್ ಸೇರಿದಂತೆ ಇತರ ಸಮುದಾಯಗಳು ಹೆಚ್ಚಿವೆ. ಈ ರಾಜ್ಯಗಳಲ್ಲೂ ಎನ್‌ಡಿಎ ಸರ್ಕಾರ ನಡೆಸುತ್ತಿದೆ. ಚುನಾವಣಾ ಪೂರ್ವದಲ್ಲಿ ಮೈತ್ರಿ ಮಾಡಿಕೊಂಡು ಚುನಾವಣೆ ಎದುರಿಸಿದ ಇತಿಹಾಸದಲ್ಲಿ ಎನ್‌ಡಿಎಗೆ ಸಿಕ್ಕ ಯಶಸ್ಸು ಇತರ ಯಾವುದೇ ಮೈತ್ರಿಕೂಟಕ್ಕೆ ಸಿಕ್ಕಿಲ್ಲ ಎಂದು ಮೋದಿ ಹೇಳಿದ್ದಾರೆ.

ಸರ್ಕಾರ ನಡೆಸಲು ಬಹುಮತ ಅತ್ಯವಶ್ಯಕ. ಆದರೆ ದೇಶ ಮುನ್ನಡೆಸಲು ಸರ್ವ ಮತ ಅತೀ ಅವಶ್ಯಕ. ದೇಶದ ಪ್ರತಿಯೊಬ್ಬರಿಗೂ ನಾನು ಭರವಸೆ ನೀಡುತ್ತಿದ್ದೇನೆ. ನೀವು ನಮಗೆ ಸರ್ಕಾರ ನಡೆಸಲು ಬಹುಮತ ನೀಡಿದ್ದೀರಿ. ಇದೀಗ ನಿಮ್ಮ ಅಭಿವೃದ್ಧಿ, ಸುರಕ್ಷತೆ ವಿಚಾರದಲ್ಲಿ ಹಿಂದಿನಂತೆ ಯಾವುದೇ ರಾಜೀ ಇಲ್ಲದೆ ಕೆಲಸ ಮಾಡುತ್ತೇವೆ ಎಂದು ಮೋದಿ ಹೇಳಿದ್ದಾರೆ. ಕಳೆದ ಮೂರು ದಶಕಗಳ ಎನ್‌ಡಿಎ ಮೈತ್ರಿ ಪಯಣದಲ್ಲಿ ನಾನೂ ಭಾಗವಾಗಿದ್ದೇನೆ. ಒಬ್ಬ ಕಾರ್ಯಕರ್ತನಾಗಿ ಈ ಮೈತ್ರಿ ಒಕ್ಕೂಟದಲ್ಲಿ ಕೆಲಸ ಮಾಡಿದ್ದೇನೆ. ಇದೀಗ ನಿಮ್ಮೆಲ್ಲರ ಜೊತೆ ಕೆಲಸ ಮಾಡುವ ಅವಕಾಶ ಸಿಕ್ಕಿದೆ. ಎನ್‌ಡಿಎ ಮೈತ್ರಿ ಪಕ್ಷಗಳು ದೇಶ ಮೊದಲು ಅನ್ನೋ ಗುರಿಯೊಂದಿಗೆ ಮುನ್ನಡೆಯುವ ಪಕ್ಷಗಳು ಎಂದು ಮೋದಿ ಹೇಳಿದ್ದಾರೆ.

ಎನ್‌ಡಿಎ ಅತ್ಯಂತ ಯಶಸ್ವಿ ಮೈತ್ರಿ

ಇರುವ ಎಲ್ಲಾ ಅವಕಾಶಗಳನ್ನು ಬಳಸಿಕೊಳ್ಳುತ್ತೇವೆ. ಎನ್‌ಡಿಎ ಸುಮಾರು 3 ದಶಕಗಳನ್ನು ಪೂರೈಸಿದೆ. ಇದು ಸಾಮಾನ್ಯ ವಿಷಯವಲ್ಲ. ಇದು ಭಾರತದ ಇತಿಹಾಸದಲ್ಲಿ ಅತ್ಯಂತ ಯಶಸ್ವಿ ಮೈತ್ರಿಯಾಗಿದೆ. ನಮ್ಮ ಎಲ್ಲಾ ನಿರ್ಧಾರಗಳಲ್ಲಿ ಸರ್ವಾನುಮತವನ್ನು ತಲುಪುವುದು ನಮ್ಮ ಗುರಿಯಾಗಿದೆ. ಮೈತ್ರಿಯು 'ಸರ್ವ ಪಂಥ್ ಸಂಭವ' (ಎಲ್ಲಾ ಧರ್ಮಗಳು ಸಮಾನ) ತತ್ವಕ್ಕೆ ಬದ್ಧವಾಗಿದೆ ಎಂದು ಹೇಳಿದ ಮೋದಿ, ಮುಂದಿನ 10 ವರ್ಷಗಳಲ್ಲಿ ಎನ್‌ಡಿಎ ಸರ್ಕಾರವು ಉತ್ತಮ ಆಡಳಿತ, ಅಭಿವೃದ್ಧಿ ಮತ್ತು ಸಾಮಾನ್ಯ ನಾಗರಿಕರ ಜೀವನದಲ್ಲಿ ಕನಿಷ್ಠ ಹಸ್ತಕ್ಷೇಪಕ್ಕೆ ಒತ್ತು ನೀಡಲಿದೆ ಎಂದು ಹೇಳಿದರು.

ಎನ್‌ಡಿಎ ಸಾವಯವ ಮೈತ್ರಿ: ಎನ್‌ಡಿಎ ಮೊದಲು ರಾಷ್ಟ್ರಕ್ಕೆ ಬದ್ಧವಾಗಿರುವ ಗುಂಪು. ಇಂದು ನಾನು ಭಾರತದ ರಾಜಕೀಯ ವ್ಯವಸ್ಥೆಯಲ್ಲಿ ಎನ್‌ಡಿಎ ಸಾವಯವ ಮೈತ್ರಿ ಎಂದು ಹೇಳಬಲ್ಲೆ. ಅಟಲ್ ಬಿಹಾರಿ ವಾಜಪೇಯಿ, ಪ್ರಕಾಶ್ ಸಿಂಗ್ ಬಾದಲ್, ಬಾಳಾ ಸಾಹೇಬ್ ಠಾಕ್ರೆ ಅವರಂತಹ ಮಹಾನ್ ನಾಯಕರನ್ನು ಬಿತ್ತಿದ ಬೀಜಕ್ಕೆ ಇಂದು ಭಾರತದ ಜನರು ನೀರೆರೆದಿದ್ದಾರೆ. ಮತ್ತು ಆ ಬೀಜವನ್ನು ಫಲಪ್ರದವಾಗಿ ಪರಿವರ್ತಿಸಿದ್ದಾರೆ. ಅಂತಹ ಮಹಾನ್ ನಾಯಕರ ಪರಂಪರೆಯನ್ನು ನಾವೆಲ್ಲರೂ ಹೊಂದಿದ್ದೇವೆ. ಅದರ ಬಗ್ಗೆ ನಮಗೆ ಹೆಮ್ಮೆ ಇದೆ. ಕಳೆದ 10 ವರ್ಷಗಳಲ್ಲಿ, ನಾವು ಅದೇ ಪರಂಪರೆ ಅದೇ ಮೌಲ್ಯಗಳೊಂದಿಗೆ ಮುಂದುವರಿಯಲು ಮತ್ತು ದೇಶವನ್ನು ಮುನ್ನಡೆಸಲು ಪ್ರಯತ್ನಿಸಿದ್ದೇವೆ ಎಂದರು.

ಇಂಡಿಯಾ ಕೂಟ ತರಾಟೆಗೆ: ಪ್ರತಿಪಕ್ಷಗಳ ವಿರುದ್ಧ ವಾಗ್ದಾಳಿ ನಡೆಸಿದ ಅವರು, ಈ ಫಲಿತಾಂಶವನ್ನು ಎನ್‌ಡಿಎಗೆ ದೊಡ್ಡ ವಿಜಯವೆಂದು ನೋಡುತ್ತೇನೆ. ಪ್ರತಿಪಕ್ಷಗಳು ನಮ್ಮ ಗೆಲುವನ್ನು ತಿರಸ್ಕರಿಸಲು ಪ್ರಯತ್ನಿಸಿದವು. ಇವಿಎಂ, ಆಧಾರ್ ನಂತಹ ತಾಂತ್ರಿಕ ಪ್ರಗತಿಗಳು ಬಂದರೂ ಇಂಡಿಯಾ ಮೈತ್ರಿಕೂಟದ ಜನರು ಹಿಂದಿನ ಶತಮಾನಕ್ಕೆ ಸೇರಿದವರು ಎಂದು ನಾನು ಭಾವಿಸುತ್ತೇನೆ. ಇವಿಎಂಗಳನ್ನು ಮತ್ತು ಚುನಾವಣಾ ಆಯೋಗವನ್ನು ಪ್ರಶ್ನಿಸುವವರನ್ನು ಫಲಿತಾಂಶದ ನಂತರ ಮೌನಗೊಳಿಸಿರುವುದು ಭಾರತದ ಪ್ರಜಾಪ್ರಭುತ್ವದ ಶಕ್ತಿ ಎಂದು ಮೋದಿ ಬಣ್ಣಿಸಿದರು.

ಪ್ರಮುಖ ವಿರೋಧ ಪಕ್ಷ ಕಾಂಗ್ರೆಸ್ ಕಳೆದ 10 ವರ್ಷಗಳಲ್ಲಿ 100 ಸ್ಥಾನಗಳ ಗಡಿಯನ್ನು ಮುಟ್ಟಲು ಸಾಧ್ಯವಾಗಿಲ್ಲ. ಕಳೆದ ಮೂರು ಲೋಕಸಭಾ ಚುನಾವಣೆಗಳಲ್ಲಿ ಅವರು ಗಳಿಸಿದ ಒಟ್ಟು ಸ್ಥಾನಗಳು ಈ ಚುನಾವಣೆಯಲ್ಲಿ ಬಿಜೆಪಿಗೆ ಹೋಲಿಸಿದರೆ ಕಡಿಮೆಯಾಗಿದೆ ಎಂದು ಕಾಂಗ್ರೆಸ್ ವಿರುದ್ಧ ವಾಗ್ದಾಳಿ ನಡೆಸಿದರು.

ಇತ್ತೀಚೆಗೆ ಕರ್ನಾಟಕದಲ್ಲಿ ಕಾಂಗ್ರೆಸ್ ಸರ್ಕಾರ ಅಸ್ತಿತ್ವಕ್ಕೆ ಬಂದಿದೆ. ಆ ಸರ್ಕಾರ ಹೇಗೆ ಬಂತು ಎಂದು ಸಣ್ಣ ಬಾಲಕನನ್ನು ಕೇಳಿದರೂ ಹೇಳುತ್ತಾನೆ. ಆದರೆ ಈಗ ಆ ಸರ್ಕಾರ ಜನರ ವಿಶ್ವಾಸವನ್ನು ಕಳೆದುಕೊಂಡಿದೆ. ಈ ಚುನಾವಣೆಯಲ್ಲಿ ಅಲ್ಲಿನ ಜನರು ಎನ್‌ಡಿಎ ಮೇಲೆ ವಿಶ್ವಾಸವಿಟ್ಟಿದ್ದಾರೆ ಎಂದರು.

ಪವನ ಶಕ್ತಿ: ಆಂಧ್ರದ ಜನಸೇನಾ ಅಧ್ಯಕ್ಷ ಪವನ್ ಕಲ್ಯಾಣ್ ಅವರನ್ನು ಹಾಡಿ ಹೊಗಳಿದ ಮೋದಿ, ಪವನ ಎಂದರೆ ಗಾಳಿ. ಇದು ಗಾಳಿಯಲ್ಲ, ಬಿರುಗಾಳಿ ಎಂದರಲ್ಲದೆ, ಪವನ್ ಕಲ್ಯಾಣ್ ಎರಡು ಲೋಕಸಭಾ ಸ್ಥಾನಗಳನ್ನು ಹಾಗೂ ವಿಧಾನಸಭಾ ಕ್ಷೇತ್ರಕ್ಕೆ ಸ್ಪರ್ಧಿಸಿದ್ದ ಎಲ್ಲಾ 21 ಸ್ಥಾನಗಳಲ್ಲಿ ಜಯಭೇರಿ ಬಾರಿಸಿ, ದೊಡ್ಡ ಬಿರುಗಾಳಿಯನ್ನೇ ಎಬ್ಬಿಸಿದ್ದಾರೆ ಎಂದರು.

ಸಚಿವ ಸ್ಥಾನ ಮತ್ತು ಖಾತೆಗಳ ಕುರಿತ ಮಾಧ್ಯಮ ವರದಿಗಳಿಗೆ ಬಲಿಯಾಗಬೇಡಿ. 'ಇಂಡಿಯಾ' ಬಣ ಕೂಡ ಅಂತಹ ವಿಷಯಗಳ ಬಗ್ಗೆ ನಕಲಿ ಸುದ್ದಿ ಹರಡಬಹುದು ಎಂದು ಮೋದಿ ಅವರು ಎನ್‌ಡಿಎ ಸಂಸದರಿಗೆ ಸಲಹೆ ನೀಡಿದರು. ಕಳೆದೆರಡು ದಿನಗಳಿಂದ ಟಿವಿಯಲ್ಲಿ ಪ್ರಸಾರವಾಗುತ್ತಿರುವ ವಿಷಯಗಳಲ್ಲಿ ಯಾವುದೇ ಸತ್ಯ ಕಂಡುಬಂದಿಲ್ಲ. ಅಂತಹ ಮಾಹಿತಿಯನ್ನು ಎಲ್ಲಿಂದ ಪಡೆಯುತ್ತಾರೆ ಎಂದು ಅವರನ್ನು ಕೇಳಬೇಕು. ಕಳೆದ 10 ವರ್ಷಗಳಲ್ಲಿ ಇಂತಹ ಸಂದರ್ಭ ಬಂದಿರಲಿಲ್ಲ ಎಂದು ಹೇಳಿದರು.

ಕೆಲವರು ನಿಮ್ಮನ್ನು ಸಂಪರ್ಕ ಮಾಡಿ, ನನಗೆ ದೊಡ್ಡ ಮಟ್ಟದ ಕಾಂಟೆಕ್ಟ್ಸ್ ಇವೆ. ನಿಮ್ಮನ್ನು ಮಂತ್ರಿಯನ್ನಾಗಿ ಮಾಡುತ್ತೇವೆ ಎಂದು ಹೇಳುತ್ತಾರೆ. ಆದರೆ ನೀವು ಅದನ್ನು ನಂಬಬೇಡಿ. ಈಗ ತಂತ್ರಜ್ಞಾನವು ಎಷ್ಟರಮಟ್ಟಿಗೆ ಬೆಳೆದಿದೆ ಎಂದರೆ ಜನ ನನ್ನ ಸಹಿಯೊಂದಿಗೆ ಸಚಿವರ ಪಟ್ಟಿಯನ್ನೇ ಹೊರತರಬಹುದು. ಇನ್ನು ಕೆಲವು ಬುದ್ಧಿವಂತರು ಖಾತೆಗಳನ್ನು ಸಹ ಹಂಚಿಕೆ ಮಾಡಬಹುದು ಎಂದು ಮೋದಿ ಹೇಳಿದರು.

ಮಧ್ಯಂತರ ಜಾಮೀನು

ಪ್ರಕರಣದ ಮೊದಲ ಆರೋಪಿ ಎಚ್.ಡಿ. ರೇವಣ್ಣ ಮತ್ತವರ ಪತ್ನಿ ಭವಾನಿ ರೇವಣ್ಣ ಸೂಚನೆ ಮೇರೆಗೆ ಎರಡನೇ ಆರೋಪಿ ಸತೀಶ್ ಬಾಬಣ್ಣ ತಮ್ಮ ತಾಯಿಯನ್ನು ಮನೆಯಿಂದ ಕರೆದುಕೊಂಡು ಹೋಗಿದ್ದರು. ನಂತರ ತಾಯಿ ಎಲ್ಲಿದ್ದಾರೆ ಎಂಬ ಮಾಹಿತಿ ನೀಡಿಲ್ಲ ಎಂದು ದೂರುದಾರರು ಆರೋಪಿಸಿದ್ದರು.

ಈ ಸಂಬಂಧ ಕೆ.ಆರ್.ನಗರ ಠಾಣೆಯ ಪೊಲೀಸರು ಅಪಹರಣ ಆರೋಪ ಎಫ್‌ಐಆರ್ ದಾಖಲಿಸಿದ್ದರು. ಈ ಕುರಿತು ತನಿಖೆ ನಡೆಸುತ್ತಿರುವ ಎಸ್‌ಐಟಿ, ವಿಚಾರಣೆಗೆ ಹಾಜರಾಗುವಂತೆ ಸೂಚಿಸಿ ಭವಾನಿ ರೇವಣ್ಣ ಅವರಿಗೆ ನೋಟಿಸ್ ಜಾರಿ ಮಾಡಿತ್ತು. ಇದರಿಂದ ನಿರೀಕ್ಷಣಾ ಜಾಮೀನು ಕೋರಿ ಭವಾನಿ ರೇವಣ್ಣ ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಿದ್ದರು. ಅರ್ಜಿಯನ್ನು ಮೇ 31ರಂದು ನ್ಯಾಯಾಲಯ ತಿರಸ್ಕರಿಸಿತ್ತು. ಬಳಿಕ ಭವಾನಿ ರೇವಣ್ಣ ಹೈಕೋರ್ಟ್ ಮೆಟ್ಟಿಲೇರಿದ್ದರು. ಇದರ ಬೆನ್ನಲ್ಲೇ ಜೂನ್ 3 ರಂದು ನಿರೀಕ್ಷಣಾ ಜಾಮೀನು ಮಂಜೂರು ಮಾಡುವಂತೆ ಕೋರಿ ಹೈಕೋರ್ಟ್‌ಗೆ ಕ್ರಿಮಿನಲ್ ಅರ್ಜಿ ಸಲ್ಲಿಸಿದ್ದರು. ಅರ್ಜಿಯಲ್ಲಿ ಎಫ್‌ಐಆರ್ ದಾಖಲಿಸಿರುವ ಮೈಸೂರಿನ ಕೆ.ಆರ್.ನಗರ ಠಾಣಾ ಪೊಲೀಸರನ್ನು (ಸದ್ಯ ತನಿಖೆ ನಡೆಸುತ್ತಿರುವ ಎಸ್‌ಐಟಿ) ಪ್ರತಿವಾದಿ ಮಾಡಲಾಗಿದೆ. ಈ ಅರ್ಜಿ ವಿಚಾರಣೆಗೆ ನಿಗದಿಯಾಗಬೇಕಿದೆ. ಅಪಹರಣ ಪ್ರಕರಣದಲ್ಲಿ ತಮ್ಮ ಯಾವುದೇ ಪಾತ್ರವಿಲ್ಲ. ಬಂಧಿಸಿ ವಿಚಾರಣೆಗೆ ಒಳಪಡಿಸುವ ಅವಶ್ಯಕತೆ ಇಲ್ಲ. ಹಾಗಾಗಿ, ನಿರೀಕ್ಷಣಾ ಜಾಮೀನು ಮಂಜೂರು ಮಾಡಬೇಕು. ಜಾಮೀನು ಮಂಜೂರಾತಿಗೆ ನ್ಯಾಯಾಲಯ ವಿಧಿಸುವ ಎಲ್ಲ ಷರತ್ತುಗಳಿಗೂ ಬದ್ಧವಾಗಿರುವುದಾಗಿ ಅರ್ಜಿಯಲ್ಲಿ ಭವಾನಿ ರೇವಣ್ಣ ಉಲ್ಲೇಖಿಸಿದ್ದರು.

ನರಸಿಂಹರಾಜ ಕ್ಷೇತ್ರದಲ್ಲಿ ಆನ್‌ಲೈನ್ ಜೂಜು, ಮಾದಕ ವಸ್ತು ಬಳಕೆ ಹೆಚ್ಚಳ

ಕಟ್ಟುನಿಟ್ಟಿನ ಕ್ರಮಕ್ಕಾಗಿ ಜಮೀಯತ್-ಉಲಮಾ-ಇ-ಹಿಂದ್ ಸಂಘಟನೆಯಿಂದ ಪೊಲೀಸ್ ಆಯುಕ್ತರಿಗೆ ಮನವಿ



ಜಮೀಯತ್–ಉಲಮಾ–ಇ–ಹಿಂದ್ ಸಂಘಟನೆಯಿಂದ ನಗರ ಪೊಲೀಸ್ ಆಯುಕ್ತರಿಗೆ ಮನವಿ ಪತ್ರ ಸಲ್ಲಿಸಲಾಯಿತು.

ಮೈಸೂರು, ಜೂ.7(ಜಿಎ)–ಮೈಸೂರಿನ ನರಸಿಂಹರಾಜ ಕ್ಷೇತ್ರದಲ್ಲಿ ತಡರಾತ್ರಿವರೆಗೂ ತೆರೆಯುವ ಟೀ ಅಂಗಡಿ ಸೇರಿದಂತೆ ವಿವಿಧ ಅಂಗಡಿಗಳಲ್ಲಿ ಯುವಕರು ಗುಂಪು–ಗುಂಪಾಗಿ ಕುಳಿತು ಆನ್‌ಲೈನ್ ಜೂಜು ಮತ್ತು ಮಾದಕ ವಸ್ತುಗಳ ಬಳಕೆಗೆ ದಾಸರಾಗಿ ಜಗಳ, ಹಲ್ಲೆ, ಕೊಲೆಗಳು ಹೆಚ್ಚಾಗುತ್ತಿದ್ದು, ಸೂಕ್ತ ಕ್ರಮ ಕೈಗೊಳ್ಳುವಂತೆ ನಗರ ಪೊಲೀಸ್ ಆಯುಕ್ತರಿಗೆ ಜಮೀಯತ್–ಉಲಮಾ–ಇ–ಹಿಂದ್ ಸಂಘಟನೆ ಗುರುವಾರ ಮನವಿ ಸಲ್ಲಿಸಿದೆ.

ಸಾರ್ವಜನಿಕರ ಹಿತದೃಷ್ಟಿಯಿಂದ ಜಮೀಯತ್–ಉಲಮಾ–ಇ–ಹಿಂದ್ ಸಂಘಟನೆ ನಗರ ಪೊಲೀಸ್ ಆಯುಕ್ತ ಬಿ.ರಮೇಶ್ ಅವರನ್ನು ಭೇಟಿ ಮಾಡಿ ನರಸಿಂಹರಾಜ ಕ್ಷೇತ್ರದಲ್ಲಿ ಅನೇಕ ಟೀ ಅಂಗಡಿಗಳು ಮತ್ತು ಇತರ ಮಳಿಗೆಗಳು ಮಧ್ಯರಾತ್ರಿಯವರೆಗೂ ತೆರೆದಿರುತ್ತವೆ. ಇಲ್ಲಿ ಯುವಕರು ಗುಂಪು ಕಟ್ಟಿಕೊಂಡು ಕುಳಿತಿರುತ್ತಾರೆ. ಇದು ಸಣ್ಣ ಜಗಳಗಳಿಗೆ ಕಾರಣವಾಗುತ್ತದೆ, ಕೆಲವೊಮ್ಮೆ ದೊಡ್ಡ ಪ್ರಮಾಣದ ಜಗಳಗಳು ಮತ್ತು ಹಲ್ಲೆಗಳಿಗೆ ಕಾರಣವಾಗುತ್ತಿದೆ. ಇದ್ದರಿಂದ ಎಷ್ಟೋ ಕೊಲೆಗಳು ನಡೆದು ಹೋಗಿವೆ ಎಂದು ತಿಳಿಸಿದೆ.

ಯುವಕರು ಈ ಅಂಗಡಿಗಳಲ್ಲಿ ಧೂಮಪಾನ ಮಾಡಲು, ಗಂಟೆಗಟ್ಟಲೆ ಚಾಟ್ ಮಾಡಲು ಮತ್ತು ಆನ್‌ಲೈನ್ ಆಟಗಳನ್ನು ಆಡುವುದು ಮತ್ತು ಡಿಜಿಟಲ್ ಜೂಜಿನಲ್ಲಿ ತೊಡಗುತ್ತಾರೆ. ಅವರ ವಾಹನಗಳನ್ನು ಅಕ್ಕಪಕ್ಕದ ಮನೆಗಳ ಮುಂದೆ ನಿಲ್ಲಿಸಿ ನಿವಾಸಿಗಳಿಗೆ ತೊಂದರೆ ಉಂಟುಮಾಡುತ್ತಿದ್ದು, ಮತ್ತೊಂದೆಡೆ ಯುವಕರಲ್ಲಿ ಡ್ರಗ್ಸ್ ಮತ್ತು ಗಾಂಜಾ ಬಳಕೆಯು ಹೇರಳವಾಗುತ್ತಿದೆ. ಆದರಿಂದ ನಿಗದಿತ ಗಡುವಿನೊಳಗೆ ಅಂಗಡಿಗಳನ್ನು ಮುಚ್ಚುವ ಮೂಲಕ ಕಾನೂನುಬಾಹಿರ ಚಟುವಟಿಕೆಗಳಿಗೆ ಕಡಿವಾಣ ಹಾಕುವುದು ಮತ್ತು ಗುಂಪುಗಳ ಮೇಲೆ ನಿಗಾ ಇಡಲು ಮತ್ತು ಅಪರಾಧಿಗಳನ್ನು ಗುರುತಿಸಲು ಚಹಾ ಅಂಗಡಿಗಳಲ್ಲಿ ಸಿಸಿಟಿವಿ ಕ್ಯಾಮರಾಗಳನ್ನು ಅಳವಡಿಸುವುದನ್ನು ಕಡ್ಡಾಯಗೊಳಿಸುವಂತೆ ಮನವಿ ಮಾಡಿದರು.

ಸಾರ್ವಜನಿಕರ ಪರವಾಗಿ ಜಮಿಯತ್–ಉಲಮಾ–ಇ–ಹಿಂದ್ ಸಂಘಟನೆ ಅಡಿಯಲ್ಲಿ ಎನ್‌ಜಿಒಗಳು, ಸಾಮಾಜಿಕ ಸಂಸ್ಥೆಗಳು ಮತ್ತು ಜನಪ್ರತಿನಿಧಿಗಳು ಸಲ್ಲಿಸಿದ ಮನವಿ ಸ್ವೀಕರಿಸಿದ ನಗರ ಪೊಲೀಸ್ ಆಯುಕ್ತರು ಸೂಕ್ತ ಕ್ರಮಕೈಗೊಳ್ಳುವುದಾಗಿ ಭರವಸೆ ನೀಡಿದರು.

ನರಸಿಂಹರಾಜ ಕ್ಷೇತ್ರ ಮಾತ್ರವಲ್ಲದೇ ನಗರದಾದ್ಯಂತ ಎಲ್ಲಾ ಮಾದರಿಯ ಅಂಗಡಿಗಳು, ಹೋಟೆಲ್‌ಗಳು, ಬಾರ್‌ಗಳು, ರೆಸ್ಟೋರೆಂಟ್‌ಗಳು ಮತ್ತು ಟೀ ಔಟ್‌ಲೆಟ್‌ಗಳು ಕಡ್ಡಾಯವಾಗಿ ರಾತ್ರಿ 10.30ಕ್ಕೆ ಮುಚ್ಚಬೇಕು. ಪೊಲೀಸ್ ಇಲಾಖೆಯಿಂದ ರಾತ್ರಿ ವಿಶೇಷ ಕಾರ್ಯಾಚರಣೆ ನಡೆಸಲಾಗುತ್ತದೆ ಎಂದು ನಗರ ಪೊಲೀಸ್ ಆಯುಕ್ತ ಬಿ.ರಮೇಶ್ 'ಮೈಸೂರು ಮಿತ್ರ'ನಿಗೆ ತಿಳಿಸಿದರು.

ಎಲ್ಲಾ ಅಧಿಕಾರಿಗಳು ಮತ್ತು ಸಿಬ್ಬಂದಿ ಚುನಾವಣಾ ಸಂಬಂಧಿತ ಕರ್ತವ್ಯದಲ್ಲಿ ನಿರತರಾಗಿದ್ದರು. ಇಂದಿನಿಂದ ರಾತ್ರಿ 10.30ರ ಗಡುವನ್ನು ಕಟ್ಟುನಿಟ್ಟಾಗಿ ಜಾರಿಗೊಳಿಸಲಾಗುವುದು. ರಾತ್ರಿಯಲ್ಲಿ ಕಾರ್ಯನಿರ್ವಹಿಸುವ ವಾಣಿಜ್ಯ ಸಂಸ್ಥೆಗಳನ್ನು ಹೊರತುಪಡಿಸಿ ಈ ನಿಯಮವು ಎಲ್ಲಾ ಅಂಗಡಿಗಳಿಗೆ ಅನ್ವಯಿಸುತ್ತದೆ. ಕಾನೂನು ಮತ್ತು ಸುವ್ಯವಸ್ಥೆ ಮತ್ತು ಅಪರಾಧ ತಡೆಯೇ ನಮ್ಮ ಆದ್ಯತೆಯಾಗಿದೆ. ಎಲ್ಲಾ ವಿಭಾಗದ ಎಸಿಪಿಗಳು ಮತ್ತು ಇನ್ಸ್‌ಪೆಕ್ಟರ್‌ಗಳ ಸಭೆ ಕರೆದು ರಾತ್ರಿ ಕಾರ್ಯಾಚರಣೆ ನಡೆಸಲು ಸೂಚನೆ ನೀಡಲಾಗುವುದು ಎಂದರು.

ಮಾಜಿ ಮೇಯರ್ ಹಾಗೂ ಕರ್ನಾಟಕ ವಸ್ತುಪ್ರದರ್ಶನ ಪ್ರಾಧಿಕಾರದ ಅಧ್ಯಕ್ಷರೂ ಆದ ಅಯೂಬ್ ಖಾನ್ ಮಾತನಾಡಿ, ನರಸಿಂಹರಾಜ ಕ್ಷೇತ್ರದ ಎರಡು ಪೊಲೀಸ್ ಠಾಣೆಗಳ ವ್ಯಾಪ್ತಿಯಲ್ಲಿ ಯುವಕರಲ್ಲಿ ಹೆಚ್ಚಿದ ಗಾಂಜಾ ಮತ್ತು ಇತರ ಮಾದಕ ವಸ್ತುಗಳ ಸೇವನೆ ಮತ್ತು ಮಾರಾಟದಿಂದ ಹಲ್ಲೆ, ಕೊಲೆಗಳ ಹೆಚ್ಚಳಕ್ಕೆ ಕಾರಣವಾಗಿದೆ. ಈ ಪರಿಸ್ಥಿತಿಯು ಆತಂಕಕಾರಿಯಾಗಿದ್ದು, ಕ್ಷುಲ್ಲಕ ಕಾರಣ ಗಳಿಗಾಗಿ ಹದಿಹರೆಯದವರ ಹತ್ಯೆಯು ಸಾರ್ವಜನಿಕ ರಲ್ಲಿ ಭಯವನ್ನು ಹುಟ್ಟುಹಾಕಿದೆ. ಈ ಹಿಂದೆಯೂ ಈ ಸಮಸ್ಯೆಗಳನ್ನು ಪ್ರಸ್ತಾಪಿಸಿದ್ದೇವೆ, ಆದರೆ ಯಾವುದೇ ಕ್ರಮ ಕೈಗೊಂಡಿಲ್ಲ ಎಂದು ಬೇಸರ ವ್ಯಕ್ತಪಡಿಸಿದರು.

ಈ ವೇಳೆ ಮಾಜಿ ಮೇಯರ್ ಆರೀಫ್ ಹುಸೇನ್, ಮಾಜಿ ಕಾರ್ಪೊರೇಟರ್‌ಗಳಾದ ಕೆ.ಸಿ. ಶೌಕತ್ ಪಾಷಾ, ಹಜರತ್ ಉಲ್ಲಾ, ಅಯಾಜ್ ಪಾಷಾ (ಪಂಡು), ಜಮಿಯತ್–ಉಲ್–ಅಮಾ–ಇ–ಹಿಂದ್‌ನ ಫಯಾಜ್ ಸಾಹೇಬ್, ಮೌಲಾನಾ ಅರ್ಷದ್ ಮತ್ತು ಇತರ ಸದಸ್ಯರು ಇದ್ದರು.

ಡ್ರಗ್ಸ್ ದಂಧೆ, ಪುಂಡರ, ರೌಡಿಗಳ ಅಟ್ಟಹಾಸ ನಿಗ್ರಹಿಸಿ

ಅಧಿಕಾರಿಗಳಿಗೆ ಪೊಲೀಸ್ ಆಯುಕ್ತ ಬಿ. ರಮೇಶ್ ತಾಕೀತು



ಮೈಸೂರು, ಜೂ. 7(ಆರ್‌ಕೆ)– ಮೈಸೂರು ನಗರದಾದ್ಯಂತ ಪುಂಡರ ಹಾವಳಿ, ಡ್ರಗ್ಸ್ ದಂಧೆ, ರೌಡಿಗಳ ಅಟ್ಟಹಾಸಕ್ಕೆ ಕಡಿವಾಣ ಹಾಕುವಂತೆ ನಗರ ಪೊಲೀಸ್ ಆಯುಕ್ತ ಬಿ. ರಮೇಶ್ ಇಂದಿಲ್ಲಿ ಅಧಿಕಾರಿಗಳಿಗೆ ತಾಕೀತು ಮಾಡಿದ್ದಾರೆ.

ನಜರ್‌ಬಾದ್‌ನ ಪೊಲೀಸ್ ಆಯುಕ್ತರ ಕಚೇರಿ ಸಭಾಂಗಣದಲ್ಲಿ ಶುಕ್ರವಾರ ಸಂಜೆ ಇನ್ಸ್‌ಪೆಕ್ಟರ್ ಮತ್ತು ಅಧಿಕಾರಿಗಳೊಂದಿಗೆ ಸಭೆ ನಡೆಸಿದ ಅವರು, ಇದೀಗ ಲೋಕಸಭಾ ಸಾರ್ವತ್ರಿಕ ಚುನಾವಣೆ, ವಿಧಾನಪರಿಷತ್ ಚುನಾವಣೆ, ಅವುಗಳ ಮತ ಎಣಿಕೆ ಕಾರ್ಯ ಮುಗಿದಿದೆ.

ಚುನಾವಣಾ ಮಾದರಿ ನೀತಿ ಸಂಹಿತೆ ಅಂತ್ಯಗೊಂಡಿರುವುದರಿಂದ ನಿಯಮ, ನಿರ್ಬಂಧಗಳು ತೆರವಾಗಿರುವುದರಿಂದ ಪುಂಡರು, ಸಮಾಜಘಾತಕ ಶಕ್ತಿಗಳು, ರೌಡಿಗಳು, ರಿಯಲ್ ಎಸ್ಟೇಟ್ ದಂಧೆಯಲ್ಲಿ ತೊಡಗಿ ಶಾಂತಿಗೆ ಭಂಗ ಉಂಟು ಮಾಡಲು ಯತ್ನಿಸಬಹುದು. ಕೆಲವರು ಮಾದಕ ವಸ್ತುಗಳ ಸೇವನೆ, ಮಾರಾಟದಲ್ಲಿ ತೊಡಗಿ ಸಮಾಜದ ಅಶಾಂತಿಗೆ ಕಾರಣವಾಗಬಹುದು ಎಂದು ಆಯುಕ್ತರು ಎಚ್ಚರಿಸಿದ್ದಾರೆ.

ಹಗಲು ಮತ್ತು ರಾತ್ರಿ ಗಸ್ತನ್ನು ಪರಿಣಾಮಕಾರಿಯಾಗಿ ಮಾಡಿ ಪೊಲೀಸರು ಜನರಿಗೆ ಕಾಣುವಂತಿದ್ದರೆ ಎಷ್ಟೋ ಅಪರಾಧ ಕೃತ್ಯಗಳು ನಿಯಂತ್ರಣವಾಗುತ್ತವೆ. ಮದ್ಯದಂಗಡಿ, ಬಾರ್ ಅಂಡ್ ರೆಸ್ಟೋರೆಂಟ್, ಶಾಪಿಂಗ್ ಕಾಂಪ್ಲೆಕ್ಸ್, ಕ್ಲಬ್‌ಗಳು ನಿಗದಿತ ಸಮಯದಲ್ಲಿ ಮುಚ್ಚುವಂತೆ ನೋಡಿ ಕೊಳ್ಳಬೇಕು, ಆಸ್ತಿಗಾಗಿ ನಡೆಯುವ ಅಪರಾಧ ಕೃತ್ಯಗಳ ತಡೆಯುವುದು, ಪತ್ತೆ ಕಾರ್ಯ ಚುರುಕುಗೊಳಿಸಲು ಆದ್ಯತೆ ನೀಡಬೇಕೆಂದು ಬಿ. ರಮೇಶ್, ಅಧಿಕಾರಿಗಳಿಗೆ ಸೂಚಿಸಿದರು.

ಅಲ್ಲಲ್ಲಿ ಚೆಕ್ ಪಾಯಿಂಟ್‌ಗಳನ್ನು ಹಾಕಿ ತಪಾಸಣೆ ನಡೆಸಿ, ಮಧ್ಯರಾತ್ರಿವರೆಗೆ ಅನಗತ್ಯವಾಗಿ ಅಡ್ಡಾಡುವವರ ಮಾಹಿತಿ ಪಡೆದು ಸಂಶಯ ಬಂದರೆ ವಿಚಾರಣೆ ನಡೆಸಬೇಕು. ಪೊಲೀಸ್ ಕರ್ತವ್ಯದ ಬಗ್ಗೆ ಸಿಬ್ಬಂದಿಗಳಲ್ಲಿ ಆಗಿಂದಾಗ್ಗೆ ಕಾರ್ಯದಕ್ಷತೆ ಅರಿವು ಮೂಡಿಸುವುದು ಅಧಿಕಾರಿಗಳ ಜವಾಬ್ದಾರಿಗಳಲ್ಲೊಂದು ಎಂದು ಅವರು ಇದೇ ಸಂದರ್ಭ ಕಿವಿಮಾತು ಹೇಳಿದರು.

ಕಾನೂನು ಮತ್ತು ಸುವ್ಯವಸ್ಥೆ ಕಾಪಾಡುವುದು, ಅಪರಾಧ ತಡೆ ಮತ್ತು ಪತ್ತೆಗೆ ಆದ್ಯತೆ, ಮಹಿಳೆಯರು, ಮಕ್ಕಳು, ವೃದ್ಧರು, ನಾಗರಿಕರ ರಕ್ಷಣೆ ಮತ್ತು ಭದ್ರತೆ ನಮ್ಮ ಜವಾಬ್ದಾರಿಯಾಗಿದೆ. ಸಮರ್ಥವಾಗಿ ಕರ್ತವ್ಯ ನಿರ್ವಹಿಸುವ ಮೂಲಕ ಇಲಾಖೆಗೆ, ಸರ್ಕಾರಕ್ಕೆ ಒಳ್ಳೆಯ ಹೆಸರು ತರಬೇಕು ಹಾಗೂ ಸಾರ್ವಜನಿಕರಿಗೆ ಪೊಲೀಸರ ಮೇಲೆ ವಿಶ್ವಾಸ ಮೂಡಿಸಬೇಕೆಂದು ರಮೇಶ್ ಸಲಹೆ ನೀಡಿದರು.

ಡಿಸಿಪಿಗಳಾದ ಎಂ. ಮುತ್ತುರಾಜ್, ಎಸ್. ಜಾಹ್ನವಿ, ಮಾರುತಿ, ಮೌಂಟೆಡ್ ಕಂಪನಿ ಕಮಾಂಡೆಂಟ್ ವಿ. ಶೈಲೇಂದ್ರ, ಎಸಿಪಿಗಳು ಹಾಗೂ ಇನ್ಸ್‌ಪೆಕ್ಟರ್‌ಗಳು ಸಭೆಯಲ್ಲಿ ಉಪಸ್ಥಿತರಿದ್ದರು.

ಕಲ್ಯಾಣ ಮಂಟಪದಲ್ಲಿ ಕಳ್ಳತನ: ಆರೋಪಿ ಬಂಧನ

4.75 ಲಕ್ಷ ರೂ. ಮೌಲ್ಯದ ಚಿನ್ನಾಭರಣ ವಶಕ್ಕೆ

ಮೈಸೂರು, ಜೂ.7(ಎಂಕೆ)– ಕಲ್ಯಾಣ ಮಂಟಪದಲ್ಲಿ ಕಳ್ಳತನ ಮಾಡುತ್ತಿದ್ದ ಆರೋಪಿಯನ್ನು ಬಂಧಿಸಿರುವ ನಜರ್‌ಬಾದ್ ಠಾಣೆ ಪೊಲೀಸರು, ಬಂಧಿತನಿಂದ 4.75 ಲಕ್ಷ ರೂ. ಮೌಲ್ಯದ 72 ಗ್ರಾಂ ಚಿನ್ನಾಭರಣ ವಶಕ್ಕೆ ಪಡೆದಿದ್ದಾರೆ.

ಮೈಸೂರಿನ ಸಿದ್ದಾರ್ಥನಗರ ವಿನಯ ಮಾರ್ಗದಲ್ಲಿರುವ ಕನಕ ಭವನದಲ್ಲಿ ಮೇ 31 ರಂದು ವ್ಯಾನಿಟಿ ಬ್ಯಾಗ್‌ನಲ್ಲಿದ್ದ ಚಿನ್ನಾಭರಣ ಕಳ್ಳತನವಾಗಿತ್ತು. ಈ ಸಂಬಂಧ ಪ್ರಕರಣ ದಾಖಲಿಸಿಕೊಂಡ ನಜರ್‌ಬಾದ್ ಠಾಣೆ ಪೊಲೀಸರು ಅದೇ ದಿನ ರಾತ್ರಿ ಕನಕ ಭವನದ ವಿನಯ ಮಾರ್ಗದಲ್ಲಿ ಅನುಮಾನಾಸ್ಪದವಾಗಿ ಓಡಾಡುತ್ತಿದ್ದ ವ್ಯಕ್ತಿಯೊರ್ವನನ್ನು ಬಂಧಿಸಿ, ವಿಚಾರಣೆಗೆ ಒಳಪಡಿಸಿದಾಗ ಕಳ್ಳತನ ಮಾಡಿರುವುದಾಗಿ ಒಪ್ಪಿಕೊಂಡಿದ್ದಾನೆ.

ಬಂಧಿತ ಆರೋಪಿಯಿಂದ 4,75,000 ರೂ ಮೌಲ್ಯದ 72 ಗ್ರಾಂ ಚಿನ್ನಾಭರಣವನ್ನು ಪೊಲೀಸರು ವಶ ಪಡಿಸಿಕೊಂಡಿದ್ದಾರೆ. ಮೈಸೂರು ನಗರ ಅಪರಾಧ ಮತ್ತು ಸಂಚಾರ ವಿಭಾಗದ ಡಿಸಿಪಿ ಎಸ್.ಜಾಹ್ನವಿ ಮಾರ್ಗದರ್ಶನದಲ್ಲಿ ದೇವರಾಜ ಉಪವಿಭಾಗದ ಎಸಿಪಿ ಶಾಂತಮಲ್ಲಪ್ಪ ನೇತೃತ್ವದಲ್ಲಿ ನಜರ್‌ಬಾದ್ ಪೊಲೀಸ್ ಠಾಣೆಯ ಇನ್ಸ್‌ಪೆಕ್ಟರ್ ಎಂ.ಮಹದೇವಸ್ವಾಮಿ, ಪಿ.ಎಸ್.ಐ ಶ್ರೀನಿವಾಸ್ ಪಾಟೀಲ್, ಸಿಬ್ಬಂದಿಗಳಾದ ಬಿ.ವಿ.ಪ್ರಕಾಶ್, ಎಸ್. ಸತೀಶ್‌ಕುಮಾರ್, ಕಿರಣ್ ರಾಥೋಡ್, ಮಲ್ಲಿಕಾರ್ಜುನ, ಸಂಜು ಮತ್ತು ಸಿಡಿಆರ್ ಘಟಕದ ಪಿ.ಕುಮಾರ್ ಪತ್ತೆ ಕಾರ್ಯಾಚರಣೆಯಲ್ಲಿ ಭಾಗವಹಿಸಿದ್ದರು.

ಇನ್ನೋವಾ ಡಿಕ್ಕಿ: ಸ್ಕೂಟರ್ ಸವಾರರಿಗೆ ಗಾಯ

ಮೈಸೂರು, ಜೂ.7(ಎಂಕೆ)– ಟೊಯೊಟಾ ಇನ್ನೋವಾ ಕಾರು ಡಿಕ್ಕಿ ಹೊಡೆದು ಸ್ಕೂಟರ್ ಸವಾರರಿಬ್ಬರು ಗಾಯಗೊಂಡಿರುವ ಘಟನೆ ಮೈಸೂರಿನ ನಂಜುಮಳಿಗೆ ಬಳಿ ನಡೆದಿದೆ.

ಸುಣ್ಣದಕೇರಿ ನಿವಾಸಿ ಶ್ರೀನಿವಾಸ್(58), ಮೋಹನ್ ಕುಮಾರ್(14) ಗಾಯಗೊಂಡವರಾಗಿದ್ದಾರೆ. ಜೂ.2 ರಂದು ರಾತ್ರಿ 7.30ರ ವೇಳೆ ಶ್ರೀನಿವಾಸ್ ಹಾಗೂ ಅವರ ಅಕ್ಕನ ಮಗಳ ಮಗ ಮೋಹನ್ ಕುಮಾರ್ ಹೊಂಡಾ ಆಕ್ಟಿವಾ ಸ್ಕೂಟರ್‌ನಲ್ಲಿ (ಕೆಎ.09. ಹೆಚ್‌ಡಬ್ಲೂ.0120) ನಂಜುಮಳಿಗೆ ಪಿಶ್‌ಬೂತ್ ಬಳಿ ಹೋಗುತ್ತಿದ್ದಾಗ ವೇಗವಾಗಿ ಬಂದ ಇನ್ನೋವಾ ಕಾರು (ಕೆಎ.01.ಡಿ.2075) ಡಿಕ್ಕಿ ಹೊಡೆದಿದೆ. ಪರಿಣಾಮ ಸ್ಕೂಟರ್ ಸವಾರರಿಬ್ಬರು ಗಂಭೀರವಾಗಿ ಗಾಯಗೊಂಡಿದ್ದು, ಖಾಸಗಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಈ ಸಂಬಂಧ ಕೆ.ಆರ್.ಸಂಚಾರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಗೋಕುಲಂ ಕಾಂಟೂರ್ ರೋಡ್, ಸುತ್ತಲಿನ ಬಡಾವಣೆಗಳಲ್ಲಿ

ಅಪಾರ್ಟ್‌ಮೆಂಟ್, ಶಾಪಿಂಗ್ ಕಾಂಪ್ಲೆಕ್ಸ್, ಮಳಿಗೆಗಳ ಮುಂದೆ ವಾಹನ ನಿಲುಗಡೆಗೆ ಆಕ್ಷೇಪ

ಸಾರ್ವಜನಿಕರಿಗೆ ಸೆಕ್ಯೂರಿಟಿ ಗಾರ್ಡ್‌ಗಳ ಮೂಲಕ ಧಮ್ಕಿ ಆರೋಪ



ಮೈಸೂರು, ಜೂ. 7(ಆರ್‌ಕೆ)– ರಸ್ತೆ ಬದಿಯಲ್ಲಿ ವಾಹನ ನಿಲುಗಡೆ ಮಾಡಲು ಮೈಸೂರಿನ ಕೆಲ ಪ್ರತಿಷ್ಠಿತ ವಸತಿ ಬಡಾವಣೆಗಳ ಪ್ರಮುಖ ಅಪಾರ್ಟ್‌ಮೆಂಟ್, ಶಾಪಿಂಗ್ ಕಾಂಪ್ಲೆಕ್ಸ್‌ಗಳ ಸೆಕ್ಯೂರಿಟಿ ಗಾರ್ಡ್‌ಗಳು ಅಡ್ಡಿಪಡಿಸುವುದಲ್ಲದೇ, ಅವಾಚ್ಯ ಶಬ್ಧಗಳಿಂದ ನಿಂದಿಸಿ ಧಮ್ಕಿ ಹಾಕುತ್ತಿದ್ದಾರೆ ಎಂಬ ದೂರುಗಳು ಕೇಳಿ ಬರುತ್ತಿವೆ.

ಪ್ರಮುಖವಾಗಿ ಗೋಕುಲಂನ ಕಾಂಟೂರ್ ರಸ್ತೆ, ಮುಖ್ಯ ರಸ್ತೆ, ಜಯಲಕ್ಷ್ಮಿಪುರಂನ ಪ್ರಮುಖ ವಾಣಿಜ್ಯ ರಸ್ತೆಗಳಲ್ಲಿ ಈ ರೀತಿಯ ದುರ್ವರ್ತನೆಗಳು ನಿರಂತರವಾಗಿ ನಡೆಯುತ್ತಿದ್ದು, ಅಪಾರ್ಟ್‌ಮೆಂಟ್, ದೊಡ್ಡ ದೊಡ್ಡ ಮಳಿಗೆಗಳ ಮಾಲೀಕರು ತಮ್ಮ ಕಟ್ಟಡದ ಎದುರಿನ ರಸ್ತೆಯೂ ತಮ್ಮ ಆಸ್ತಿ ಎಂಬಂತೆ ತಾವು ಭದ್ರತೆಗಾಗಿ ನೇಮಿಸಿಕೊಂಡ ಸಿಬ್ಬಂದಿಗಳ ಮೂಲಕ ಸಾರ್ವಜನಿಕರು ವಾಹನಗಳ ನಿಲುಗಡೆಗೆ ಅಡ್ಡಿ ಮಾಡಿಸುತ್ತಿದ್ದಾರೆ ಎಂಬ ದೂರುಗಳು ವ್ಯಾಪಕವಾಗಿವೆ.

ನಿರ್ಮಾಣಗಳ ಮುಂದೆ ರಸ್ತೆ ಬದಿ ಖಾಲಿ ಜಾಗದಲ್ಲಿ ನಾಗರಿಕರ ಕಾರು ಅಥವಾ ದ್ವಿಚಕ್ರ ವಾಹನ ನಿಲ್ಲಿಸಲು ಮುಂದಾಗುತ್ತಿದ್ದಂತೆಯೇ ಓಡಿ ಬರುವ ಅಲ್ಲಿನ ಸೆಕ್ಯೂರಿಟಿ ಗಾರ್ಡ್‌ಗಳು, ಆಕ್ಷೇಪ ವ್ಯಕ್ತಪಡಿಸುವುದಲ್ಲದೆ, ವಾಗ್ವಾದಕ್ಕಿಳಿದು, ರಸ್ತೆ ತಮ್ಮದೇ ಎಂಬಂತೆ ವರ್ತಿಸುತ್ತಿದ್ದಾರೆ ಎಂದು ಕೆಲ ವಾಹನಗಳ ಮಾಲೀಕರು ದೂರಿದ್ದಾರೆ.

ಸರ್ಕಾರಕ್ಕೆ ತೆರಿಗೆ ಪಾವತಿಸುವ ನಾಗರಿಕರು ರಸ್ತೆಬದಿ ಖಾಲಿ ಇರುವೆಡೆ ಯಾರಿಗೂ ತೊಂದರೆಯಾಗದಂತೆ ವಾಹನ ನಿಲ್ಲಿಸಿದರೆ ಕಟ್ಟಡಗಳ ಮಾಲೀಕರೇಕೆ ಸೆಕ್ಯೂರಿಟಿ ಗಾರ್ಡ್‌ಗಳನ್ನು ಬಿಟ್ಟು ತಡೆಯುತ್ತಿದ್ದಾರೆ ಎಂಬ ಪ್ರಶ್ನೆ ಉದ್ಭವಿಸಿದೆ.

ಸೆಕ್ಯೂರಿಟಿ ಗಾರ್ಡ್‌ಗಳು ಆಯಾ ಅಪಾರ್ಟ್‌ಮೆಂಟ್, ಶಾಪಿಂಗ್ ಕಾಂಪ್ಲೆಕ್ಸ್ ಅಥವಾ ಅಂಗಡಿ ವ್ಯಾಪ್ತಿಗೆ ಸೀಮಿತವಾಗಿ ಭದ್ರತಾ ಕೆಲಸ ಮಾಡಬೇಕೇ ಹೊರತು, ಸಾರ್ವಜನಿಕ ರಸ್ತೆಯ ಉಸಾಬರಿ ಅವರಿಗೇಕೆ ಎಂದು ಪ್ರಶ್ನಿಸಲಾಗುತ್ತಿದ್ದು, ತೆರಿಗೆ ಹಣ ಪಾವತಿಸುವ ನಾಗರಿಕನಿಗೆ ಸಾರ್ವಜನಿಕ ರಸ್ತೆ ಬಳಕೆ, ವಾಹನ ನಿಲುಗಡೆ ಮಾಡಲು ಹಕ್ಕುಳ್ಳವನಾಗಿರುತ್ತಾನೆ ಎಂಬ ಸಾಮಾನ್ಯ ಜ್ಞಾನವೂ ಅಡ್ಡಿಪಡಿಸುವವರಿಗಿಲ್ಲ ದಂತಾಗಿದೆ ಎಂದು ಅಸಮಾಧಾನ ವ್ಯಕ್ತವಾಗುತ್ತಿದೆ.

ರಸ್ತೆಬದಿ ವಾಹನ ನಿಲ್ಲಿಸುವುದರಿಂದ ವಾಹನ ಸಂಚಾರಕ್ಕಾಗಲೀ, ಅಪಾರ್ಟ್‌ಮೆಂಟ್, ಅಂಗಡಿಗಳಿಗೆ ಜನರು ಓಡಾಡುವುದಕ್ಕಾಗಲೀ ತೊಂದರೆ ಉಂಟಾಗದಿದ್ದರೂ, ಆಕ್ಷೇಪ ವ್ಯಕ್ತಪಡಿಸಿ, ರಸ್ತೆಯೂ ತಮ್ಮ ಆಸ್ತಿ ಎಂಬಂತೆ ಅಟ್ಟಹಾಸ ಮೆರೆಯುವವರ ಬಗ್ಗೆ ಸಂಬಂಧಪಟ್ಟ ಸ್ಥಳೀಯ ಸಂಸ್ಥೆ, ಪೊಲೀಸ್ ಅಧಿಕಾರಿಗಳು ನಿಗಾ ಇರಿಸಿ ಸಾರ್ವಜನಿಕರ ಸ್ವಾಭಿಮಾನ ಮತ್ತು ಹಿತರಕ್ಷಿಸಬೇಕೆಂದು ಸಾರ್ವಜನಿಕರು ಒತ್ತಾಯಿಸಿದ್ದಾರೆ.

ಶಾಸ್ತ್ರ ಜ್ಞಾನ ಕಲಿಕೆಯ ಹಸಿವು, ಅಧ್ಯಯನದಿಂದ ವಿದ್ವತ್ ಸಂಪಾದನೆ

ಉಡುಪಿ ಶ್ರೀ ಭಂಡಾರಕೇರಿ ಮಠಾಧೀಶ ಶ್ರೀ ವಿದ್ಯೇಶ ತೀರ್ಥ ಸ್ವಾಮೀಜಿ ಅಭಿಮತ



ಉಡುಪಿ ಶ್ರೀ ಭಂಡಾರಕೇರಿ ಮಠಾಧೀಶ ಶ್ರೀ ವಿದ್ಯೇಶ ತೀರ್ಥ ಸ್ವಾಮೀಜಿಯವರನ್ನು ಸ್ವಾಗತಿಸಲಾಯಿತು.

ಮೈಸೂರು, ಜೂ.7(ಎಂಕೆ)– ಶಾಸ್ತ್ರ ಜ್ಞಾನ ಕಲಿಕೆಯ ಹಸಿವು ಮತ್ತು ಅಧ್ಯಯನದಿಂದ ವಿದ್ವತ್ತನ್ನು ಸಂಪಾದಿಸಬಹುದು ಎಂದು ಉಡುಪಿ ಶ್ರೀ ಭಂಡಾರಕೇರಿ ಮಠಾಧೀಶ ಶ್ರೀ ವಿದ್ಯೇಶ ತೀರ್ಥ ಸ್ವಾಮೀಜಿ ಹೇಳಿದರು.

ಸೋಸಲೆ ಶ್ರೀ ವ್ಯಾಸರಾಜ ಮಹಾಸಂಸ್ಥಾನ ಮತ್ತು ಶ್ರೀ ವ್ಯಾಸತೀರ್ಥ ವಿದ್ಯಾಪೀಠ ಸಂಯುಕ್ತಾಶ್ರಯದಲ್ಲಿ ಆಯೋಜಿಸಿರುವ ಶ್ರೀಮನ್ ನ್ಯಾಯ ಸುಧಾ ಮಂಗಳ ಮಹೋತ್ಸವದ ಪರೀಕ್ಷೆಗಳ ನಿಮಿತ್ತ ಶ್ರೀಮಠದಲ್ಲಿ ಆಯೋಜನೆ ಮಾಡಿದ್ದ ವಿದ್ವತ್ ಸಭೆಯ ಸಾನ್ನಿಧ್ಯ ವಹಿಸಿ, ಆಶೀರ್ವಚನ ನೀಡಿದ ಅವರು, ಜ್ಞಾನಾರ್ಜನೆ ವಿಷಯದಲ್ಲಿ ವಿದ್ಯಾರ್ಥಿ ಗಳು ಎಂದೂ ತೃಪ್ತರಾಗಬಾರದು. ವಿವಿಧ ಗ್ರಂಥಗಳ ಅಧ್ಯಯನ, ಅವಲೋಕನ, ಪರಾಮರ್ಶನ ಮತ್ತು ಚಿಂತನಗಳಿಂದ ಜ್ಞಾನವನ್ನು ವಿಸ್ತಾರ ಮಾಡಿಕೊಳ್ಳುತ್ತಿರಬೇಕು ಎಂದು ಸಲಹೆ ನೀಡಿದರು.

ಕೇವಲ ಪರೀಕ್ಷೆಗಾಗಿ ಓದುವುದು ಒಂದು ಹಂತದ ಸಾಧನೆ. ಆದರೆ ಆಚಾರ್ಯ ಮಧ್ವರ ಗ್ರಂಥಗಳ ಅಧ್ಯಯನ ಮಾಡುವುದು ಬದುಕಿನ ಅವಿಭಾಜ್ಯ ಅಂಗವಾಗಬೇಕು. ಆಚಾರ್ಯ ಮಧ್ವರು ನೀಡಿದ ಪ್ರತಿಯೊಂದು ಸಂದೇಶಗಳು ಎಲ್ಲಾ ಕಾಲಕ್ಕೆ ದಿಕ್ಸೂಚಿಯಾಗಿವೆ. ಮಧ್ವರ ಮಹೋನ್ನತ ಕೃತಿಗಳ ಸಾರಸಂಗ್ರಹವಾದ ಶ್ರೀಮನ್ ನ್ಯಾಯ ಸುಧಾ ಮತ್ತು ಶ್ರೀ ವ್ಯಾಸತೀರ್ಥರ ತತ್ವ ಚಂದ್ರಿಕಾ ಗ್ರಂಥಗಳ ಅಧ್ಯಯನವು ವಿದ್ಯಾರ್ಥಿಯ ಸರ್ವತೋಮುಖ ಅಭಿವೃದ್ಧಿಗೆ ನೆರವಾಗಲಿದೆ ಎಂದರು

ಸೋಸಲೆ ಶ್ರೀ ವಿದ್ಯಾಶ್ರೀಶ ತೀರ್ಥ ಸ್ವಾಮೀಜಿಯವರು ಜ್ಞಾನ ಪ್ರಸರಣ ಮತ್ತು ಶಾಸ್ತ್ರ ವಿದ್ಯೆ ಕಲಿಕೆಯ ನಿಟ್ಟಿನಲ್ಲಿ ಮಹತ್ತರವಾದ ಸಾಧನೆಯನ್ನು ಮಾಡಿದ್ದಾರೆ. ನೂರಾರು ಜನರಿಗೆ ಪಾಠ ಹೇಳಿರುವ ಅವರು ಈ ಬಾರಿ ನಾಲ್ಕು ವಿದ್ಯಾರ್ಥಿಗಳನ್ನು ಸುಧಾ ಪಂಡಿತರನ್ನಾಗಿಸಿ ಸಮಾಜಕ್ಕೆ ಬಹುದೊಡ್ಡ ಕೊಡುಗೆಯನ್ನು ನೀಡುವಲ್ಲಿ ಅಹರ್ನಿಶಿ ಶ್ರಮಿಸಿರುವುದು ಶ್ಲಾಘನೀಯ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಎತ್ತರಕ್ಕೆ ಬೆಳೆಯಿರಿ: ಬೆಂಗಳೂರಿನ ಭುವನಗಿರಿ ಆಶ್ರಮದ ಶ್ರೀ ಸುವಿದ್ಯೇಂದ್ರ ತೀರ್ಥ ಸ್ವಾಮೀಜಿ ಮಾತನಾಡಿ, ಸಮುದ್ರದಷ್ಟು ಆಳಕ್ಕೆ ಪರ್ವತದಷ್ಟು ಎತ್ತರಕ್ಕೆ ವ್ಯಾಸತೀರ್ಥ ವಿದ್ಯಾಪೀಠದ ವಿದ್ಯಾರ್ಥಿಗಳ ಕೀರ್ತಿ ಬೆಳಗಲಿ ಎಂದು ಆಶೀರ್ವಾದ ಮಾಡಿದರೆ, ಅದಮಾರು ಮಠದ ಶ್ರೀ ವಿಶ್ವಪ್ರಿಯ ತೀರ್ಥ ಸ್ವಾಮೀಜಿ, ಜ್ಞಾನಕ್ಕೆ ಸಮನಾದದು ಜಗತ್ತಿನಲ್ಲಿ ಯಾವುದೂ ಇಲ್ಲ. ಹಾಗಾಗಿ ವಿದ್ವತ್ತನ್ನು ಪಡೆಯಲು ಶ್ರಮ ಹಾಕಿದರೆ ಭವಿಷ್ಯದಲ್ಲಿ ಸುಖ ಸಂಪತ್ತು ಅರಸಿ ಬರುತ್ತವೆ ಎಂದರು.

ಉತ್ತರಾದಿ ಮಠದ ಶ್ರೀ ಸತ್ಯಾತ್ಮತೀರ್ಥ ಸ್ವಾಮೀಜಿ, ವಿದ್ಯಾರ್ಥಿ ಪ್ರಣವ ಆಚಾರ್ಯ, ಶ್ರೀಮನ್ ನ್ಯಾಯ ಸುಧಾ ತಾತ್ಪರ್ಯ ಚಂದ್ರಿಕಾ ಮತ್ತು ನ್ಯಾಯಾಮೃತ ಗ್ರಂಥಗಳ ಮೇಲಿನ ಪ್ರಶ್ನೆಗಳಿಗೆ ಸಮರ್ಥ ಉತ್ತರ ನೀಡಿ ಗಮನಸೆಳೆದರು. ಹಿರಿಯ ವಿದ್ವಾಂಸ ಹರಿದಾಸ ಭಟ್, ಮುಂಬೈ ವಿದ್ಯಾಪೀಠದ ಕುಲಪತಿ ಮಾಹುಲಿ ವಿದ್ಯಾಸಿಂಹಾಚಾರ್ಯ, ಬೆಂಗಳೂರಿನ ಜಯತೀರ್ಥ ವಿದ್ಯಾಪೀಠದ ಪ್ರಾಚಾರ್ಯ ವಿದ್ಯಾಧೀಶ ಆಚಾರ್ಯ ಗುತ್ತಲ, ಪಂ. ಪ್ರಹ್ಲಾದಾಚಾರ್ಯ, ಮಾತರಿಶ್ವಾಚಾರ್ಯ, ಡಿ.ಪಿ. ಅನಂತಾಚಾರ್ಯ, ಡಿ.ಪಿ. ಮಧುಸೂದನಾಚಾರ್ಯ. ಡಾ. ಶ್ರೀನಿಧಿ ಪ್ಯಾಟಿ ಮತ್ತಿತರರಿದ್ದರು.

ಮೈಸೂರು ಮಿತ್ರ ಶನಿವಾರ 8 ಜೂನ್ 2024

ಮಡಿಕೇರಿಯಲ್ಲಿ ಜಿಲ್ಲಾ ಮಟ್ಟದ ಮಕ್ಕಳ ಹಬ್ಬ

• 100ಕ್ಕೂ ಹೆಚ್ಚು ಶಾಲಾ ವಿದ್ಯಾರ್ಥಿಗಳು ಭಾಗಿ • ಪುಟಾಣಿಗಳ ನೃತ್ಯ ಪ್ರದರ್ಶನ




ಮಡಿಕೇರಿಯಲ್ಲಿ ನಡೆದ ಜಿಲ್ಲಾ ಮಟ್ಟದ ಮಕ್ಕಳ ಹಬ್ಬ ಕಾರ್ಯಕ್ರಮದಲ್ಲಿ ವಿವಿಧ ವೇಷ ಧರಿಸಿದ ಶಾಲಾ ವಿದ್ಯಾರ್ಥಿಗಳು. ಮತ್ತೊಂದು ಚಿತ್ರದಲ್ಲಿ ನೃತ್ಯ ಪ್ರದರ್ಶಿಸಿದ ಪುಟಾಣಿಗಳು.

ಮಡಿಕೇರಿ, ಜೂ.7–ಜಿಲ್ಲಾಡಳಿತ, ಜಿಲ್ಲಾ ಪಂಚಾಯಿತಿ, ಧಾರವಾಡದ ಕರ್ನಾಟಕ ಬಾಲವಿಕಾಸ ಅಕಾಡೆಮಿ ಹಾಗೂ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಸಹಯೋಗದೊಂದಿಗೆ ಶುಕ್ರವಾರ ಕೊಡಗು ಜಿಲ್ಲಾ ಶಿಶು ಕಲ್ಯಾಣ ಸಂಸ್ಥೆಯಲ್ಲಿ ಜಿಲ್ಲಾ ಮಟ್ಟದ ಮಕ್ಕಳ ಹಬ್ಬ ಕಾರ್ಯಕ್ರಮ ನಡೆಯಿತು.

ಪುಟಾಣಿಗಳ ಪ್ರಾರ್ಥನೆಯೊಂದಿಗೆ ಪ್ರಾರಂಭವಾದ ಕಾರ್ಯಕ್ರಮವನ್ನು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪ ನಿರ್ದೇಶಕ ನಟರಾಜ ಉದ್ಘಾಟಿಸಿದರು. ಜಿಲ್ಲೆಯ ವಿವಿಧೆಡೆಯಿಂದ 100ಕ್ಕೂ ಹೆಚ್ಚು ಮಕ್ಕಳು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು. ಶಾಲಾ ಮಕ್ಕಳು ಹಾಗೂ ಪುಟಾಣಿಗಳಿಗೆ ಕೊಡಗು ಜಿಲ್ಲೆಯ ಪಾರಂಪರಿಕ ಸಂಸ್ಕೃತಿ ಕುರಿತು ನೃತ್ಯ ಪ್ರದರ್ಶನ ಕಾರ್ಯಕ್ರಮ ಆಯೋಜಿಸಲಾಗಿತ್ತು.

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪನಿರ್ದೇಶಕ ನಟರಾಜ ಮಾತನಾಡಿ, ಶಾಲಾ ಶಿಕ್ಷಣದೊಂದಿಗೆ ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ಭಾಗವಹಿಸುವಿಕೆಯಿಂದ ಮಕ್ಕಳ ಸರ್ವತೋಮುಖ ಬೆಳವಣಿಗೆಗೆ ಸಹಕಾರಿಯಾಗಲಿದೆ ಎಂದು ತಿಳಿಸಿದರು.

ಸಾರ್ವಜನಿಕ ಶಿಕ್ಷಣ ಇಲಾಖೆಯ ಕ್ಷೇತ್ರ ಸಂಪನ್ಮೂಲಾಧಿಕಾರಿ ಮಂಜುಳಾ ಮಾತನಾಡಿ, ಮಕ್ಕಳಿಗೆ ಬದುಕುವ ಹಕ್ಕು ಮತ್ತು ಉತ್ತಮ ಆರೋಗ್ಯ, ಬಾಲ್ಯದಲ್ಲಿ ಆರೈಕೆ ಮತ್ತು ಅಭಿವೃದ್ಧಿ, ಬಿಡುವು, ಮನರಂಜನೆ ಮತ್ತು ಸಾಂಸ್ಕೃತಿಕ ಚಟುವಟಿಕೆಗಳು ಪ್ರಮುಖವಾದ ಅಂಶಗಳಾಗಿವೆ. ಇವುಗಳು ಮಕ್ಕಳ ಉತ್ತಮ ಬೆಳವಣಿಗೆಗೆ ಅನುಕೂಲವಾಗಲಿದೆ ಎಂದ ಅವರು, ಕಾರ್ಯಕ್ರಮದಲ್ಲಿ ಭಾಗವಹಿಸಿದ್ದ ಮಕ್ಕಳಿಗೆ ಶುಭ ಹಾರೈಸಿದರು. ಇದೇ ವೇಳೆ ಮಕ್ಕಳ ಹಬ್ಬದಲ್ಲಿ ಏರ್ಪಡಿಸಿದ್ದ ವಿವಿಧ ಸ್ಪರ್ಧೆಯಲ್ಲಿ ವಿಜೇತರಿಗೆ ಬಹುಮಾನ ವಿತರಿಸಲಾಯಿತು. ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಅಧಿಕಾರಿ ವಿಮಲಾ, ಸಹಾಯಕ ಶಿಶು ಅಭಿವೃದ್ಧಿ ಯೋಜನಾಧಿಕಾರಿ ಸವಿತಾ, ಪ್ರಥಮ ದರ್ಜೆ ಸಹಾಯಕಿ ಜಯಂತಿ, ಸಿಬ್ಬಂದಿಯಾದ ಹರೀಶ್ ಕೆ.ಎನ್, ಪಿ.ಎನ್.ಕಾವ್ಯ, ಪಿ.ಬಿ. ನಿತಿನ್, ಕೇಶಿನಿ, ಶೈಲಜಾ, ಬಿ.ಕೃಷ್ಣಪ್ಪ, ಸಿ.ಎ.ಪೂಜಾ ಇತರರು ಇದ್ದರು.

ಕಾರು, ಆಟೋ ಮುಖಾಮುಖಿ ಡಿಕ್ಕಿ: ನಾಲ್ವರಿಗೆ ಗಾಯ



ಆಟೋ, ಕಾರು ನಡುವೆ ಡಿಕ್ಕಿಯಾಗಿ ಆಟೋ ರಸ್ತೆಯಲ್ಲಿ ಪಲ್ಟಿಯಾಗಿರುವುದು.

ಮಡಿಕೇರಿ, ಜೂ.7–ಕಾರು ಮತ್ತು ಆಟೋ ನಡುವೆ ಮುಖಾಮುಖಿ ಡಿಕ್ಕಿಯಾಗಿ ಆಟೋ ಚಾಲಕ ಸೇರಿ ನಾಲ್ವರು ಗಂಭೀರವಾಗಿ ಗಾಯಗೊಂಡಿರುವ ಘಟನೆ ನಾಪೋಕ್ಲು–ಕೋಕೇರಿ ಮುಖ್ಯ ರಸ್ತೆಯ ಹಳೆ ತಾಲೂಕಿನ ನೂರಂಬಡದಲ್ಲಿ ಶುಕ್ರವಾರ ನಡೆದಿದೆ.

ಆಟೋ ಚಾಲಕ ಸಮದ್ ಹಾಗೂ ಪ್ರಯಾಣಿಕರು ಗಾಯಗೊಂಡು ಮಡಿಕೇರಿ ಜಿಲ್ಲಾಸ್ಪತ್ರೆಗೆ ದಾಖಲಾಗಿದ್ದಾರೆ. ಆಕಾಶ್ ತಮ್ಮ ಕಾರಿನಲ್ಲಿ ನಾಪೋಕ್ಲು ಕಡೆಯಿಂದ ಹಳೆ ತಾಲೂಕು ಮಾರ್ಗವಾಗಿ ನೂರಂಬಡದಲ್ಲಿ ಹೋಗುತ್ತಿದ್ದರು. ಸಮದ್ ಆಟೋದಲ್ಲಿ ಪ್ರಯಾಣಿಕರನ್ನು ಕೋಕೇರಿ ಕಡೆಯಿಂದ ನಾಪೋಕ್ಲುವಿಗೆ ಕರೆದುಕೊಂಡು ಹೋಗುತ್ತಿದ್ದರು. ಇದೇ ವೇಳೆ ಆಟೋ ಹಾಗೂ ಕಾರು ನಡುವೆ ಮುಖಾಮುಖಿ ಡಿಕ್ಕಿ ಸಂಭವಿಸಿದೆ. ಪರಿಣಾಮ ಆಟೋ ರಸ್ತೆಯಲ್ಲಿ ಪಲ್ಟಿಯಾಗಿ ಚಾಲಕ ಹಾಗೂ ಮೂವರು ಪ್ರಯಾಣಿಕರಿಗೆ ಗಂಭೀರ ಗಾಯಗಳಾಗಿವೆ. ತಕ್ಷಣ ನಾಪೋಕ್ಲು ಸಮುದಾಯ ಆರೋಗ್ಯ ಕೇಂದ್ರದಲ್ಲಿ ಗಾಯಾಳುಗಳಿಗೆ ಪ್ರಥಮ ಚಿಕಿತ್ಸೆ ಕೊಡಿಸಿ, ನಂತರ ಮಡಿಕೇರಿ ಜಿಲ್ಲಾಸ್ಪತ್ರೆಗೆ ದಾಖಲಿಸಲಾಗಿದೆ. ಈ ಸಂಬಂಧ ನಾಪೋಕ್ಲು ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಕೊಡವ ಪೊಮ್ಮಕ್ಕಡ ಒಕ್ಕೂಟದ ಮಹಾಸಭೆ



ವಿರಾಜಪೇಟೆಯ ಕೊಡವ ಸಮಾಜದಲ್ಲಿ ನಡೆದ ಕೊಡವ ಪೊಮ್ಮಕ್ಕಡ ಒಕ್ಕೂಟದ ಸಭೆಯಲ್ಲಿ ಜ್ಯೋತಿಷಿ ಕರವಟ್ಟಿರ ಶಶಿ ಸುಬ್ರಮಣಿ ಅವರನ್ನು ಸನ್ಮಾನಿಸಲಾಯಿತು.

ವಿರಾಜಪೇಟೆ: ವಿರಾಜಪೇಟೆ ಕೊಡವ ಪೊಮ್ಮಕ್ಕಡ ಒಕ್ಕೂಟದ ಮಹಾಸಭೆ ಪಟ್ಟಣದ ಕೊಡವ ಸಮಾಜ ಸಭಾಂಗಣದಲ್ಲಿ ನಡೆಯಿತು.

ಸಭೆಯ ಅಧ್ಯಕ್ಷತೆ ವಹಿಸಿದ್ದ ಒಕ್ಕೂಟದ ಅಧ್ಯಕ್ಷೆ ಮನೆಯಪಂಡ ಕಾಂತಿ ಸತೀಶ್ ಮಾತನಾಡಿ, ಒಕ್ಕೂಟ ನಡೆದು ಬಂದ ಹಾದಿ ಬಗ್ಗೆ ವಿವರಿಸಿದರು. ನಂತರ ಒಕ್ಕೂಟದ ಎಲ್ಲಾ ಸದಸ್ಯರಿಗೂ ಅವಕಾಶ ಸಿಗಬೇಕೆಂಬ ದೃಷ್ಟಿಯಿಂದ ಸ್ವಇಚ್ಛೆಯಿಂದ ಅಧ್ಯಕ್ಷ ಸ್ಥಾನಕ್ಕೆ ರಾಜೀನಾಮೆ ನೀಡುವುದಾಗಿ ಘೋಷಿಸಿ, ರಾಜೀನಾಮೆ ಪತ್ರವನ್ನು ಸಭೆಯಲ್ಲಿ ಕಾರ್ಯದರ್ಶಿಗೆ ನೀಡಿದರು.

ಆದರೆ, ಸಭೆಯಲ್ಲಿ ರಾಜೀನಾಮೆಯನ್ನು ಸ್ವೀಕರಿಸದೆ, ಅಧ್ಯಕ್ಷ ಸ್ಥಾನದಲ್ಲಿ ಮನೆಯಪಂಡ ಕಾಂತಿ ಸತೀಶ್ ಅವರೆ ಮುಂದುವರಿಯುವಂತೆ ಒಕ್ಕೊರಲಿನಿಂದ ಮನವಿ ಮಾಡಿದರು. ಬಳಿಕ ಅಧ್ಯಕ್ಷರಾಗಿ ಮುಂದುವರಿಯುವುದಾಗಿ ಕಾಂತಿ ಸತೀಶ್ ಒಪ್ಪಿದರು.

ಸಭೆಯಲ್ಲಿ ಖ್ಯಾತ ಜ್ಯೋತಿಷಿ ಕರವಟ್ಟಿರ ಶಶಿ ಸುಬ್ರಮಣಿ ಅವರನ್ನು ಸನ್ಮಾನಿಸಲಾಯಿತು. ಒಕ್ಕೂಟದ ಗೌರವ ಕಾರ್ಯದರ್ಶಿ ಬಯವಂಡ ಇಂದಿರಾ ಬೆಳ್ಯಪ್ಪ ತಪ್ಪಡಕಟ್ಟಿ, ಖಜಾಂಚಿ ತಾತಂಡ ಯಶು ಕಬೀರ್, ಸಲಹಾ ಸಮಿತಿ ಸದಸ್ಯರಾದ ಬಿದ್ದಂಡ ರಾಣಿ ಉತ್ತಯ್ಯ, ನಾಯಕಂಡ ಬೇಬಿ ಚಿಣ್ಣಪ್ಪ, ಚಪ್ಪುಡ ಲಲಿತಾ, ಸದಸ್ಯರು ಉಪಸ್ಥಿತರಿದ್ದರು. ಇದೇ ವೇಳೆ ಒಕ್ಕೂಟದ ಸದಸ್ಯರಿಗೆ ವಿವಿಧ ಆಟೋಟ ಸ್ಪರ್ಧೆಗಳನ್ನು ಏರ್ಪಡಿಸಲಾಗಿತ್ತು.

ಪ್ರಕೃತಿ ಮಡಿಲು ಪ್ರಯೋಗ ಶಾಲೆಯಾಗಲಿ



ಪೆರುಂಬಾಡಿ ಮೊರಾರ್ಜಿ ದೇಸಾಯಿ ವಸತಿ ಶಾಲೆಯಲ್ಲಿ ಆಯೋಜಿಸಿದ್ದ ಪರಿಸರ ದಿನಾಚರಣೆಗೆ ಗಿಡ ನೆಡುವ ಮೂಲಕ ಸಂಕೇತ್ ಪೂವಯ್ಯ ಚಾಲನೆ ನೀಡಿದರು.

ಗೋಣಿಕೊಪ್ಪ: ಪ್ರಕೃತಿಯ ಮಡಿಲು ಪ್ರಯೋಗ ಶಾಲೆಯಾಗಬೇಕು, ವಿದ್ಯಾರ್ಥಿಗಳಿಗೆ ಪರಿಸರದ ಬಗ್ಗೆ ಕಾಳಜಿ ಮೂಡಿಸಬೇಕು. ಆ ನಿಟ್ಟಿನಲ್ಲಿ ಪ್ರಯತ್ನ ಮುಂದುವರೆದಲ್ಲಿ ಉತ್ತಮ ಪರಿಸರವನ್ನು ಮುಂದಿನ ಪೀಳಿಗೆಗೆ ಉಳಿಸಬಹುದು ಎಂದು ಪರಿಸರ ಪ್ರೇಮಿ ಸಂಕೇತ್ ಪೂವಯ್ಯ ಅಭಿಪ್ರಾಯಪಟ್ಟರು.

ಪೆರುಂಬಾಡಿ ಮೊರಾರ್ಜಿ ದೇಸಾಯಿ ವಸತಿ ಶಾಲೆಯಲ್ಲಿ ವಿರಾಜಪೇಟೆ ತಾಲೂಕು ಸಾಮಾಜಿಕ ಅರಣ್ಯ ವಲಯ ಸಹಯೋಗದಲ್ಲಿ ಆಯೋಜಿಸಿದ್ದ ಪರಿಸರ ದಿನಾಚರಣೆಗೆ ಗಿಡ ನೆಡುವ ಮೂಲಕ ಚಾಲನೆ ನೀಡಿ ಮಾತನಾಡಿದ ಅವರು, ಪರಿಸರದ ನಡುವೆ ವಿದ್ಯಾರ್ಥಿಗಳಿಗೆ ಆಗಿಂದ್ದಾಗೆ ಪಾಠ ಪ್ರವಚನಗಳು ನಡೆಯಬೇಕು. ಇದರಿಂದ ಪರಿಸರದ ಕಾಳಜಿ ಹಾಗೂ ಪ್ರಾಮುಖ್ಯತೆ ವಿದ್ಯಾರ್ಥಿಗಳಲ್ಲಿ ಮೂಡಿಸಿದಂತಾಗುತ್ತದೆ. ಜೊತೆಗೆ ಮುಂದಿನ ಪೀಳಿಗೆಗೆ ಕೊಡುಗೆ ನೀಡಲು ಅವಕಾಶ ಸಿಗಲಿದೆ ಎಂದರು.

ಸರ್ಕಾರ ವಾರ್ಷಿಕವಾಗಿ ವಿದ್ಯಾರ್ಥಿಗಳನ್ನು ಕಾಡಿನೊಳಗೆ ಕರೆದುಕೊಂಡು ಹೋಗುವ ನಿಟ್ಟಿನಲ್ಲಿ ಯೋಜನೆ ರೂಪಿಸಬೇಕು. ಕೇವಲ ವಿಶ್ವ ಪರಿಸರದಿನದಂದು ಗಿಡ ನೆಟ್ಟರೆ ಸಾಲದು, ಅದನ್ನು ಪೋಷಿಸುವ ಕೆಲಸ ನಿರಂತರವಾಗಬೇಕು. ಇಂದಿನ ತಾಪಮಾನದ ಪರಿಸ್ಥಿತಿ ಎಲ್ಲರಿಗೂ ಅರಿವಿಗೆ ಬಂದಿದೆ ಪರಿಸರವನ್ನು ಕಾಪಾಡಿಕೊಂಡರೆ ಮಾತ್ರ ಮಾನವನ ಬದುಕು ಹಸನಾಗುತ್ತದೆ ಎಂದು ತಿಳಿಸಿದರು.

ಸಾಮಾಜಿಕ ಅರಣ್ಯವಲಯ ಅಧಿಕಾರಿ ಮಧುಕುಮಾರ್, ವಿರಾಜಪೇಟೆಯ ಉಷಾ ಪ್ರೀತಂ, ಮೊರಾರ್ಜಿ ವಸತಿ ಶಾಲೆ ಪ್ರಾಂಶುಪಾಲೆ ಕು.ಮಮತಾ, ಚಿತ್ರ ಕಲಾವಿದ ಬಿ.ಆರ್.ಸತೀಶ್ ಮಾತನಾಡಿದರು.

ಇದೇ ವೇಳೆ ಪರಿಸರದ ಬಗ್ಗೆ ಸ್ಥಳದಲ್ಲೇ ಚಿತ್ರ ಬಿಡಿಸುವ ಸ್ಪರ್ಧೆ ಏರ್ಪಡಿಸುವ ಮಕ್ಕಳಲ್ಲಿ ಪರಿಸರದ ಬಗ್ಗೆ ಕಾಳಜಿ ಮೂಡಿಸಲಾಯಿತು. ವಿರಾಜಪೇಟೆಯಲ್ಲಿ ಉತ್ತಮ ಸಮಾಜ ಸೇವೆ ಸಲ್ಲಿಸುತ್ತಿರುವ ಆಟೋ ಚಾಲಕ ಜುನೈದ್ ಅವರನ್ನು ಸನ್ಮಾನಿಸಲಾಯಿತು. ಪ್ರಮುಖರಾದ ಬಾಬಾ ಶಂಕರ್, ಜಗದೀಶ್, ಶಿಕ್ಷಕರು ಭಾಗವಹಿಸಿದ್ದರು.

ಕೊಡಗು ಜಿಲ್ಲೆಯಲ್ಲಿ ಹೋಬಳಿವಾರು ದಾಖಲಾಗಿರುವ ಮಳೆ ವಿವರ

ಮಡಿಕೇರಿ ಕಸಬಾ 1.60, ನಾಪೋಕ್ಲು 25.80, ಸಂಪಾಜೆ 2.50, ಭಾಗಮಂಡಲ 25.60, ವಿರಾಜಪೇಟೆ 14.40, ಅಮ್ಮತ್ತಿ 20, ಹುದಿಕೇರಿ 5.10, ಶ್ರೀಮಂಗಲ 4.20, ಪೊನ್ನಂಪೇಟೆ 6, ಸೋಮವಾರ ಪೇಟೆ 0.80, ಕುಶಾಲ ನಗರ 13, ಸುಂಟಿಕೊಪ್ಪ 1 ಮಿ.ಮೀ. ಮಳೆಯಾಗಿದೆ.

ಮುಂದಿನ ಪೀಳಿಗೆಗೆ ಪ್ಲಾಸ್ಟಿಕ್ ಮುಕ್ತ ಪರಿಸರ ನೀಡಬೇಕು



ಮಡಿಕೇರಿ ಸಂತ ಜೋಸೆಫರ ಶಾಲೆಯ ಕ್ರೀಡಾಂಗಣದಲ್ಲಿ ಪರಿಸರ ದಿನದ ಅಂಗವಾಗಿ ಭಾರತ್ ಸ್ಕೌಟ್ಸ್–ಗೈಡ್ಸ್, ಸೇವಾದಳ ವಿದ್ಯಾರ್ಥಿಗಳು ಗಿಡಗಳನ್ನು ನೆಟ್ಟರು.

ಮಡಿಕೇರಿ: ಪ್ರಕೃತಿಯನ್ನು ಸಂರಕ್ಷಿಸುವುದು ಪ್ರತಿಯೊಬ್ಬರ ಕರ್ತವ್ಯವಾಗಿದ್ದು, ಮುಂದಿನ ಪೀಳಿಗೆಗೆ ಪ್ಲಾಸ್ಟಿಕ್ ಮುಕ್ತ ಪರಿಸರ ನೀಡುವುದು ಅಗತ್ಯವಾಗಿದೆ ಎಂದು ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಸಂಸ್ಥೆಯ ಜಿಲ್ಲಾ ಪ್ರಧಾನ ಆಯುಕ್ತ ಕೆ.ಟಿ.ಬೇಬಿ ಮ್ಯಾಥ್ಯೂ ತಿಳಿಸಿದರು.

ಸಂತ ಜೋಸೆಫರ ಶಾಲೆಯ ಕ್ರೀಡಾಂಗಣದಲ್ಲಿ ಜಿಲ್ಲಾಡಳಿತ, ಜಿಪಂ, ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಶಿಕ್ಷಣ, ಪೊಲೀಸ್, ಅರಣ್ಯ, ತೋಟಗಾರಿಕೆ ಇಲಾಖೆ, ವಕೀಲರ ಸಂಘ, ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಜಿಲ್ಲಾ ಸಂಸ್ಥೆ, ರಾಜ್ಯ ವಿಜ್ಞಾನ ಪರಿಷತ್ ಸಂಯುಕ್ತಾಶ್ರಯದಲ್ಲಿ ನಡೆದ ವಿಶ್ವ ಪರಿಸರ ದಿನಾಚರಣೆಯಲ್ಲಿ ಮಾತನಾಡಿದ ಅವರು, ವಿಶ್ವ ಪರಿಸರ ದಿನಾಚರಣೆ ಅತ್ಯಂತ ಮಹತ್ವಪೂರ್ಣ ಕಾರ್ಯಕ್ರಮವಾಗಿದ್ದು, ಅದನ್ನು ಒಂದು ದಿನಕ್ಕೆ ಸೀಮಿತಗೊಳಿಸದೆ, ಪ್ರಕೃತಿಯ ಮಹತ್ವ ಅರಿತು ಇತರರಿಗೆ ಜಾಗೃತಿ ಮೂಡಿಸಬೇಕು. ಪ್ಲಾಸ್ಟಿಕ್ ಅನ್ನು ಪೂರ್ಣ ಪ್ರಮಾಣದಲ್ಲಿ ತ್ಯಜಿಸುವ ಮೂಲಕ ಮುಂದಿನ ಪೀಳಿಗೆಗೆ ಒಳ್ಳೆಯ ವಾತಾವರಣ ನೀಡಬೇಕು. ಪರಿಸರ ಕಾಳಜಿಯಿಂದ ನೆಟ್ಟ ಗಿಡಗಳನ್ನು ಕಾಪಾಡಿಕೊಳ್ಳುವುದು ಎಲ್ಲರ ಜವಾಬ್ದಾರಿಯಾಗಿದೆ ಎಂದರು.

ಮನುಷ್ಯನ ಜೀವನಕ್ಕೆ ಉತ್ತಮ ವಾತಾವರಣ ಮುಖ್ಯ. ನೀರು, ಗಾಳಿ, ಆಹಾರ ಪ್ರಕೃತಿದತ್ತವಾಗಿದ್ದು, ಗಾಳಿ ಇಲ್ಲದೆ ಬದುಕಲು ಸಾಧ್ಯವಿಲ್ಲ. ಗಾಳಿ, ಬೆಳಕು, ಆಹಾರ ಚೆನ್ನಾಗಿದ್ದರೆ ಆರೋಗ್ಯವೂ ಚೆನ್ನಾಗಿರುತ್ತದೆ. ಆದ್ದರಿಂದ ಪರಿಶುದ್ಧ ಪರಿಸರ ಅಗತ್ಯ ಎಂದರು.

ನಗರಸಭಾ ಅಧ್ಯಕ್ಷೆ ಅನಿತಾ ಪೂವಯ್ಯ ಮಾತನಾಡಿ, ನಿತ್ಯ ಒಂದೊಂದು ಗಿಡವನ್ನು ನೆಡುವ ಮೂಲಕ ಪರಿಸರ ಸಂರಕ್ಷಣೆ ಮಾಡಬೇಕು. ಗಿಡ ಬೆಳೆಸಿ ಪರಿಸರ ಸಂರಕ್ಷಿಸಿ ಎಂಬ ಮನೋಭಾವ ಎಲ್ಲರಲ್ಲೂ ಕಾರ್ಯಗತಗೊಳ್ಳಬೇಕು ಎಂದರು.

ನಗರಸಭಾ ಸದಸ್ಯ ಅರುಣ್ ಶೆಟ್ಟಿ ಮಾತನಾಡಿದರು. ಸಂತ ಜೋಸೆಫರ ಶಾಲೆಯ ಮೇಲ್ವಿಚಾರಕಿ ಸಿಸ್ಟರ್ ರೋಜಾ, ಮುಖ್ಯ ಶಿಕ್ಷಕಿ ಸಿಸ್ಟರ್ ಫಿಲೋಮಿನಾ, ನಗರಸಭಾ ಸದಸ್ಯ ಮಹೇಶ್ ಜೈನಿ, ಶಾಲಾ ಶಿಕ್ಷಕರು, ಸಿಬ್ಬಂದಿ, ವಿದ್ಯಾರ್ಥಿಗಳು ಹಾಜರಿದ್ದರು.

ಸೇವಾ ದಳದ ವಿದ್ಯಾರ್ಥಿಗಳು ಹಾಗೂ ಗಣ್ಯರು ಕ್ರೀಡಾಂಗಣದ ಸುತ್ತಲೂ ಸುಮಾರು 100ಕ್ಕೂ ಹೆಚ್ಚು ಗಿಡಗಳನ್ನು ನೆಟ್ಟು ಪರಿಸರ ಜಾಗೃತಿ ಮೂಡಿಸಿದರು.

ಹೆದ್ದಾರಿ ದುರಸ್ತಿಗೆ ಒತ್ತಾಯಿಸಿ ಪ್ರತಿಭಟನೆ



ಹೆದ್ದಾರಿ ದುರಸ್ತಿಗೆ ಆಗ್ರಹಿಸಿ ರಾಜ್ಯ ಕಬ್ಬು ಬೆಳೆಗಾರರ ಸಂಘದ ಕಾರ್ಯಕರ್ತರು ಮೂಡ್ಲುಪುರ ಬಳಿ ರಸ್ತೆ ಸಂಚಾರ ತಡೆದು ಪ್ರತಿಭಟನೆ ನಡೆಸಿದರು.

ಮೂಡ್ಲುಪುರ ಬಳಿ ರೈತರಿಂದ ರಸ್ತೆ ತಡೆ

ಚಾಮರಾಜನಗರ: ಜಿಲ್ಲಾ ಕೇಂದ್ರದಿಂದ ಗುಂಡ್ಲುಪೇಟೆಗೆ ಸಂಚರಿಸುವ ರಾಜ್ಯ ಹೆದ್ದಾರಿ ದುರಸ್ತಿಪಡಿಸಬೇಕು ಎಂದು ಆಗ್ರಹಿಸಿ ರಾಜ್ಯ ಕಬ್ಬು ಬೆಳೆಗಾರರ ಸಂಘದಿಂದ ಶುಕ್ರವಾರ ನಗರದಲ್ಲಿ ಪ್ರತಿಭಟನೆ ನಡೆಸಲಾಯಿತು.

ನಗರದ ಹೊರವಲಯದ ಮೂಡ್ಲುಪುರ ಬಳಿ ರಸ್ತೆಯಲ್ಲಿ ಸಮಾವೇಶಗೊಂಡ ರೈತರು ಹಾಗೂ ಪ್ರತಿಭಟನಾಕಾರರು ರಸ್ತೆ ತಡೆ ನಡೆಸಿ, ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸಿದರು. ಚಾಮರಾಜನಗರ–ಗುಂಡ್ಲುಪೇಟೆ ಹೆದ್ದಾರಿಯಲ್ಲಿ ದಿನನಿತ್ಯ ಸಾವಿರಾರು ವಾಹನಗಳು ಸಂಚರಿಸುತ್ತವೆ. ಈ ರಸ್ತೆಯ ಮೂಲಕ ಸಿಮ್ಸ್ ಆಸ್ಪತ್ರೆಗೆ ರೋಗಿಗಳು, ಗಾರ್ಮೆಂಟ್ಸ್‌ಗೆ ಮಹಿಳೆಯರು ಹಾಗೂ ಶಾಲಾ–ಕಾಲೇಜುಗಳಿಗೆ ಮಕ್ಕಳು ತೆರಳುತ್ತಾರೆ. ಮೂಡ್ಲುಪುರ ಬಳಿ ರಸ್ತೆಗುಂಡಿ ಬಿದ್ದು 3 ವರ್ಷಗಳೇ ಕಳೆದು ಹೋಗಿದೆ. ಸಂಬಂಧಪಟ್ಟ ಅಧಿಕಾರಿಗಳು ಗುಂಡಿ ಮುಚ್ಚಿ ರಸ್ತೆ ನಿರ್ಮಿಸಲು ಮುಂದಾಗಿಲ್ಲ ಎಂದು ಆಕ್ರೋಶ ವ್ಯಕ್ತಪಡಿದರು.

ಮುಖ್ಯಮಂತ್ರಿ, ರಾಷ್ಟ್ರ ನಾಯಕರು ಬಂದರೆ ಮಾತ್ರ ರಸ್ತೆ ರಿಪೇರಿಗೆ ಮುಂದಾಗುವ ಅಧಿಕಾರಿಗಳು, ಅಪಘಾತಗಳು ಸಂಭವಿಸುವ ಸ್ಥಿತಿಯಲ್ಲಿದ್ದರೂ ರಸ್ತೆ ದುರಸ್ತಿ ಮಾಡದಿರುವುದು ನಾಚಿಕೆಗೇಡಿನ ಸಂಗತಿ. ಕೂಡಲೇ ರಸ್ತೆ ದುರಸ್ತಿ ಮಾಡಿಸಬೇಕು. ಇಲ್ಲದಿದ್ದರೆ ಅನಿರ್ದಿಷ್ಟಾವಧಿ ಧರಣಿ ನಡೆಸುವುದಾಗಿ ಎಚ್ಚರಿಸಿದರು.

ವಿಷಯ ತಿಳಿದು ಸ್ಥಳಕ್ಕೆ ಆಗಮಿಸಿದ ಲೋಕೋಪಯೋಗಿ ಇಲಾಖೆಯ ಎಇಇ ರಮೇಶ್ 'ಅವರನ್ನು ಪ್ರತಿಭಟನಾಕಾರರು ತರಾಟೆಗೆ ತೆಗೆದುಕೊಂಡರು. ಈ ವೇಳೆ ಇಂದಿನಿಂದಲೇ ಕೆಲಸ ಪ್ರಾರಂಭಿಸಲಾಗುವುದು ಅವರು ಎಂದು ಭರವಸೆ ನೀಡಿದರು. ಬಳಿಕ ಪ್ರತಿಭಟನೆಯನ್ನು ಅಂತ್ಯಗೊಳಿಸಲಾಯಿತು. ಬಳಿಕ ಜೆಸಿಬಿ ಮೂಲಕ ರಸ್ತೆ ದುರಸ್ತಿ ಆರಂಭಿಸಲಾಯಿತು.

ಪ್ರಯಾಣಿಕರ ಪರದಾಟ: ಪ್ರತಿಭಟನಾಕಾರರು ರಸ್ತೆ ತಡೆ ನಡೆಸಿದ್ದರಿಂದ ಅರ್ಧ ಗಂಟೆಗೂ ಹೆಚ್ಚು ಕಾಲ ವಾಹನ ಸಂಚಾರ ಅಸ್ತವ್ಯಸ್ತಗೊಂಡಿತು. ಗುಂಡ್ಲುಪೇಟೆ ಹಾಗೂ ಚಾಮರಾಜನಗರ ಕಡೆಯಿಂದ ಬಂದ ವಾಹನಗಳು ಸಾಲುಗಟ್ಟಿ ನಿಂತಿದ್ದವು. ಬೈಕ್ ಸವಾರರು ಬೇರೆ ದಾರಿಗಳಲ್ಲಿ ಸಂಚರಿಸಿದರು. ತಮ್ಮ ಕೆಲಸಗಳಿಗೆ ತೆರಳಬೇಕಿದ್ದ ಪ್ರಯಾಣಿಕರು ಪರದಾಡಿದರು.

ಪ್ರತಿಭಟನೆಯಲ್ಲಿ ಸಂಘದ ರಾಜ್ಯಾಧ್ಯಕ್ಷ ಹಳ್ಳಿಕೆರೆಹುಂಡಿ ಭಾಗ್ಯರಾಜ್, ಜಿಲ್ಲಾಧ್ಯಕ್ಷ ಹಾಲಿನ ನಾಗರಾಜ್, ರಾಜ್ಯ ಉಪಾಧ್ಯಕ್ಷ ಕೆರೆಹುಂಡಿ ರಾಜಣ್ಣ, ಮೈಸೂರು ಜಿಲ್ಲಾಧ್ಯಕ್ಷ ಹಾಡ್ಯ ರವಿ, ತಾಲೂಕು ಅಧ್ಯಕ್ಷ ಅರಳೀಕಟ್ಟೆ ಕುಮಾರ್, ಉಡಿಗಾಲ ಗ್ರಾಮ ಘಟಕದ ಅಧ್ಯಕ್ಷ ಮಂಜುನಾಥ್, ಜಿಲ್ಲಾ ಸಂಘಟನಾ ಕಾರ್ಯದರ್ಶಿ ಮಲೆಯೂರು ಮಹೇಂದ್ರ, ಪದಾಧಿಕಾರಿಗಳಾದ ಪ್ರಭುಸ್ವಾಮಿ, ಚೇರ್ಮನ್ ಗುರು, ಗುರುಮಲ್ಲಪ್ಪ, ಮೋಹನ್, ಚಂದ್ರು, ಸತೀಶ್, ಶ್ರೀಕಂಠ ಇತರರು ಭಾಗವಹಿಸಿದ್ದರು.

ನೂತನ ಸಂಸದರ ಮೇಲೆ ಸಾಗರದಷ್ಟು ನಿರೀಕ್ಷೆ

ಜಿಲ್ಲೆಯ ಜನರ ಭರವಸೆಯ ಬೇಡಿಕೆ ಈಡೇರಿಸುವರೇ ಸುನೀಲ್ ಬೋಸ್?



ಚಾಮರಾಜನಗರ, ಜೂ.7–ಚಾಮರಾಜನಗರ ಲೋಕಸಭಾ ಕ್ಷೇತ್ರದಿಂದ ಅತಿ ಹೆಚ್ಚು ಮತಗಳ ಅಂತರದಿಂದ ಗೆಲುವು ಸಾಧಿಸಿರುವ ಕಾಂಗ್ರೆಸ್ ಅಭ್ಯರ್ಥಿ ಸುನೀಲ್ ಬೋಸ್ ಅವರಿಂದ ಜಿಲ್ಲೆ ಹಾಗೂ ಕ್ಷೇತ್ರದ ಜನರು ಸಾಗರದಷ್ಟು ನಿರೀಕ್ಷೆಗಳನ್ನು ಇಟ್ಟುಕೊಂಡಿದ್ದಾರೆ.

ಮೊದಲ ಬಾರಿಗೆ ಸಂಸದರಾಗಿ ಆಯ್ಕೆಯಾಗಿರುವ ಸುನೀಲ್ ಬೋಸ್ ಜಿಲ್ಲೆಯ ಜನರ ಜೊತೆ ನಿರಂತರ ಸಂಪರ್ಕವಿಟ್ಟುಕೊಳ್ಳಬೇಕು ಎಂಬುದು ಸ್ಥಳೀಯರ ಒತ್ತಾಸೆಯಾಗಿದೆ. ಜಿಲ್ಲೆಗೆ ದೊಡ್ಡ ಪರಂಪರೆ, ಹಿರಿದಾದ ಅಡಿಪಾಯವಿದ್ದರೂ ಇತ್ತೀಚೆಗೆ ಹಲವು ಕ್ಷೇತ್ರಗಳ ಬೆಳವಣಿಗೆ ತೀರಾ ಕುಸಿತ ಕಂಡಿದೆ. ಸಾಮಾಜಿಕ, ಶೈಕ್ಷಣಿಕ, ಔದ್ಯೋಗಿಕವಾಗಿ ಎತ್ತರಕ್ಕೇರಲು ಸಾಧ್ಯವಾಗಿಲ್ಲ. ಹಿಂದಿನ ಸಂಸದರಾಗಿದ್ದ ಆರ್.ಧ್ರುವನಾರಾಯಣ್ ಜಿಲ್ಲೆಯ ಅಭಿವೃದ್ಧಿಗೆ ಸಾಕಷ್ಟು ಕೊಡುಗೆಗಳನ್ನು ನೀಡಿದ್ದಾರೆ. ಅವರು ಕೊಟ್ಟ ಕೊಡುಗೆಗಳು ಹಾಗೂ ಅವರು ಜನಸಾಮಾನ್ಯರೊಂದಿಗೆ ಹೊಂದಿದ್ದ ಒಡನಾಟವನ್ನು ಸುನೀಲ್ ಬೋಸ್ ಅವರಿಂದ ಜಿಲ್ಲೆಯ ಜನರು ನಿರೀಕ್ಷೆ ಮಾಡುತ್ತಿದ್ದಾರೆ.

ಸುನೀಲ್‌ಬೋಸ್ ಅವರ ತಂದೆ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಚುನಾವಣಾ ಪೂರ್ವದಲ್ಲಿ ಜಿಲ್ಲೆಯ ಅಭಿವೃದ್ಧಿ ಬಗ್ಗೆ ಸಾಕಷ್ಟು ಭರವಸೆಗಳನ್ನು ನೀಡಿದ್ದಾರೆ. ಕೈಗಾರಿಕೆ, ಆರೋಗ್ಯ, ಶಿಕ್ಷಣ ಸೇರಿದಂತೆ ಹಲವು ಕ್ಷೇತ್ರಗಳ ಅಭಿವೃದ್ಧಿಗೊಳಿಸಿ ಮಾದರಿ ಜಿಲ್ಲೆಯನ್ನಾಗಿಸುವ ಭರವಸೆಯ ಮಾತುಗಳನ್ನಾಡಿ ತಮ್ಮ ಮಗನ ಪರ ಮತಯಾಚಿಸಿದ್ದರು. ಈಗ ಅವರ ಪುತ್ರ ಸುನೀಲ್ ಬೋಸ್ ಅವರೇ ಸಂಸದರಾಗಿದ್ದು, ಸಹಜವಾಗಿ ಬೆಟ್ಟದಷ್ಟು ನಿರೀಕ್ಷೆ ಇದೆ. ಎಲ್ಲಾ ಭರವಸೆಗಳನ್ನು ಯಾವ ರೀತಿ ಈಡೇರಿಸಲಿದ್ದಾರೆ ಎಂಬುದನ್ನು ಜನರು ಕಾತರದಿಂದ ಕಾಯುತ್ತಿದ್ದಾರೆ.

ಜಿಲ್ಲೆಯ ಜನರು ಸುನೀಲ್ ಮೇಲೆ ಅಪಾರವಾದ ವಿಶ್ವಾಸ ಇಟ್ಟುಕೊಂಡು ದಾಖಲೆಯ ಮತಗಳನ್ನು ನೀಡಿದ್ದಾರೆ. ಮುಂದೆ ಅವರು ನಿರಂತರವಾಗಿ ಸಾರ್ವಜನಿಕರ ಕುಂದುಕೊರತೆ ಸಭೆ ನಡೆಸಬೇಕು. ಕೆಡಿಪಿ ಸಭೆಗಳಿಗೆ ತಪ್ಪದೇ ಹಾಜರಾಗಬೇಕು. ಸ್ಥಳೀಯ ಕಾರ್ಯಕ್ರಮಗಳಲ್ಲೂ ಪಾಲ್ಗೊಳ್ಳಬೇಕು ಎಂದು ಸಂಘಟನೆಯೊಂದರ ಮುಖಂಡರೊಬ್ಬರು ಒತ್ತಾಯಿಸಿದರು.

ಸುನೀಲ್ ಬೋಸ್ ಹಿಂದೆ ತಂದೆಯೊಂದಿಗೆ ತಿ.ನರಸೀಪುರ ವಿಧಾನಸಭಾ ಕ್ಷೇತ್ರದಲ್ಲಿ ಕೆಲಸ ಮಾಡಿದ್ದಾರೆ. ರಾಜಕೀಯವಾಗಿ ತಂದೆ ಮಾರ್ಗದರ್ಶದಲ್ಲಿ ಸಾಕಷ್ಟು ಪಳಗಿದ್ದು, ಮೊದಲ ಬಾರಿಗೆ ಸಂಸದರಾಗುವ ಮೂಲಕ ರಾಜಕೀಯ ಪ್ರವೇಶ ಮಾಡಿದ್ದಾರೆ. ಈಗ ಅವರು ಸಂಸತ್ ಅಧಿವೇಶನದಲ್ಲಿ ಹೆಚ್ಚು ಪಾಲ್ಗೊಂಡು ಮಾತನಾಡಬೇಕು. ಚಾಮರಾಜನಗರ ಜಿಲ್ಲೆ ಭಾವನಾತ್ಮಕವಾಗಿ ಒಂದೇ ರೀತಿಯಲ್ಲಿದ್ದೂ ಆಡಳಿತಾತ್ಮಕವಾಗಿ ಸಂಪೂರ್ಣವಾಗಿ ಭಿನ್ನವಾಗಿದೆ. ಜಿಲ್ಲೆಯ ಜನರು ರಾಜಕಾರಣಿಗಳಿಂದ ಕೆಲಸ ಬಯಸುತ್ತಾರೆ. ತಮ್ಮ ಹಾಜರಾತಿ ಅಪೇಕ್ಷಿಸುತ್ತಾರೆ. ಜನರ ಭಾವನೆಗಳಿಗೆ ಸ್ಪಂದಿಸದಿದ್ದರೆ ಅಂತಹ ಜನಪ್ರತಿನಿಧಿಗಳಿಗೆ ಜನರು ತಕ್ಕಪಾಠ ಕಲಿಸಿದ ಉದಾಹರಣೆಗಳು ಇವೆ.

ಸುನೀಲ್ ಬೋಸ್ ಅವರನ್ನು ಕಾಂಗ್ರೆಸ್ ಅಭ್ಯರ್ಥಿಯಾಗಿ ಘೋಷಣೆ ಮಾಡಿದಾಗಿನಿಂದಲೂ ಅವರು ಸಾರ್ವಜನಿಕರ ಸಂಪರ್ಕಕ್ಕೆ ಸಿಗುವುದಿಲ್ಲ ಎಂಬ ಆರೋಪಗಳು ಕೇಳಿಬರುತ್ತಿತ್ತು. ಆದರೂ, ಅವರ ತಂದೆ ಡಾ.ಹೆಚ್.ಸಿ.ಮಹದೇವಪ್ಪ ಹಾಗೂ ಸ್ಥಳೀಯ ಶಾಸಕರ ಭರವಸೆಗಳಿಂದ ಜಿಲ್ಲೆ ಜನರು ಐತಿಹಾಸಿಕ ಗೆಲುವಿನ ಉಡುಗೊರೆ ನೀಡಿದ್ದು, ಅವರ ಮೇಲಿರುವ ಆರೋಪಗಳನ್ನು ಎಷ್ಟರ ಮಟ್ಟಿಗೆ ಸುಳ್ಳು ಮಾಡುತ್ತಾರೆ. ಕ್ಷೇತ್ರದ ಜನರೊಂದಿಗೆ ಯಾವ ರೀತಿ ಸಂಪರ್ಕ ಇಟ್ಟು ಕೊಳ್ಳುತ್ತಾರೆ ಎಂಬುದನ್ನು ಕಾದು ನೋಡಬೇಕಿದೆ.

ಗೋಪಮ್ಮ ನಿಧನ



ಬೇಗೂರು, ಜೂ.7– ಗುಂಡ್ಲುಪೇಟೆ ತಾಲೂಕಿನ ಬೇಗೂರು ಗ್ರಾಮದ ನಿವಾಸಿ ಗೋಪಮ್ಮ (76) ಅನಾರೋಗ್ಯದಿಂದ ಗುರುವಾರ ನಿಧನರಾದರು.

ಮೃತರು ಶಿಕ್ಷಕ ನಾಗಬಸಪ್ಪ ಸೇರಿದಂತೆ ಇಬ್ಬರು ಪುತ್ರರು, ಪುತ್ರಿ, ಸೊಸೆಯಂದಿರು, ಮೊಮ್ಮಕ್ಕಳು ಹಾಗೂ ಅಪಾರ ಬಂಧು–ಬಳಗ ಅಗಲಿದ್ದಾರೆ. ಶುಕ್ರವಾರ ಮೃತರ ಸ್ವಗ್ರಾಮ ಬೇಗೂರಿನಲ್ಲಿ ಅಂತ್ಯಕ್ರಿಯೆ ನಡೆಯಿತು. ತಾಪಂ ಮಾಜಿ ಸದಸ್ಯ ಮಲ್ಲಿದಾಸ್, ಗ್ರಾಪಂ ಸದಸ್ಯ ಮಹೇಶ್, ಮಾಜಿ ಉಪಾಧ್ಯಕ್ಷ ಸದಾನಂದ, ಮುಖಂಡ ಜವರಯ್ಯ ಸಂತಾಪ ಸೂಚಿಸಿದ್ದಾರೆ.

ಗ್ರಾಮೀಣ ಭಾಗಕ್ಕೆ ಬಸ್ ಸೌಲಭ್ಯ ಕಲ್ಪಿಸಲು ಆಗ್ರಹ



ಚಾಮರಾಜನಗರದಲ್ಲಿ ಗ್ರಾಮೀಣ ಭಾಗಗಳಿಗೆ ಸಮರ್ಪಕ ಬಸ್ ಸೌಲಭ್ಯ ಕಲ್ಪಿಸಬೇಕು ಎಂದು ಆಗ್ರಹಿಸಿ ರಾಜ್ಯ ಕಬ್ಬು ಬೆಳೆಗಾರರ ಸಂಘದ ಕಾರ್ಯಕರ್ತರು ಹಾಗೂ ವಿದ್ಯಾರ್ಥಿಗಳು ಪ್ರತಿಭಟನೆ ನಡೆಸಿದರು.

ಚಾಮರಾಜನಗರ: ಜಿಲ್ಲೆಯ ಗ್ರಾಮೀಣ ಭಾಗಗಳಿಗೆ ಸಮರ್ಪಕವಾಗಿ ಸಾರಿಗೆ ಬಸ್ ಸೌಲಭ್ಯ ಕಲ್ಪಿಸಬೇಕು ಎಂದು ಆಗ್ರಹಿಸಿ ರಾಜ್ಯ ಕಬ್ಬು ಬೆಳೆಗಾರರ ಸಂಘದ ಕಾರ್ಯಕರ್ತರು ಹಾಗೂ ವಿದ್ಯಾರ್ಥಿಗಳು ಶುಕ್ರವಾರ ನಗರದಲ್ಲಿ ಪ್ರತಿಭಟನೆ ನಡೆಸಿದರು.

ನಗರದ ಕೆಎಸ್ಆರ್‌ಟಿಸಿ ಬಸ್ ನಿಲ್ದಾಣದ ಆವರಣದಲ್ಲಿ ಸಮಾವೇಶಗೊಂಡ ಪ್ರತಿಭಟನಾಕಾರರು, ಅಧಿಕಾರಿಗಳ ವಿರುದ್ಧ ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸಿದರು.

ಸಂಘದ ರಾಜ್ಯಾಧ್ಯಕ್ಷ ಹಳ್ಳಿಕೆರೆಹುಂಡಿ ಭಾಗ್ಯರಾಜ್ ಮಾತನಾಡಿ, ಜಿಲ್ಲೆಯ ಗ್ರಾಮೀಣ ಪ್ರದೇಶಗಳಿಗೆ ಸಮರ್ಪಕವಾಗಿ ಬಸ್ ಸೌಲಭ್ಯ ಕಲ್ಪಿಸಬೇಕೆಂದು ಹಲವು ಬಾರಿ ಸಂಬಂಧಪಟ್ಟ ಇಲಾಖೆ ಅಧಿಕಾರಿಗಳು ಹಾಗೂ ಜನಪ್ರತಿನಿಧಿಗಳಿಗೆ ಮನವಿ ಸಲ್ಲಿಸಿದರೂ ಯಾವುದೇ ಪ್ರಯೋಜನವಾಗಿಲ್ಲ ಎಂದು ದೂರಿದರು.

ಶನಿವಾರ ಹಾಗೂ ಭಾನುವಾರ ಗ್ರಾಮೀಣ ಪ್ರದೇಶಗಳಿಗೆ ಸಮರ್ಪಕವಾಗಿ ಬಸ್‌ಗಳೇ ಬರುವುದಿಲ್ಲ ಇದರಿಂದಾಗಿ ವಿದ್ಯಾರ್ಥಿಗಳಿಗೆ ತೊಂದರೆಯಾಗುತ್ತಿದೆ. ಅಲ್ಲದೇ ಗ್ರಾಮೀಣ ಬಸ್ ನಿಲ್ದಾಣಗಳ ಬಳಿ ಸರಿಯಾಗಿ ಬಸ್‌ಗಳನ್ನು ನಿಲ್ಲಿಸದೇ ಹಾಗೆಯೇ ಹೋಗುತ್ತಾರೆ. ಹಾಗಾಗಿ, ಸಂಬಂಧಪಟ್ಟ ಅಧಿಕಾರಿಗಳು ಈ ಬಗ್ಗೆ ಗಮನಹರಿಸಿ ಚಾಲಕರು ಮತ್ತು ನಿರ್ವಾಹಕರಿಗೆ ಪ್ರಯಾಣಿಕರು ಇರುವಂತಹ ನಿಲ್ದಾಣಗಳಲ್ಲಿ ಬಸ್ ನಿಲ್ಲಿಸಿ ಅವರನ್ನು ಹತ್ತಿಸಿಕೊಂಡು ಬರುವಂತೆ ಸೂಚಿಸಬೇಕು. ಎಲ್ಲಾ ಬಸ್‌ಗಳಲ್ಲೂ ಸಹಾಯವಾಣಿ ನಂಬರ್ ಅಳವಡಿಸಬೇಕು ಎಂದು ಆಗ್ರಹಿಸಿದರು.

ನಂತರ ನಿಗಮದ ವಿಭಾಗೀಯ ನಿಯಂತ್ರಣಾಧಿಕಾರಿ ಅಶೋಕ್‌ಕುಮಾರ್ ಅವರಿಗೆ ಮನವಿ ಸಲ್ಲಿಸಿದರು. ಮುಂದಿನ ದಿನಗಳಲ್ಲಿ ಗ್ರಾಮೀಣ ಪ್ರದೇಶಗಳಿಗೆ ಬಸ್ ಹೋಗುವಂತೆ ಕ್ರಮ ವಹಿಸಲಾಗುವುದು ಎಂದು ಅಶೋಕ್‌ಕುಮಾರ್ ಭರವಸೆ ನೀಡಿದರು. ಪ್ರತಿಭಟನೆಯಲ್ಲಿ ರೈತರ ಸಂಘದ ಮುಖಂಡರು, ಕಾರ್ಯಕರ್ತರು, ವಿದ್ಯಾರ್ಥಿಗಳು ಇದ್ದರು.

ನಾಳೆ ವಿವಿಧೆಡೆ ವಿದ್ಯುತ್ ವ್ಯತ್ಯಯ

ಚಾಮರಾಜನಗರ, ಜೂ.7–ಸೆಸ್ಕ್‌ನ ಚಾಮರಾಜನಗರ ಉಪವಿಭಾಗ ವ್ಯಾಪ್ತಿಯ ದೊಡ್ಡರಾಯಪೇಟೆ ವಿದ್ಯುತ್ ಉಪ ಕೇಂದ್ರದ ಫೀಡರ್‌ಗಳಲ್ಲಿ ತುರ್ತು ಕಾಮಗಾರಿ ಹಮ್ಮಿಕೊಂಡಿರುವುದರಿಂದ ಜೂ.9ರಂದು ಬೆಳಗ್ಗೆ 10 ರಿಂದ ಸಂಜೆ 5 ಗಂಟೆವರೆಗೆ ಸೋಮವಾರಪೇಟೆ, ಮೂಡ್ಲುಪುರ, ಗಾಳಿಪುರ, ಅಂಬೇಡ್ಕರ್ ಬಡಾವಣೆ, ಸತ್ತಿ ರಸ್ತೆ, ಯಡಪುರ (ಜಿಲ್ಲಾಸ್ಪತ್ರೆ), ಮಲ್ಲಯ್ಯನಪುರ, ವರದರಾಜಪುರ, ಕೆಎಚ್‌ಬಿ ಕಾಲೋನಿ, ರೈಲ್ವೆ ಬಡಾವಣೆ, ಉಪ್ಪಾರ ಬೀದಿ, ನಂಜನಗೂಡು ರಸ್ತೆ, ಪೊಲೀಸ್ ಕ್ವಾರ್ಟರ್ಸ್, ಚಾಮರಾಜನಗರ, ಜಿಲ್ಲಾಧಿಕಾರಿ ಕಚೇರಿ, ಭ್ರಮರಾಂಬ ಬಡಾವಣೆ, ರಾಮಸಮುದ್ರ, ಹೌಸಿಂಗ್ ಬೋರ್ಡ್, ಕರಿನಂಜನಪುರ, ಶಂಕರಪುರ, ಬಿ.ರಾಚಯ್ಯ ಜೋಡಿರಸ್ತೆ, ಕೋರ್ಟ್ ರಸ್ತೆ ಮತ್ತು ಮಾದಾಪುರ, ಕಾಡಹಳ್ಳಿ, ಮಸಗಾಪುರ, ಕಿರಗಸೂರು, ಹಂಡ್ರಕಳ್ಳಿ ಮೋಳೆ, ಮಂಗಲ, ಹೊಸೂರು, ಕಣ್ಣೇಗಾಲ, ಸಿಂಗನಪುರ, ಭೋಗಾಪುರ ಸುತ್ತಮುತ್ತಲಿನ ಪ್ರದೇಶಗಳಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ ಎಂದು ಸೆಸ್ಕ್ ಸಹಾಯಕ ಕಾರ್ಯಪಾಲಕ ಇಂಜಿನಿಯರ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಅತಿಥಿ ಶಿಕ್ಷಕರ ಹುದ್ದೆಗೆ ಅರ್ಜಿ ಆಹ್ವಾನ

ಚಾಮರಾಜನಗರ: ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ವ್ಯಾಪ್ತಿಯ ಜಿಲ್ಲೆಯ ಮೊರಾರ್ಜಿ ದೇಸಾಯಿ, ಕಿತ್ತೂರು ರಾಣಿ ಚೆನ್ನಮ್ಮ, ಇಂದಿರಾ ಗಾಂಧಿ, ಡಾ.ಬಿ.ಆರ್. ಅಂಬೇಡ್ಕರ್ ವಸತಿ ಶಾಲೆಗಳ ಅತಿಥಿ ಶಿಕ್ಷಕರ ಹುದ್ದೆಗಳಿಗೆ ಅರ್ಜಿ ಆಹ್ವಾನಿಸಲಾಗಿದೆ.

ಕನ್ನಡ, ಇಂಗ್ಲಿಷ್, ಹಿಂದಿ, ಗಣಿತ, ವಿಜ್ಞಾನ, ಸಮಾಜ ವಿಜ್ಞಾನ, ಗಣಕ ವಿಜ್ಞಾನ, ದೈಹಿಕ ಶಿಕ್ಷಣ ಶಿಕ್ಷಕರ ಹುದ್ದೆಗಳಿಗೆ ಅತಿಥಿ ಶಿಕ್ಷಕರನ್ನು ನೇಮಿಸಲಾಗುವುದು. ಆಸಕ್ತ ಅಭ್ಯರ್ಥಿಗಳು ಸಂಬಂಧಿಸಿದ ವಸತಿ ಶಾಲೆಗಳಲ್ಲಿ ಜೂ.10ರೊಳಗೆ ಅರ್ಜಿ ಸಲ್ಲಿಸಬಹುದು ಎಂದು ಸಮಾಜ ಕಲ್ಯಾಣ ಇಲಾಖೆ ಉಪನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ವರ್ಗೀಕೃತ ಜಾಹೀರಾತು

ಪ್ರತಿ ಸೋಮವಾರ, ಗುರುವಾರ ಮತ್ತು ಶನಿವಾರ ರೂ. 600 + 30 ಮಾತ್ರ

ಜಾಹೀರಾತಿಗೆ ಸಂಪರ್ಕಿಸಿ 0821–2496522/23

ಮಾರಾಟಕ್ಕಿದೆ
ಮೊಬೈಲ್ ಅಂಗಡಿ ಮಾರಾಟಕ್ಕಿದೆ ಬಸವನಗುಡಿ – ಮೇಟಗಳ್ಳಿ ಮುಖ್ಯರಸ್ತೆಯಲ್ಲಿ ಸುಸಜ್ಜಿತವಾಗಿ ರೆಡಿಯಾಗಿ ರನ್ನಿಂಗ್ ನಲ್ಲಿರುವ ಅಂಗಡಿ ತಕ್ಷಣಕ್ಕೆ ಮಾರಾಟಕ್ಕಿದೆ.
8217323951

MUDA APPROVED LAYOUT
30X40 N/F ಸೈಟು ಮಾರಾಟಕ್ಕಿದೆ ಬ್ಯಾಂಕ್ ಲೋನ್ ಲಭ್ಯ ಲಾಲ್ ಬಹದ್ದೂರ್ ಶಾಸ್ತ್ರಿನಗರದ ನಂತರ ಚಾಮುಂಡಿ ಬೆಟ್ಟದ ಹಿಂಭಾಗ
9538583377

ವೃದ್ಧಾಶ್ರಮ
ಹಿರಿಯ ಜೀವಗಳಿಗೆ, ಹಾಸಿಗೆ ಹಿಡಿದ ವೃದ್ಧರನ್ನು, ಪಾರ್ಶ್ವವಾಯು ಪೀಡಿತರು, ತಾಗೂ ಕೈಲಾಗದ ವಯೋ ವೃದ್ಧರನ್ನು ಮನೆಯಂತೆಯೇ ನೋಡಿ ಕೊಳ್ಳುತ್ತಿರುವ ಸಂಸ್ಥೆ ನಮ್ಮ ಮೈಸೂರಿನಲ್ಲಿ ಊಟ, ವಸತಿ, ವೈದ್ಯಕೀಯ ಸೌಲಭ್ಯದೊಂದಿಗೆ ಇಚ್ಛೆಯುಳ್ಳವರು ಸಂಪರ್ಕಿಸಿ
9110455297 | 9591557126

EAST FACE MUDA APPROVED 40X60 SITE FOR SALE
NITYANANDASAGARA HUILALU MYSORE
8217851695

JN Mysore Ayurvedic Neuro & Panchakarma Centre
ನಮ್ಮಲ್ಲಿ Low Back Pain (ಸೊಂಟ ನೋವು), Neck (ಕುತ್ತಿಗೆ ನೋವು), ಲಕ್ವ, Disc bulge, L4-L5 pain, Sciatica pain, Lumbar Spondylosis, Frozen shoulder pain ಗೆ Ayurvedic Neuro therapy ಮೂಲಕ ಚಿಕಿತ್ಸೆ ನೀಡಲಾಗುವುದು
T.K.Layout, Mysuru
9964205255, 6360049827

ಲ್ಯಾಂಡ್ ಕೇರ್ ಸಲ್ಯೂಷನ್ಸ್
ನಿವೇಶನ ಮಾರಾಟ ಮಾಡುವವರು ಹಾಗೂ ಕೊಳ್ಳುವವರು ಸಂಪರ್ಕಿಸಿ
0821-3137855
98454 14842

FOR RENT
3 BHK, 1st FLOOR & ROOMS WITH ATTACH FOR LADIES at 2nd FLOOR
@ Dattagalli, Mysore
Ph: 97383 68478

REQUIRE DISTRIBUTORS
TO RUN A FRANCHISE WITH MINIMUM INVESTMENT REQUIRE DISTRIBUTORS. INTERESTED CAN CONTACT FOR AN APPOINTMENT SANJEEVINI ORGANICS
7406910389
9113874534

ಸೈಟುಗಳು ಮಾರಾಟಕ್ಕಿವೆ
30x40 S/F, 52/A2E/F Corner, 58/60 N/E Corner, 50x80 E/F ರಿಂಗ್ ರೋಡ್ ಹತ್ತಿರ ಯೂನಿವರ್ಸಿಟಿ ಲೇಔಟ್ ಎದುರು 30x40 30x50 ವರಕೊಡು ಹತ್ತಿರ 30x50 ಶ್ರೀನಗರ ಹತ್ತಿರ
9900372792

ತಕ್ಷಣ ಬೇಕಾಗಿದ್ದಾರೆ
ಆಫೀಸ್ ಬಾಯ್ ಕೆಲಸಕ್ಕೆ ಹುಡುಗ ಬೇಕಾಗಿದ್ದಾರೆ. ಆಫೀಸ್ ಕೆಲಸಕ್ಕೆ ಕಂಪ್ಯೂಟರ್ ಜ್ಞಾನವುಳ್ಳ ಮಹಿಳೆ ಬೇಕಾಗಿದ್ದಾರೆ. ಸೇಲ್ಸ್ ಮೆನ್ ಕೆಲಸಕ್ಕೆ ಪುರುಷ ಅಭ್ಯರ್ಥಿಗಳು ಬೇಕಾಗಿದ್ದಾರೆ. ಉತ್ತಮ ಸಂಬಳ ಮತ್ತು ಇನ್ಸೆಂಟಿವ್ ನೊಂದಿಗೆ
9902721839
7676582019
ವಿಳಾಸ: ಶ್ರೀ ವೃಷಭನಾಥ ಟ್ರೇಡರ್ಸ್, ಮೈಸೂರು ಬನ್ನೂರು ಮೇನ್ ರೋಡ್, ಅಲನಹಳ್ಳಿ ಸರ್ಕಲ್ ಹತ್ತಿರ, ಮೈಸೂರು

GEMINI ROLLING SHUTTER
MANUFACTURER OF : ROLLING SHUTTER MATERIALS & PARTS

9740788263

LAND FOR SALE
5.25 Acres Green Belt Kochnalli Industrial Area Adjoining Total Environment
Contact Mr. Rajesh Revannasiddaiah
9606791121
9901966240

VARSHA DEVELOPERS & BUILDERS SITES FOR SALES
MUDA & DTCP Approved Mysore to Hunsur Highway road Near Yelawala & Manugana halli Near Hootagalli Housing Board KRS Main Road Mogarahalli
8088189896
9620615226

MUDA SITE FOR SALE
40x60 Feet Muda allotted Semi - Commercial Site for sale in Hanchy sathgalli 'A' Zone West facing, 60 feet Road, with clear Documents (broker Excuse) Direct Owners call
9632338969

ಸೈಟ್ ಮಾರಾಟಕ್ಕಿದೆ ಮೂಡಾ ಅಪ್ರೂವ್ 40X60
ಪೂರ್ವ ದಿಕ್ಕು, ನಿತ್ಯಾನಂದಸಾಗರ ಹುಯಿಲಾಳು ಮೈಸೂರು
8217851695

ಬೇಕಾಗಿದ್ದಾರೆ
ಮೈಸೂರಿನಲ್ಲಿರುವ ಮೆನ್ಸ್ ಪಾರ್ಲರ್‌ನಲ್ಲಿ ಕಟಿಂಗ್ ಮತ್ತು ಶೇವಿಂಗ್ ಮಾಡಲು 1–2 ವರ್ಷ ಅನುಭವವಿರುವವರು ಬೇಕಾಗಿದ್ದಾರೆ. 15-25K ಸಂಬಳ ದೊರೆಯುತ್ತದೆ. ಕೂಡಲೇ ಕರೆ ಮಾಡಿ
9844341652

100% TEAK WOOD
FACTORY FINISH DOORS & FRAMES @ FACTORY DEPOT RATES
10 YEARS WARRANTY
9845426862
9901291267

ಸಂಪು ಮತ್ತು ಟ್ಯಾಂಕ್ ಕ್ಲೀನಿಂಗ್‌ಗಾಗಿ ಸಂಪರ್ಕಿಸಿ
Mob: 8861401315

FREE COACHING COMMERCE
Excellent Coaching 1st & 2nd PUC in Accounts, Statistics, Basic Maths etc. Also for B.Com, BBM, Spoken English, English Vocabulary, Bank Exams, Only 6 Students per Batch 100% individual Attention
Prof. Sharma
9901932751

ಮೊಬೈಲ್‌ನಲ್ಲಿ ಕೆಲಸ ವಾರದ ಸಂಬಳ
NO TARGET, TYPING WORK
ತಿಂಗಳಿಗೆ ರೂ.10,000 ರಿಂದ ರೂ.25,000 ಗಳಿಸಬಹುದು.
8884439666

ಸಂಪು ಮತ್ತು ಟ್ಯಾಂಕ್ ಕ್ಲೀನಿಂಗ್‌ಗಾಗಿ ಸಂಪರ್ಕಿಸಿ
Mob: 8618373596

SITE FOR SALE
at KHB (Yelawala) East Facing Block -1, 3700 Sqft Price 2200 per Sqft
7411877778

ADMISSION OPEN 2023-24
SUKRUTHA COLLEGE COMMERCE I PUC TUTION 10th & 12th (Science)
8073195952

Star Solar
JUST 19,499/- 200 Ltr
Easy EMI
7/15 Years Guarantee
Limited Period Offer
Old system Exchange offer available
Manufacturing : Belawadi Industrial Sub.Mysore
9945616293 / 9449966293

ಬೋಳು ತಲೆಯ ಸಮಸ್ಯೆಯೇ?

SMART HAIR FIXING
574, 9th Cross, Anikethana Road, Kuvempunagar, Mysuru
9611028523 9343142258

ನಿರ್ಮಲ ಸರ್ವೀಸ್
ಸಂಪು ಕ್ಲೀನಿಂಗ್‌ಗಾಗಿ ಸಂಪರ್ಕಿಸಿ:
6364079244

ಟ್ಯಾಂಕ್ ಮತ್ತು ಸೋಲಾರ್ ಸರ್ವೀಸ್
ಜರ್ಮನ್ ಟೆಕ್ನಾಲಜಿ ಬಳಸಿ ಸಂಪು, ಟ್ಯಾಂಕ್ ಮತ್ತು ಸೋಲಾರ್ ಸರ್ವೀಸ್ ಮಾಡಲಾಗುತ್ತದೆ.
Mob: 9008711654

ಸ್ಕೂಲ್, ಕಾಲೇಜ್ ಯೂನಿಫಾರಂ

ಬ್ಲೇಜರ್ ರೂ.1300
ಲ್ಯಾಬ್ ಏಪ್ರಾನ್ ರೂ. 300
ಭಾವಸಾರ್ ಶ್ರೀಗಣೇಶ್
ಅಗ್ರಹಾರ, ಬಸವೇಶ್ವರ ರಸ್ತೆ ರೇಸ್ ಕ್ಲಬ್, ಮೈಸೂರು

ವಧು–ವರಾನ್ವೇಷಣೆ
ಒಕ್ಕಲಿಗ/ಕುರುಬ/ಲಿಂಗಾಯತ/ನಾಯಕ/ SC & ಎಲ್ಲಾ ಜಾತಿಯ ವಧು–ವರರಿಗಾಗಿ ಕೂಡಲೇ ಸಂಪರ್ಕಿಸಿ (II Marriages Also)
9343175000

SITE FOR SALE
40×60 Manasinagara Near devegowda circle
7892565278

WANTED
Clerical staff for a leading transport company, good in computer skills & management skills, communication skill. Two wheeler must. M/F can apply. Experience in transport is preferred. Contact:
Mob: 9945026767

REQUIRED
A female Office Assistant, Excel with good communication skills, 1-2 years experience. Rs. 12,000 plus incentives. Office in 3rd Stage, Vijayanagar, Mysore.
Mob: 7996176555

ಸುವರ್ಣ ಯಾತ್ರ
1) ಗುಜರಾತ್ ಪ್ರವಾಸ 8 ದಿನಗಳು 18–7–2024.
2) ನೇಪಾಳ, ಪಶುಪತಿನಾಥ, ಮುಕ್ತಿನಾಥ, ಅಯೋಧ್ಯೆ ಪ್ರವಾಸ 9 ದಿನಗಳು 18–6–2024 ಹಾಗೂ 24–7–2024.
3) ಕಾಶಿ, ಗಯಾ, ಬಾಬಾ ವೈದ್ಯನಾಥ್, ಅಯೋಧ್ಯೆ 7 ದಿನಗಳು 23–7–2024.
8660233673, 9480843945

ರೆಸ್ಟೋರೆಂಟ್ ಬಾಡಿಗೆಗೆ
ಯಶಸ್ವಿಯಾಗಿ ನಡೆಯುತ್ತಿರುವ ರೆಸ್ಟೋರೆಂಟ್, ಸುಸಜ್ಜಿತ ಹಾಗೂ ಎಲ್ಲಾ ಕಿಚನ್ ಸಲಕರಣೆಗಳು ಹೊಂದಿದ್ದು, ಬೊಮ್ಮೂರು ಅಗ್ರಹಾರ, ಶ್ರೀರಂಗಪಟ್ಟಣ, ಫನ್‌ವರ್ಲ್ಡ್ ಪಕ್ಕದಲ್ಲಿರುವ ರೆಸ್ಟೋರೆಂಟ್.
Call: 78923 54779

ಸೈಟುಗಳು ಮಾರಾಟಕ್ಕಿವೆ
ಸುಲಭವಾಗಿ 15 ಕಂತುಗಳಲ್ಲಿ ಪಾವತಿಸಿ Govt. ಹೈಸ್ಕೂಲ್ & ಕಾಲೇಜು ಹತ್ತಿರ Yelwala ನಂತರ.
8050009696

ಬೇಕಾಗಿದ್ದಾರೆ ಸೆಕ್ಯೂರಿಟಿ ಗಾರ್ಡುಗಳು
ಸ್ಥಳ: ನಜರಬಾದ್, ವಿದ್ಯಾರಣ್ಯಪುರಂ ಪಡುವಾರಹಳ್ಳಿ, ಕೆ.ಆರ್.ಎಸ್., ಅಗ್ರಹಾರ, ಸಾತಗಳ್ಳಿ, ಬೆಳಗೊಳ, ಇಂಡಸ್ಟ್ರಿಯಲ್ ಏರಿಯಾ ಉಚಿತ ವಸತಿ / ESI/PF ಹಾಗೂ ಆಕರ್ಷಕ ಸಂಬಳ ನಿಗದಿತ ಸಮಯಕ್ಕೆ
9686422400
9242406261

ತಕ್ಷಣ ಬೇಕಾಗಿದ್ದಾರೆ
ಮೈಸೂರಿನ ಹೆಸರಾಂತ MNC ಕಂಪನಿಗಳಿಗೆ 7th, 10th, PUC, ITI, Diploma Any Degree, MBA, BE ಆದ Packing, Helper, Production, Mechine Operator, Cashier, Billing, Admin, HR Assistant, Data Entry Tellicalling ಇಂದೇ ಬೇಕಾಗಿದ್ದಾರೆ.
9741307322
9035143190

ಬರವಣಿಗೆ ಕೆಲಸ
ಮನೆಯಿಂದಲೇ ಫಾರಂ ಭರ್ತಿ ಮಾಡಿ ಪ್ರತಿ ತಿಂಗಳಿಗೆ ರೂ. 15,000 ಸಂಪಾದಿಸಿ.
Mob: 9731891409

ವಿವಾಹ ಭಾಗ್ಯ
ಎಲ್ಲಾ ಧರ್ಮದ, ಭಾಷೆಯ ಹಾಗೂ ಜಾತಿಯ ವಧು ವರರಿಗಾಗಿ ಸಂಪರ್ಕಿಸಿ
1) ಮೊದಲನೆ ಮದುವೆ
2) ಎರಡನೇ ಮದುವೆ
3) ವಿಧವೆ / ವಿಧುರರು
MRJ Matrimony
8904890413, 8904890419

ಸಂಪು ಮತ್ತು ಟ್ಯಾಂಕ್ ಕ್ಲೀನಿಂಗ್‌ಗಾಗಿ ಸಂಪರ್ಕಿಸಿ
Mob: 8880558064

WANTED
Female Store Keeper for Medical Distributors
Location- Near City Bus Stand
Timings - 10 to 7.30
9739377827
9739499933

ಸಂಪು ಮತ್ತು ಟ್ಯಾಂಕ್ ಕ್ಲೀನಿಂಗ್‌ಗಾಗಿ ಸಂಪರ್ಕಿಸಿ
Mob: 7204494854

HOUSE FOR SALE
Muda Layout 2+1 BHK 20x30 South Facing Site East Facing door Shanthaveri Gopal Gowda Nagar, Mysore
9740019514
9738884777

ಬೇಕಾಗಿದೆ
ಲಾಲ್ ಬಹದ್ದೂರ್ ಶಾಸ್ತ್ರಿ ನಗರ, ಗೋಪಾಲಗೌಡನಗರ, ಲಲಿತಾದ್ರಿನಗರ ಹಾಗೂ ಸಪ್ತಮಾತೃಕೆ ಲೇಔಟ್‌ಗಳಲ್ಲಿ ಸೈಟುಗಳು ಬೇಕಾಗಿದೆ.
9900125239

TO-LET
Only Docters MBBS or MD Near T.K.Layout Maruthi Temple
7349369839

ಬೇಕಾಗಿದ್ದಾರೆ
ಪಿರಿಯಾಪಟ್ಟಣ ಪ್ರತಿಷ್ಠಿತ ಶಾಲೆಗೆ ಸ್ಕೂಲ್ ವ್ಯಾನ್ ಹಾಗೂ ನುರಿತ ಆಡುಗೆಯವರು ಬೇಕಾಗಿದ್ದಾರೆ (ಮಹಿಳೆಯರಿಗೂ ಆದ್ಯತೆ ಉಂಟು,) ಒಳ್ಳೆಯ ಸಂಬಳ ಹಾಗೂ ವಸತಿ ವ್ಯವಸ್ಥೆ ಇರುತ್ತದೆ. ಆಸಕ್ತರು ತಕ್ಷಣವೇ ಸಂಪರ್ಕಿಸುವುದು
9916089395
7975695514

WANTED
Driver & Delivery Boys for E-Commerce Four & Two wheller
8310381391
9035757342
8867366268

ಬೇಕಾಗಿದ್ದಾರೆ
Wholesale ಅಂಗಡಿಗೆ
1) Tally Operator - 1 Post
2) SSLC Pass ಆಗಿರುವ ಹುಡುಗರು ಅಂಗಡಿಯಲ್ಲಿ ಕೆಲಸ ಮಾಡಲು ಬೇಕಾಗಿದ್ದಾರೆ.
Sri Balaji Agro Traders
9886666230

ಕಾರ್ನರ್ ಸೈಟ್ ಸೇಲ್
ಏರ್ ಪೋರ್ಟ್ ಹಿಂಭಾಗದ ಸ್ಟೇಟ್ ಹೈವೇನಲ್ಲಿರುವ ಲೇಔಟ್ ಈಸ್ಟ್ ಫೇಸಿಂಗ್, ಮುಡಾ ಖಾತೆ, 8.7ಮೀ x 12ಮೀ. 35 ಲಕ್ಷ
9342123373

ಬೇಕಾಗಿದ್ದಾರೆ
ಮೈಸೂರಿನ ಪ್ರತಿಷ್ಠಿತ ಕಂಪನಿಗೆ ಸೇಲ್ಸ್ ಮ್ಯಾನೇಜರ್ ಟೆಲಿಕಾಲರ್ಸ್ ಹಾಗೂ ಡ್ರೈವರ್ಸ್ ಬೇಕಾಗಿದ್ದಾರೆ.
411, 'ಬಿ' ಬ್ಲಾಕ್, ಜೆ.ಪಿ.ನಗರ, ಮೈಸೂರು–570031
8618542280

WANTED
Sales Boys for a Sports Shop In Mysore, Full Time 10 am to 7pm Part Time 5 pm to 9.30 pm For futher details contact
7760109047
8105368325

ಕಳೆದಿದೆ
ನಂಗರಾಜು ನಂ.616, 3ನೇ ಕ್ರಾಸ್, ಎಂ.ಜಿ.ಕೊಪ್ಪಲು, ಮೈಸೂರು ಇವರ ಸ್ವತ್ತಿನ ಖಾತೆ ಸಂಖ್ಯೆ 9608 ಮನೆ ನಂ. 1478 ವಿಜಯನಗರ 4ನೇ ಹಂತದ ಮನೆಯ ಮೂಲ ಕ್ರಯಪತ್ರ ಮತ್ತು ಖಾತೆ ದಿನಾಂಕ: 5/6/2024 ರಂದು ಜೆರಾಕ್ಸ್ ಮಾಡಿಸುವಾಗ ಕಳೆದು ಹೋಗಿರುತ್ತದೆ. ಸಿಕ್ಕಿದವರು ಸಂಪರ್ಕಿಸಿ:
9900501309

ಬಾಡಿಗೆಗೆ ಅಥವಾ ಮಾರಾಟಕ್ಕೆ
8x38 ಅಡಿ ಪೂರ್ವದಿಕ್ಕು ಸಣ್ಣ ಮನೆ ಕಲ್ಲಾರ್ ಶೀಟ್ 4ನೇ ಕ್ರಾಸ್ ಗಲ್ಲಿಯಲ್ಲಿ ಕೃಷ್ಣಮೂರ್ತಿಪುರಂ (ಹುಡುಗಿಯರಿಗೆ ಅಥವಾ ಸಣ್ಣ ಸಂಸಾರಕ್ಕೆ ಯೋಗ್ಯ)
7975447262

HOUSE FOR RENT
3BHK North Facing 1st Floor at Jayalaxmipuram Mysore For Rent/ Office Space for Rent Vegetarian Only
9538755123
9535646867

SITE FOR SALE
30X40 Vishwas Layout Yelwala Hunsur Road Brokers Excuse
9916685959

ಮನೆ ಬಾಡಿಗೆಗೆ/ಭೋಗ್ಯಕ್ಕೆ ಇದೆ
ಶ್ರೀರಾಂಪುರ ರಿಂಗ್ ರಸ್ತೆ ಹತ್ತಿರ (ಯೂನಿವರ್ಸಿಟಿ ಲೇಔಟ್ ಎದುರು) 1ನೇ ಮಹಡಿ 2BHK 2ನೇ ಮಹಡಿ 1 BHK ಮನೆ ಭೋಗ್ಯ / ಬಾಡಿಗೆಗೆ ಇದೆ
8105143049
9448092818

ಬೇಕಾಗಿದ್ದಾರೆ
ಬಸವ ಮಾರ್ಗ ವ್ಯಸನ ಮುಕ್ತ ಕೇಂದ್ರಕ್ಕೆ ಅನುಭವವುಳ್ಳ ನುರಿತ ಆಪ್ತ ಸಮಾಲೋಚಕರು ಬೇಕಾಗಿದ್ದಾರೆ ಆಕರ್ಷಕ ಸಂಬಳ ನೀಡಲಾಗುತ್ತದೆ. ವಿದ್ಯಾರ್ಹತೆ: MS (Psychology) ಸ್ಥಳ: ಹೆಬ್ಬಾಳ್ ರಿಂಗ್ ರೋಡ್ ಮೈಸೂರು
8803344999

ಹೊಸ ಮನೆ ಮಾರಾಟಕ್ಕೆ ಹಾಗೂ ಸೈಟುಗಳು ಮಾರಾಟಕ್ಕಿವೆ
ಶ್ರೀರಾಂಪುರ ರಿಂಗ್ ರಸ್ತೆ ಹಾಗೂ ಶ್ರೀನಗರ ಹಿಂಭಾಗ, ಮೈಸೂರು
8050345574

ವಾಣಿಜ್ಯ ಮಳಿಗೆ ಬಾಡಿಗೆಗೆ ಇದೆ
24x36, 864 ಚದರ ಅಡಿ ವಿವೇಕಾನಂದ ಸರ್ಕಲ್ ಕುವೆಂಪುನಗರ
8277590919

WANTED
Tele callers
9035455096
9035455091

ಬೇಕಾಗಿದ್ದಾರೆ
ಸಣ್ಣ ಕುಟುಂಬ ಒಂದಕ್ಕೆ ಸಸ್ಯಾಹಾರಿ ಅಡುಗೆ ಮತ್ತು ಇತರೆ ಮನೆಗೆಲಸ ಮಾಡಲು ಸಸ್ಯಾಹಾರಿ ಹೆಂಗಸು ಬೇಕಾಗಿದ್ದಾರೆ ಬೆಳಿಗ್ಗೆ ಮತ್ತು ಸಂಜೆ ಸಂಬಳ 300/- ಪ್ರತಿದಿನಕ್ಕೆ ಆಸಕ್ತರು ಖುದ್ದು ಭೇಟಿಯಾಗಿ ಚಿನ್ನ ಗುಂಗೋತ್ರಿ ಕಾನ್ವೆಂಟ್ ರಾಜೇಂದ್ರ ನಗರ (N R Mohalla) ಮೈಸೂರು
9243580672

ಮಳಿಗೆ ಬಾಡಿಗೆಗೆ ಇದೆ SHOP FOR RENT
14x21 ft Near Sangam Bhandar Bus Stop, Prashanth Nagar, Bogadi 2nd Stage, Mysore-570026
8762988145
9481057802

New House for sale
Fully Furnished 20×40 duplex Vani Vilas layout (MUDA) Bannur road, opp. Vidya vikas college Direct owner
9309833881

My Safety 24×7
Required Dealers For Mysore & Madikeri & also Required workers' Earn Good income
9900929266
86600 85617

ಮನೆ ಬಾಡಿಗೆಗಿದೆ
ಕುವೆಂಪುನಗರದ M ಬ್ಲಾಕ್‌ನಲ್ಲಿರುವ 20x30ರ ನಿವೇಶನದಲ್ಲಿರುವ 2 ಬೆಡ್ ರೂಂ, AEH ಸೋಲಾರ್ ಸೌಲಭ್ಯವಿರುವ ಉತ್ತರ ದಿಕ್ಕಿಗೆ ಬಾಗಿಲಿರುವ 1ನೇ ಮಹಡಿ (I Floor) ಹಾಗೂ 1ನೇ ಮಹಡಿ II Floor ಮನೆಗಳು ಬಾಡಿಗೆಗೆ ಇರುತ್ತವೆ (ಮಧ್ಯವರ್ತಿಗಳಿಗೆ ಅವಕಾಶವಿರುವುದಿಲ್ಲ)
9449703452

ಬ್ರಾಹ್ಮಣ/ಲಿಂಗಾಯತ ವರ ಬೇಕಾಗಿದೆ
ಬ್ರಾಹ್ಮಣ ವಧು, ವಯಸ್ಸು–27 SSLC ಕಲಿತಿರುವ / ವಯಸ್ಸು–29 PUC /ಮಯಸ್ಸು 33, SSLC/ ವಯಸ್ಸು 40 PUC ಕಲಿತಿರುವ ವಧುವಿಗೆ ವರ ಬೇಕಾಗಿದೆ (ಕೃಷಿಕರು, ಹುರೋಹಿತರು, ಅಡುಗೆಯವರು, ಇನ್ನಿತರ ಉದ್ಯೋಗದಲ್ಲಿರುವ ವರಗಳು) ಸಂಪರ್ಕಿಸಿ: ವಿವಾಹ ವೇದಿಕೆ, ಮಂಗಳೂರು
9880685177

ಬೇಕಾಗಿದ್ದಾರೆ
ಡೆಲಿವರಿ ಬಾಯ್ ಕೆಲಸಕ್ಕೆ ಹುಡುಗರು ಬೇಕಾಗಿದ್ದಾರೆ
ಸಂಬಳ 16000/-
Ph.7406 369 369

ಮಾರಾಟಕ್ಕಿದೆ
20x40 W/F ಸೈಟ್ 60ಲಕ್ಷ ಶ್ರೀರಾಂಪುರ 2ನೇ ಹಂತ 11 ಗುಂಟೆ ಜಮೀನು N/F, 1 ಗುಂಟೆಗೆ 12 ಲಕ್ಷ ದೇವನಳ್ಳಿ ಮುಖ್ಯ ರಸ್ತೆ 95x115
9342288281

ಮುಡಾ ಮನೆ ಮಾರಾಟಕ್ಕಿದೆ
20x30 ಹೆಬ್ಬಾಳ್ 1ನೇ ಹಂತದಲ್ಲಿ
9980797799

ಮನೆ ಮಾರಾಟಕ್ಕಿದೆ
ಹುಣಸೂರು ಟೌನ್ ಮಂಜುನಾಥ ಬಡಾವಣೆಯಲ್ಲಿರುವ ಮನೆ ನಂ.30/31ರಲ್ಲಿ 50x30 ಅಳತೆಯ Ground Floor ಹಾಗೂ 1st Floorನಲ್ಲಿ ನಿರ್ಮಿಸಲಾಗಿರುವ ಹಾಗೂ ಎಲ್ಲಾ ಸೌಕರ್ಯ ಇರುವ ಮನೆ ಮಾರಾಟಕ್ಕಿದೆ ಆಸಕ್ತಿಯುಳ್ಳವರು ಸಂಪರ್ಕಿಸಬೇಕಾಗಿರುವ ನಂ.
8951845253

FOR SALE
1) Commercial Building Earning Rent of 1-10 Lakh per month (PG IN 3 Floors, E V Showroom In Ground Floor) In East of VISHWAMANAVA Double Road Kuvempunagar Is for Sale
2) 40x60 Park facing Site Near A to Z Kuvempunagar is FOR SALE
8105751169
9620607138

ಇಂದೇ ಸಂಪರ್ಕಿಸಿ
ಮೈಸೂರಿನ ಪ್ರಸಿದ್ಧ ಆಫೀಸ್ ಕೆಲಸಗಳು ಮತ್ತು ಕಂಪನಿಗಳಿಗೆ 7th, 10th, PUC, ITI, Diplamo Pass / Fail) ಆದ ಯುವಕ/ಯುವತಿಯರು Packing, Helper, Telecalling, Data Entry, Receptionist, Line Incharge, Billing, ಮುಂತಾದ ಕೆಲಸಗಳಿಗೆ ಬೇಕಾಗಿದ್ದಾರೆ. ಸಂಬಳ 14500/- 39000/- (ESI+PF+OT) ಇದೆ
9164052361
9740468212

ಸೈಟುಗಳು ಮಾರಾಟಕ್ಕಿದೆ
ನಿವೇದಿತ ನಗರ 40x60 W/F
ಜೆ.ಪಿ. ನಗರ 40x60 W/F
ಆನಂದ ನಗರ 30x40 S/F
9945148025

ಶ್ರೀ ಸಿದ್ದೇಶ್ವರ ಟೂರಿಸ್ಟ್ & ಟ್ರಾವೆಲ್ಸ್
ಗಾಂಧಿ ಚೌಕ್, ಮೈಸೂರು
ಉತ್ತರ ಭಾರತದ 12 ದಿನಗಳ ಪ್ರವಾಸ ರೈಲು ಮತ್ತು ಬಸ್ಸಿನಲ್ಲಿ ಪ್ರಯಾಣ ದಿನಾಂಕ: 22–07–2024 ಕ್ಷೇತ್ರಗಳ ದರ್ಶನ: ದೆಹಲಿ, ಮಥುರಾ, ಆಗ್ರಾ, ಅಲಹಾಬಾದ್, ಕಾಶಿ, ಅಯೋಧ್ಯ, ಹರಿದ್ವಾರ್, ಋಷಿಕೇಶ ಇತ್ಯಾದಿ
ವ್ಯವಸ್ಥಾಪಕರು : ರಾಜಣ್ಣ
9343288718, 8296956718

ಬೇಕಾಗಿದ್ದಾರೆ
1) ಕಂಪ್ಯೂಟರ್ ಜ್ಞಾನ ಉಳ್ಳವರು (ಹುಡುಗಿಯರು – Unmarried)
2) ಕೆಲಸಕ್ಕೆ ಹುಡುಗಿಯರು ಬೇಕಾಗಿದ್ದಾರೆ. Unmarried)
ವಿಚಾರಿಸಿ : ಚೇತನ ಬುಕ್ ಹೌಸ್ ನಾರಾಯಣಶಾಸ್ತ್ರಿ ರಸ್ತೆ, ಮೈಸೂರು

ಮೈಸೂರು ಮಿತ್ರ ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಂದಿಗೆ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

ಮತ್ತಷ್ಟು ವರ್ಗೀಕೃತ ಜಾಹೀರಾತು ಪುಟ 10 ರಲ್ಲಿ

ಕೇಕ್ ಸೇರಿ ಆಹಾರ ಪದಾರ್ಥಗಳ ಪ್ಯಾಕಿಂಗ್, ಪಾರ್ಸಲ್‌ಗೆ ನ್ಯೂಸ್ ಪೇಪರ್ ಬಳಕೆ

• ಇಂಕ್‌ನಲ್ಲಿರುವ ರಾಸಾಯನಿಕ ಸೇರ್ಪಡೆಯಿಂದ ಜೀವಕ್ಕೆ ಕುತ್ತು • ಪ್ಯಾಕಿಂಗ್, ಪಾರ್ಸಲ್ ಹಣ ಉಳಿಸಲು ವ್ಯಾಪಾರಸ್ಥರ ಸುಲಭ ಮಾರ್ಗ • ವ್ಯಾಪಾರಸ್ಥರ ಹಣ ಉಳಿತಾಯಕ್ಕೆ ಜನರ ಆರೋಗ್ಯ ಬಲಿ • ಜನರು ಇಂತಹ ಆಹಾರ ಖರೀದಿ ಬಹಿಷ್ಕರಿಸಬೇಕು

• ಬಾಪುಲಿಂಗರಾಜ್ ಅರಸ್

ಮೈಸೂರು, ಜೂ.7– ಕೇಕ್ ಸೇರಿದಂತೆ ಆಹಾರ ಪದಾರ್ಥಗಳನ್ನು ಪಾರ್ಸಲ್ ಅಥವಾ ಪ್ಯಾಕಿಂಗ್ ಮಾಡಲು ನ್ಯೂಸ್ ಪೇಪರ್‌ಗಳನ್ನು ಬಳಸದಂತೆ ಭಾರತೀಯ ಆಹಾರ ಸುರಕ್ಷತೆ ಮತ್ತು ಗುಣಮಟ್ಟ ಪ್ರಾಧಿಕಾರ ಕಠಿಣ ಎಚ್ಚರಿಕೆ ನೀಡಿದೆ. ನ್ಯೂಸ್ ಪೇಪರ್‌ನಲ್ಲಿರುವ ಇಂಕ್‌ನ ರಾಸಾಯನಿಕ ಅಂಶಗಳು ಆಹಾರ ಪದಾರ್ಥ ಸೇರಿ ಕ್ಯಾನ್ಸರ್ ಸೇರಿದಂತೆ ಇತರೆ ಮಾರಕ ರೋಗಗಳಿಗೆ ಕಾರಣವಾಗುತ್ತದೆ. ಆದರೂ ಮೈಸೂರಿನ ಬೇಕರಿ ಸೇರಿದಂತೆ ಹೋಟೆಲ್, ಫಾಸ್ಟ್ ಫುಡ್‌ಗಳಲ್ಲಿ ಆಹಾರ ಪದಾರ್ಥಗಳ ಪಾರ್ಸಲ್ ಹಾಗೂ ಪ್ಯಾಕಿಂಗ್‌ಗೆ ನ್ಯೂಸ್ ಪೇಪರ್‌ಗಳನ್ನು ಬಳಸಲಾಗುತ್ತಿದೆ.

ಭಾರತದಲ್ಲಿ 14.1 ಲಕ್ಷ ಹೊಸ ಕ್ಯಾನ್ಸರ್ ಪ್ರಕರಣಗಳು ದಾಖಲಾಗಿದ್ದು, 9.1 ಲಕ್ಷ ಮಂದಿ ಕ್ಯಾನ್ಸರ್‌ನಿಂದ ಮೃತಪಟ್ಟಿದ್ದಾರೆ ಎಂದು ವಿಶ್ವ ಆರೋಗ್ಯ ಸಂಸ್ಥೆ ವರದಿ ಮಾಡಿದೆ. ದಿನ ಕಳೆದಂತೆ ಕ್ಯಾನ್ಸರ್‌ನಿಂದ ಮೃತಪಟ್ಟವರ ಸಂಖ್ಯೆ ಹೆಚ್ಚಾಗುತ್ತಿದೆ. ರಾಸಾಯನಿಕಯುಕ್ತ ಆಹಾರ ಪದಾರ್ಥಗಳ ಸೇವನೆ ಕ್ಯಾನ್ಸರ್ ಬರಲು ಪ್ರಮುಖ ಕಾರಣವಾಗಿದೆ.

ರಾಸಾಯನಿಕ ಅಂಶ ಬೆರೆತಿರುವ ಆಹಾರ ಪದಾರ್ಥ ಸೇವಿಸುತ್ತಿರುವುದು ಜನರ ಅರಿವಿಗೆ ಬರುತ್ತಿಲ್ಲ. ತಾವು ಸೇವಿಸುತ್ತಿರುವ ಆಹಾರದಲ್ಲಿ ರಾಸಾಯನಿಕ ಅಂಶ ಸೇರಿದೆ ಎಂಬ ವಾಸ್ತವತೆ ಜನರಿಗೆ ತಿಳಿಯುತ್ತಲೇ ಇಲ್ಲ. ಕೇಕ್ ಸೇರಿದಂತೆ ಇತರೆ ಆಹಾರ ಪದಾರ್ಥಗಳನ್ನು ಪಾರ್ಸಲ್ ಹಾಗೂ ಪ್ಯಾಕಿಂಗ್ ಮಾಡಲು ನ್ಯೂಸ್ ಪೇಪರ್ ಬಳಸುತ್ತಿರುವುದು ಇದಕ್ಕೆ ಸ್ಪಷ್ಟ ಉದಾಹರಣೆಯಾಗಿದೆ.

ಬೇಕರಿಗಳಲ್ಲಿ ಕೇಕ್‌ಗಳನ್ನು ತಯಾರಿಸಿದ ಮೇಲೆ ಅದನ್ನು ನ್ಯೂಸ್ ಪೇಪರ್‌ಗಳ ಮೇಲೆ ಇಡಲಾಗುತ್ತದೆ. ಕೇಕ್ ಪ್ಯಾಕಿಂಗ್ ಜೊತೆಗೆ ಗ್ರಾಹಕರಿಗೆ ಕೇಕ್ ನೀಡುವಾಗ ನ್ಯೂಸ್ ಪೇಪರ್ ಮೇಲೆ ಇಟ್ಟು ವಿತರಣೆ ಮಾಡಲಾಗುತ್ತದೆ.

ಕೇಕ್‌ನ ತಳ ಭಾಗ ಹಾಗೂ ಸುತ್ತ ನ್ಯೂಸ್ ಪೇಪರ್‌ನಿಂದ ಪ್ಯಾಕ್ ಮಾಡಲಾಗಿರುತ್ತದೆ. ಕೇಕ್‌ನಲ್ಲಿ ಶೇಕಡ 80 ರಷ್ಟು ಭಾಗ ಸಕ್ಕರೆ ಅಂಶ ಇರುತ್ತದೆ. ಇದರಿಂದ ಸಕ್ಕರೆ ಅಂಶ ನ್ಯೂಸ್ ಪೇಪರ್‌ನಲ್ಲಿರುವ ಇಂಕ್‌ನ ಅಂಶಗಳನ್ನು ಸುಲಭವಾಗಿ ಹೀರಿಕೊಳ್ಳುತ್ತದೆ.

ಇಂಕ್‌ನಲ್ಲಿರುವ ಕಪ್ಪು ಶಾಯಿ, ಸೀಸ ಮತ್ತು ಭಾರಿ ಲೋಹದ ಅಂಶಗಳು ಕೇಕ್ ಸೇರುತ್ತದೆ. ಇಂತಹ ಕೇಕ್ ಆರೋಗ್ಯದ ಮೇಲೆ ಪ್ರತಿಕೂಲ ಪರಿಣಾಮ ಬೀರುತ್ತದೆ. ಪ್ರಮುಖವಾಗಿ ಕ್ಯಾನ್ಸರ್‌ನಂತಹ ಮಾರಕ ಖಾಯಿಲೆಗಳು ಮನುಷ್ಯನನ್ನು ಬಲಿ ತೆಗೆದುಕೊಳ್ಳುತ್ತದೆ.

ಈ ಹಿನ್ನೆಲೆ ಭಾರತೀಯ ಆಹಾರ ಮತ್ತು ಸುರಕ್ಷತಾ ಪ್ರಾಧಿಕಾರ ಆಹಾರ ಸುರಕ್ಷತೆ ಮತ್ತು ಗುಣಮಟ್ಟ(ಪ್ಯಾಕೇಜಿಂಗ್) ನಿಯಮಾವಳಿಗಳು 2018 ರ ಪ್ರಕಾರ ಕೇಕ್ ಸೇರಿದಂತೆ ಆಹಾರ ಪದಾರ್ಥಗಳನ್ನು ಪ್ಯಾಕಿಂಗ್ ಹಾಗೂ ಪಾರ್ಸಲ್ ಮಾಡುವುದು ನಿಷೇಧಿಸಿದೆ. ಸರ್ಕಾರದ ಆದೇಶ ಧಿಕ್ಕರಿಸಿದರೆ ದಂಡಾಸ್ತ್ರ ಪ್ರಯೋಗಿಸಲಾಗುವುದು ಎಂಬ ಕಠಿಣ ಕೂಡ ಎಚ್ಚರಿಕೆ ನೀಡಿದೆ.

ಆದರೆ ಮೈಸೂರಿನಲ್ಲಿ ಬಹಳಷ್ಟು ಬೇಕರಿಗಳಲ್ಲಿ ಇನ್ನು ಕೂಡ ಕೇಕ್ ತಯಾರಿಸಿದ ಮೇಲೆ ಪ್ಯಾಕಿಂಗ್, ಶೇಖರಣೆ ಹಾಗೂ ವಿತರಣೆಗೆ ನ್ಯೂಸ್ ಪೇಪರ್ ಬಳಸಲಾಗುತ್ತಿದೆ. ಬೇಕರಿಗಳಲ್ಲಿ ಮಾತ್ರವಲ್ಲದೆ ಮದುವೆ ಸೇರಿದಂತೆ ಇತರೆ ಸಮಾರಂಭಗಳಲ್ಲಿ ಮೈಸೂರು ಪಾಕ್, ಬರ್ಫಿ ಸೇರಿದಂತೆ ಇತರೆ ಸ್ವೀಟ್‌ಗಳನ್ನು ತಯಾರಿಸಿದ ಮೇಲೆ ಟ್ರೇಗಳಲ್ಲಿ ನ್ಯೂಸ್ ಪೇಪರ್ ಇಟ್ಟು ಅದರ ಮೇಲೆ ಪಾಕಗಳನ್ನು ಹಾಕಲಾಗುತ್ತದೆ. ಬಿಸಿ ಹಾರಿದ ಮೇಲೆ ಮೈಸೂರು ಪಾಕ್, ಬರ್ಫಿ ಸೇರಿದಂತೆ ಇತರೆ ಸ್ವೀಟ್ ಕತ್ತರಿಸಲಾಗುತ್ತದೆ. ಆದರೆ ಅಷ್ಟರಲ್ಲಾಗಲೆ ನ್ಯೂಸ್ ಪೇಪರ್‌ನಲ್ಲಿರುವ ಇಂಕ್‌ನ ರಾಸಾಯನಿಕ ಅಂಶ ಸಕ್ಕರೆ ಅಂಶದ ಮೂಲಕ ಸಿಹಿಯನ್ನು ಸೇರಿರುತ್ತದೆ.



ಹೋಟೆಲ್, ರಸ್ತೆ ಬದಿ, ಫಾಸ್ಟ್‌ಫುಡ್‌ಗಳಲ್ಲೂ ಇದೇ ಪರಿಸ್ಥಿತಿ ಇದೆ. ಜೊತೆಗೆ ಬಜ್ಜಿ, ಬೊಂಡಾ, ಸಮೋಸಾ ಸೇರಿದಂತೆ ಇತರೆ ಆಹಾರ ಪದಾರ್ಥಗಳನ್ನು ಮಾಡಿದ ಮೇಲೆ ಅದನ್ನು ನ್ಯೂಸ್ ಪೇಪರ್ ಮೇಲೆ ಇಡಲಾಗುತ್ತದೆ. ಗ್ರಾಹಕರಿಗೆ ನೀಡುವ ಸಂದರ್ಭದಲ್ಲಿ ನ್ಯೂಸ್ ಪೇಪರ್‌ಗಳಲ್ಲಿ ಪೊಟ್ಟಣ ಕಟ್ಟಿ ಬಜ್ಜಿ, ಬೊಂಡಾ, ಸಮೋಸಾ ಸೇರಿದಂತೆ ಇತರೆ ಆಹಾರ ಪದಾರ್ಥಗಳನ್ನು ನೀಡಲಾಗುತ್ತದೆ. ಬಜ್ಜಿ, ಬೊಂಡಾದಲ್ಲಿರುವ ಎಣ್ಣೆ ಅಂಶ ಇಂಕ್‌ನಲ್ಲಿರುವ ರಾಸಾಯನಿಕ ಅಂಶ ಹೀರುತ್ತದೆ.

ಹೋಟೆಲ್ ಹಾಗೂ ಫಾಸ್ಟ್‌ಫುಡ್‌ಗಳಲ್ಲಿ ಇಡ್ಲಿ, ಬಾತ್ ಸೇರಿದಂತೆ ಇತರೆ ಆಹಾರ ಪದಾರ್ಥಗಳನ್ನು ಪ್ಯಾಕ್ ಮಾಡಲು ಕೂಡ ನ್ಯೂಸ್ ಪೇಪರ್ ಬಳಲಾಗುತ್ತದೆ. ಬಾಳೆ ಎಲೆ ಹಾಗೂ ಪ್ಲಾಸ್ಟಿಕ್ ಬಳಸಿದ್ದರೂ ಅದು ಚಿಕ್ಕದಿರುವ ಕಾರಣ ಇಡೀ ಆಹಾರ ಪದಾರ್ಥವನ್ನು ನ್ಯೂಸ್ ಪೇಪರ್ ಆವರಿಸಿಕೊಂಡಿರುತ್ತದೆ. ಈ ವೇಳೆ ನ್ಯೂಸ್ ಪೇಪರ್‌ನಲ್ಲಿರುವ ಇಂಕ್‌ನ ರಾಸಾಯನಿಕ ಅಂಶ ಆಹಾರ ಪದಾರ್ಥ ಸೇರುತ್ತದೆ.

ಕೇಕ್ ತಯಾರಿಸಿದ ಮೇಲೆ ಅದನ್ನು ಪ್ಯಾಕಿಂಗ್, ಶೇಖರಣೆ ಹಾಗೂ ವಿತರಣೆಗೆ ಬಟರ್ ಪೇಪರ್‌ಗಳನ್ನು ಬಳಸಬೇಕು. ಒಂದು ಬಟರ್ ಪೇಪರ್‌ಗೆ 15 ರಿಂದ 20 ರೂಪಾಯಿ ಆಗುತ್ತದೆ. ಕಡಿಮೆ ಬೆಲೆಗೆ ಕೆ.ಜಿ. ನ್ಯೂಸ್ ಪೇಪರ್ ಬರುವ ಕಾರಣ ವ್ಯಾಪಾರಸ್ಥರು ಕೇಕ್ ಸೇರಿದಂತೆ ಇತರೆ ಆಹಾರ ಪದಾರ್ಥಗಳ ಪ್ಯಾಕಿಂಗ್ ಹಾಗೂ ಪಾರ್ಸಲ್‌ಗೆ ನ್ಯೂಸ್ ಪೇಪರ್ ಬಳಸಲಾಗುತ್ತಿದೆ.

ಹಣ ಉಳಿಸಲು ವ್ಯಾಪಾರಸ್ಥರು ಕಂಡುಕೊಂಡಿರುವ ಸುಲಭ ಮಾರ್ಗದಿಂದ ಕ್ಯಾನ್ಸರ್ ಸೇರಿದಂತೆ ಇತರೆ ಮಾರಕ ರೋಗಗಳು ಬರುತ್ತಿವೆ. ಕ್ಯಾನ್ಸರ್ ಮಾತ್ರವಲ್ಲದೆ ರಾಸಾಯನಿಕ ಅಂಶದ ಪರಿಣಾಮ ಬೇರೆ ರೀತಿ ಅನಾರೋಗ್ಯ ಸಮಸ್ಯೆಗಳು ಕಾಡಲಾರಂಭಿಸುತ್ತದೆ. ಇದು ಪ್ರಾಣಕ್ಕೆ ಕುತ್ತು ತರುವ ಸಾಧ್ಯತೆ ಕೂಡ ಇರುತ್ತದೆ.

ಈ ಹಿನ್ನೆಲೆ ಬೇಕರಿಗಳಲ್ಲಿ ಕೇಕ್ ಕತ್ತರಿಸಿ, ಶೇಖರಣೆ ಹಾಗೂ ವಿತರಣೆ ಮಾಡಲು ಯಾವುದೇ ಕಾರಣಕ್ಕೂ ನ್ಯೂಸ್ ಪೇಪರ್ ಬಳಸದಂತೆ ಭಾರತೀಯ ಆಹಾರ ಮತ್ತು ಸುರಕ್ಷಾ ಪ್ರಾಧಿಕಾರ ಕಟ್ಟುನಿಟ್ಟಿನ ಆದೇಶ ನೀಡಿದೆ.

ಅಲ್ಲದೆ ಹೋಟೆಲ್, ಫಾಸ್ಟ್‌ಫುಡ್, ಬಜ್ಜಿ, ಬೊಂಡಾ, ಸಮೋಸಾ ಮಾರಾಟ ಅಂಗಡಿಗಳಲ್ಲಿ ನ್ಯೂಸ್ ಪೇಪರ್ ಬಳಸದಂತೆ ಎಚ್ಚರಿಕೆ ನೀಡಲಾಗಿದೆ. ಆದರೂ ಮೈಸೂರಿನ ಬಹಳಷ್ಟು ವ್ಯಾಪಾರಸ್ಥರು ಕೇಕ್ ಸೇರಿದಂತೆ ಆಹಾರ ಪದಾರ್ಥಗಳ ಪ್ಯಾಕಿಂಗ್ ಹಾಗೂ ಪಾರ್ಸಲ್‌ಗೆ ನ್ಯೂಸ್ ಪೇಪರ್ ಬಳಸುತ್ತಿದ್ದಾರೆ.



ಆಹಾರ ಪದಾರ್ಥಗಳ ಪ್ಯಾಕಿಂಗ್ ಹಾಗೂ ಪಾರ್ಸಲ್ ಮಾಡಲು ನ್ಯೂಸ್ ಪೇಪರ್ ಬಳಸುತ್ತಿರುವ ಕಾರಣ ತಮ್ಮ ಆರೋಗ್ಯದ ಮೇಲೆ ಪ್ರತಿಕೂಲ ಪರಿಣಾಮ ಬೀರುತ್ತದೆ ಎಂಬ ಅರಿವು ಜನರಿಗೆ ಇಲ್ಲ. ಈಗಲಾದರೂ ಜನರು ಇದರ ಬಗ್ಗೆ ಎಚ್ಚೆತ್ತುಕೊಳ್ಳಬೇಕು. ಬೇಕರಿ, ಹೋಟೆಲ್, ಫಾಸ್ಟ್ ಫುಡ್ ಸೇರಿದಂತೆ ಇತರೆಡೆ ಆಹಾರ ಪದಾರ್ಥಗಳ ಪಾರ್ಸಲ್ ಹಾಗೂ ಪ್ಯಾಕಿಂಗ್ ಮಾಡಲು ನ್ಯೂಸ್ ಪೇಪರ್ ಬಳಸುತ್ತಿದ್ದರೆ ವ್ಯಾಪಾರಸ್ಥರನ್ನು ಪ್ರಶ್ನಿಸಬೇಕು. ಇಂತಹ ಆಹಾರ ಪದಾರ್ಥಗಳನ್ನು ನಾವು ಸೇವಿಸುವುದಿಲ್ಲ ಎಂದು ಎಚ್ಚರಿಕೆ ನೀಡಬೇಕು. ಆಗ ಮಾತ್ರ ವ್ಯಾಪಾರಸ್ಥರು ನ್ಯೂಸ್ ಪೇಪರ್ ಬಳಕೆ ಕೈ ಬಿಡುತ್ತಾರೆ. ಇಲ್ಲದಿದ್ದರೆ ಆರೋಗ್ಯ ಕೆಡಿಸಿಕೊಂಡು ಪ್ರಾಣವನ್ನೆ ಬಿಡಬೇಕಾದ ಪರಿಸ್ಥಿತಿ ಬರುತ್ತದೆ.

ಪ್ಯಾಕಿಂಗ್, ಪಾರ್ಸಲ್‌ಗೆ ನ್ಯೂಸ್ ಪೇಪರ್ ಬಳಸಿದರೆ ಸ್ಥಳದಲ್ಲೇ ದಂಡ

ಕೇಕ್ ಸೇರಿದಂತೆ ಆಹಾರ ಪದಾರ್ಥಗಳ ಪ್ಯಾಕಿಂಗ್ ಹಾಗೂ ಪಾರ್ಸಲ್‌ಗೆ ನ್ಯೂಸ್ ಪೇಪರ್ ಬಳಸುವ ವ್ಯಾಪಸ್ಥರಿಗೆ ಸ್ಥಳದಲ್ಲೆ ದಂಡ ವಿಧಿಸಲಾಗುವುದು. ಈಗಾಗಲೇ ಕಾರ್ಯಾಚರಣೆ ನಡೆಸಿ ನ್ಯೂಸ್ ಪೇಪರ್ ಬಳಕೆ ಮಾಡುತ್ತಿದ್ದ 8 ವ್ಯಾಪಾರಸ್ಥರಿಗೆ ಸ್ಥಳದಲ್ಲೆ ದಂಡ ವಿಧಿಲಾಗಿದ್ದು, 2 ಸಾವಿರ ರಿಂದ 15 ಸಾವಿರ ರೂಪಾಯಿ ತನಕ ದಂಡ ವಸೂಲಿ ಮಾಡಲಾಗಿದೆ.

ಜನರ ಆರೋಗ್ಯದ ಮೇಲೆ ಪ್ರತಿಕೂಲ ಪರಿಣಾಮ ಬೀರುವ ನ್ಯೂಸ್ ಪೇಪರ್ ಬಳಸದಂತೆ ಮತ್ತೊಮ್ಮೆ ಕಠಿಣ ಎಚ್ಚರಿಕೆ ನೀಡಲಾಗುತ್ತಿದೆ. ಆದರೂ ನ್ಯೂಸ್ ಪೇಪರ್ ಬಳಕೆ ಮಾಡುತ್ತಿರುವುದು ಕಂಡು ಬಂದರೆ ದಿಢೀರ್ ಕಾರ್ಯಾಚರಣೆ ಕೈಗೊಳ್ಳಲಾಗುವುದು. ತಪ್ಪಿತಸ್ಥ ವ್ಯಾಪಾರಸ್ಥರಿಗೆ ಯಾವುದೇ ಮುಲಾಜಿಲ್ಲದೆ ದಂಡ ವಿಧಿಸಿ ನಿರ್ದಾಕ್ಷಿಣ್ಯ ಕ್ರಮ ಕೈಗೊಳ್ಳಲಾಗುವುದು.

ಹೋಟೆಲ್ ಹಾಗೂ ಪಾಸ್ಟ್‌ಫುಡ್‌ಗಳಲ್ಲಿ ಹೆಚ್ಚಾಗಿ ನ್ಯೂಸ್ ಪೇಪರ್ ಬಳಸಲಾಗುತ್ತಿದೆ. ಇದರಿಂದ ಜನರ ಆರೋಗ್ಯದ ಮೇಲೆ ಪರಿಣಾಮ ಬೀರುತ್ತದೆ ಎಂಬುದನ್ನು ವ್ಯಾಪಾರಸ್ಥರು ಅರಿಯಬೇಕು. ಇಲ್ಲದಿದ್ದರೆ ದಂಡಾಸ್ತ್ರ ಪ್ರಯೋಗಿಸಲಾಗುವುದು.

– **ರವೀಂದ್ರ,** ಭಾರತೀಯ ಆಹಾರ ಸುರಕ್ಷತೆ ಮತ್ತು ಗುಣಮಟ್ಟ ಪ್ರಾಧಿಕಾರ, ಮೈಸೂರು ಮುಖ್ಯಸ್ಥ





ಶುಕ್ರವಾರ ಹಂಗಾಮಿ ಪ್ರಧಾನಿ ನರೇಂದ್ರ ಮೋದಿ ಬಿಜೆಪಿ ಧುರೀಣರಾದ ಎಲ್.ಕೆ.ಅಡ್ವಾಣಿ, ಮುರುಳಿ ಮನೋಹರ್ ಜೋಷಿ, ಮಾಜಿ ರಾಷ್ಟ್ರಪತಿ ರಾಮನಾಥ್ ಕೋವಿಂದ್ ಅವರನ್ನು ಭೇಟಿಯಾಗಿ ಅಭಿನಂದಿಸಿ, ಆಶೀರ್ವಾದ ಪಡೆದರು.

'ಲಕ್ಷ ವೃಕ್ಷ' ಯೋಜನಾ ಕಾರ್ಯಕ್ರಮ ಮುಂದೂಡಿಕೆ

ಮೈಸೂರು, ಜೂ.7(ಎಂಕೆ)– ಹೆಚ್.ವಿ.ರಾಜೀವ್ ಸ್ನೇಹ ಬಳಗ ಹಾಗೂ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಬಿ.ಸಿ.ಟ್ರಸ್ಟ್ ವತಿಯಿಂದ ಆಯೋಜಿಸಿದ್ದ 'ಲಕ್ಷ ವೃಕ್ಷ' ಯೋಜನಾ ಕಾರ್ಯಕ್ರಮವನ್ನು ಮುಂದೂಡಲಾಗಿದೆ.

ಮುಕ್ತ ವಿವಿ ಘಟಿಕೋತ್ಸವ ಭವನದಲ್ಲಿ ಜೂ.8 ರಂದು ಮಧ್ಯಾಹ್ನ 3 ಗಂಟೆಗೆ ಆಯೋಜಿಸಿದ್ದ ಕಾರ್ಯಕ್ರಮವನ್ನು ಕಾರಣಾಂತರಗಳಿಂದ ಮುಂದೂಡಲಾಗಿದೆ. 'ಲಕ್ಷ ವೃಕ್ಷ' ಯೋಜನಾ ಕಾರ್ಯಕ್ರಮ ನಡೆಯುವ ದಿನಾಂಕವನ್ನು ಪುನರ್ ನಿಗಧಿ ಮಾಡಿ ಮುಂದಿನ ದಿನಗಳಲ್ಲಿ ತಿಳಿಸಲಾಗುವುದು ಎಂದು ಹೆಚ್.ವಿ.ರಾಜೀವ್ ಸ್ನೇಹ ಬಳಗ ಪ್ರಕಟಣೆಯಲ್ಲಿ ತಿಳಿಸಿದೆ.

ಹೆಚ್ಚಿನ ವರ್ಗೀಕೃತ ಜಾಹೀರಾತು ಪುಟ 9ರಲ್ಲಿ

ಸೇವಾ ಕಾರ್ಯದೊಂದಿಗೆ ಜೆಡಿಎಸ್ ಮುಖಂಡ ಸುರೇಶ್ ಹುಟ್ಟುಹಬ್ಬ ಆಚರಣೆ



ಶಾಸಕ ಜಿ.ಡಿ.ಹರೀಶ್‌ಗೌಡರೊಂದಿಗೆ ಹುಟ್ಟುಹಬ್ಬ ಆಚರಿಸಿಕೊಂಡ ಜೆಡಿಎಸ್ ಮುಖಂಡ ಸುರೇಶ್‌ಗೆ ಸನ್ಮಾನ



ಆರೋಗ್ಯ ತಪಾಸಣಾ ಶಿಬಿರಕ್ಕೆ ಶಾಸಕ ಜಿ.ಡಿ.ಹರೀಶ್‌ಗೌಡರಿಂದ ಚಾಲನೆ

ಮೈಸೂರು, ಜೂ.7–ಮೈಸೂರಿನ ಮಾಜಿ ಕಾರ್ಪೊರೇಟರ್ ಸವಿತಾ ಸುರೇಶ್ ಪತಿ 44ನೇ ವಾರ್ಡ್ ಜೆಡಿಎಸ್ ಮುಖಂಡ ಸುರೇಶ್ ಅವರ ಹುಟ್ಟುಹಬ್ಬವನ್ನು ವಿವಿಧ ಸೇವಾ ಕಾರ್ಯಗಳೊಂದಿಗೆ ಅವರ ಅಭಿಮಾನಿಗಳು ಆಚರಿಸಿದರು.

ಹುಟ್ಟುಹಬ್ಬದ ಅಂಗವಾಗಿ ಏರ್ಪಡಿಸಿದ್ದ ಉಚಿತ ಆರೋಗ್ಯ ತಪಾಸಣಾ ಶಿಬಿರಕ್ಕೆ ಹುಣಸೂರು ಶಾಸಕ ಜಿ.ಡಿ.ಹರೀಶ್‌ಗೌಡ ಚಾಲನೆ ನೀಡಿದರು. ಅಲ್ಲದೆ ರಕ್ತದಾನ ಶಿಬಿರವನ್ನು ಆಯೋಜಿಸಲಾಗಿತ್ತು.

ಬಡರೋಗಿಗಳಿಗೆ ಉಚಿತವಾಗಿ ಔಷಧಿ ವಿತರಿಸಲಾಯಿತು. ಎಸ್‌ಎಸ್‌ಎಲ್‌ಸಿ ಮತ್ತು ದ್ವಿತೀಯ ಪಿಯುಸಿಯಲ್ಲಿ ಹೆಚ್ಚು ಅಂಕ ಪಡೆದಿದ್ದ 25ಕ್ಕೂ ಹೆಚ್ಚು ವಿದ್ಯಾರ್ಥಿಗಳನ್ನು ಅಭಿನಂದಿಸಲಾಯಿತು. ಪ್ರತಿ ವರ್ಷವೂ ಸುರೇಶ್ ಮತ್ತು ಸವಿತಾ ದಂಪತಿ ತಮ್ಮ ಹುಟ್ಟುಹಬ್ಬದ ಸಂದರ್ಭದಲ್ಲಿ ಸಮಾಜಸೇವಾ ಕಾರ್ಯಗಳನ್ನು ಬಹಳ ವರ್ಷಗಳಿಂದಲೂ ಮಾಡುತ್ತಾ ಬಂದಿದ್ದಾರೆ. ಈ ವೇಳೆ ಮಾಜಿ ಕಾರ್ಪೊರೇಟರ್ ಸವಿತಾ ಸುರೇಶ್, ವಕೀಲ ಸಿದ್ದರಾಜು, ಕಾಂಟ್ರಾಕ್ಟರ್ ಮಂಜು, ಆರ್.ಎಸ್ ಮಂಜು, ಟೆಂಟ್ ಕುಮಾರ್, ಸೊಸೈಟಿ ಕುಮಾರ್, ಪ್ರಸಾದ್, ಸುನೀಲ್ ಇನ್ನಿತರರು ಉಪಸ್ಥಿತರಿದ್ದರು.



ಜೆಡಿಎಸ್ ಮುಖಂಡ ಸುರೇಶ್ ಹುಟ್ಟುಹಬ್ಬದ ಹಿನ್ನೆಲೆಯಲ್ಲಿ 44ನೇ ವಾರ್ಡ್‌ನ ಎಸ್‌ಎಸ್‌ಎಲ್‌ಸಿ ಮತ್ತು ದ್ವಿತೀಯ ಪಿಯುಸಿಯಲ್ಲಿ ಹೆಚ್ಚು ಅಂಕ ಪಡೆದ 25ಕ್ಕೂ ಹೆಚ್ಚು ಪ್ರತಿಭಾನ್ವಿತ ವಿದ್ಯಾರ್ಥಿಗಳನ್ನು ಅಭಿನಂದಿಸಲಾಯಿತು.

ಅರ್ಜಿ ಆಹ್ವಾನ

ಮೈಸೂರು, ಜೂ.7– ತಿ.ನರಸೀಪುರ ತಾಲೂಕಿನ ತಲಕಾಡು ಗ್ರಾಮದಲ್ಲಿರುವ ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆಯಲ್ಲಿ 2024–25ನೇ ಸಾಲಿನ ಪ್ರವೇಶಾತಿಗಾಗಿ ವಿವಿಧ ವೃತ್ತಿಗಳಿಗೆ ಎಸ್.ಎಸ್.ಎಲ್.ಸಿ. ಉತ್ತೀರ್ಣರಾದ ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದ್ದು, ಆಸಕ್ತ ಅಭ್ಯರ್ಥಿಗಳು ಆನ್‌ಲೈನ್ ಮುಖಾಂತರ ಅಥವಾ ಖುದ್ದಾಗಿ ಕಛೇರಿಗೆ ಭೇಟಿ ನೀಡಿ ಅರ್ಜಿಯನ್ನು ಸಲ್ಲಿಸಬಹುದಾಗಿದೆ.

ಎರಡು ವರ್ಷದ ಎಲೆಕ್ಟ್ರಿಷಿಯನ್, ಫಿಟ್ಟರ್, ಮೆಕಾನಿಕ್ ಎಲೆಕ್ಟ್ರಿಕ್ ವೆಹಿಕಲ್ ಹಾಗೂ ಅಡ್ವಾನ್ಸ್ಡ್ ಸಿಎನ್‌ಸಿ ಮೆಷಿನಿಂಗ್ ಟೆಕ್ನೀಷಿಯನ್ ಕೋರ್ಸ್‌ಗಳು ಲಭ್ಯವಿದ್ದು, http://cite.karnataka.gov.in ವೆಬ್‌ಸೈಟ್ ಮೂಲಕ ಅರ್ಜಿ ಸಲ್ಲಿಸಲು ಜೂನ್ 9 ಕೊನೆಯ ದಿನವಾಗಿದೆ.

ಹೆಚ್ಚಿನ ಮಾಹಿತಿಗಾಗಿ ದೂ.ಸಂ: 9448322941 ಅಥವಾ 9980914622 ಅನ್ನು ಸಂಪರ್ಕಿಸಬಹುದಾಗಿದೆ ಎಂದು ಸರ್ಕಾರಿ ಕೈಗಾರಿಕೆ ತರಬೇತಿ ಸಂಸ್ಥೆಯ ಪ್ರಾಚಾರ್ಯರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಶ್ರೀ ವ್ಯಾಸರಾಜ ಗುರುಸಾರ್ವಭೌಮರಿಗೆ ಸಾಂಪ್ರದಾಯಕ ದರ್ಬಾರ್

ಮೈಸೂರು, ಜೂ.7(ಎಸ್‌ಪಿಎನ್)– ದ್ವೈತ ಸಿದ್ಧಾಂತದ ಮೂಲಕ ಸಕಲ ಜೀವಿಗಳಲ್ಲೂ ಲೇಸು ಬಯಸಿದ ಕೀರ್ತಿ ಶ್ರೀ ವ್ಯಾಸರಾಜ ಗುರುಸಾರ್ವಭೌಮರಿಗೆ ಸಲ್ಲುತ್ತದೆ ಎಂದು ಉತ್ತರಾದಿ ಮಠದ ಶ್ರೀ ಸತ್ಯಾತ್ಮತೀರ್ಥ ಶ್ರೀಪಾದರು ಅಭಿಪ್ರಾಯಪಟ್ಟರು.

ಮೈಸೂರು ಜೆ.ಪಿ.ನಗರದ ವಿಠ್ಠಲ ಧಾಮದಲ್ಲಿ ಸೋಸಲೆ ಶ್ರೀವ್ಯಾಸರಾಜ ಮಠದ ವತಿಯಿಂದ ಆಯೋಜಿಸಿರುವ ಶ್ರೀಮನ್ನ್ಯಾಯ ಸುಧಾಮಂಗಳ ಮಹೋತ್ಸವ ಹಾಗೂ ಸಹಸ್ರ ಚಂದ್ರ ದರ್ಶನಶಾಂತಿ ಮಹೋತ್ಸವದ ಆರನೇ ದಿನದ ಶ್ರೀ ವ್ಯಾಸರಾಜಗುರು ಸಾರ್ವಭೌಮರಿಗೆ ಸಾಂಪ್ರದಾಯಿಕ ದರ್ಬಾರ್ ಧಾರ್ಮಿಕ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದರು.

ದ್ವೈತ ಸಿದ್ಧಾಂತದಲ್ಲಿ ಮೋಕ್ಷ ಮಾರ್ಗ ಪ್ರತಿಪಾದಿಸಿದ್ದಾರೆ. ಅಲ್ಲದೆ ಅವರ ಜೀವಿತಾವಧಿಯಲ್ಲಿ ಕೈಗೊಂಡ ಹಲವು ಧಾರ್ಮಿಕ ಕಾರ್ಯಕ್ರಮಗಳು ಒಂದು ಜನ್ಮಕ್ಕೆ ಹೇಳಿ ಮುಗಿಸುವಂತಹದಲ್ಲ. ಹಾಗಾಗಿ ಶ್ರೀ ವ್ಯಾಸಗುರುಸಾರ್ವ ಭೌಮರು, ದ್ವೈತ ಸಿದ್ಧಾಂತದ ಮೂಲಕ ಜಗತ್ತಿನಲ್ಲಿ ಶಾಂತಿ, ಸಹನೆ, ಕರುಣೆ ಹಾಗೂ ಸಹೋದರತ್ವ ಪ್ರತಿಪಾದಿಸಿದ್ದಾರೆ. ಅಲ್ಲದೆ ಶ್ರೀ ವ್ಯಾಸರಾಜ ಮಹರ್ಷಿ ಗಳು ಶ್ರೀ ಕೃಷ್ಣದೇವರಾಯನ ಆಸ್ಥಾನದಲ್ಲಿ ರಾಜಗುರುಗಳಾಗಿ ಇದ್ದರು ಎಂದರು.



ಶ್ರೀ ವ್ಯಾಸರಾಜ ಗುರುಸಾರ್ವಭೌಮರ ಶೋಭಾಯಾತ್ರೆಯಲ್ಲಿ ಸೋಸಲೆ ಶ್ರೀ ವ್ಯಾಸರಾಜ ಮಠದ ಶ್ರೀವಿದ್ಯಾಶ್ರೀಶತೀರ್ಥ ಶ್ರೀಪಾದರು ಭಾಗವಹಿಸಿದ್ದರು.

ವೇದಿಕೆ ಕಾರ್ಯಕ್ರಮಕ್ಕೂ ಮುನ್ನ ರಜತ ಸಿಂಹಾಸನದಲ್ಲಿ ಶ್ರೀ ವ್ಯಾಸರಾಜ ಗುರು ಸಾರ್ವಭೌಮ ಮೂರ್ತಿಯನ್ನು ಸಾಂಪ್ರದಾಯಿಕ ದರ್ಬಾರ್‌ನಲ್ಲಿರಿಸಿ ಮುಳಬಾಗಿಲು ಶ್ರೀಪಾದರಾಜಮಠದ ಶ್ರೀಸುಜಯನಿಧಿ ತೀರ್ಥ ಶ್ರೀಪಾದರು, ಶ್ರೀ ಪಲಿಮಾರು ಮಠ ಶ್ರೀ ವಿದ್ಯಾಧೀಶತೀರ್ಥ ಶ್ರೀಪಾದರು, ಶ್ರೀ ಕಾಣಿಯೂರುಮಠದ ಶ್ರೀವಿದ್ಯಾವಲ್ಲಭ ಶ್ರೀಪಾದರು, ಶ್ರೀ ಅದಮಾರುಮಠದ ಕಿರಿಯ ಶ್ರೀಗಳಾದ ಈಶಪ್ರಿಯತೀರ್ಥ ಶ್ರೀಪಾದರು, ವಿದ್ಯಾರಾಜೇಶ್ವರ ತೀರ್ಥ ಶ್ರೀ ಪಾದರು ಸಮ್ಮುಖದಲ್ಲಿ ರತ್ನಾಭಿಷೇಕದ ಸಮರ್ಪಣೆ ಮಾಡಿದರು.

ಈ ವೇಳೆ ಆಶಾಕಿರಣ ಆಸ್ಪತ್ರೆಯ ಕೆ.ಎಸ್.ಗುರುರಾಜ, ಉದ್ಯಮಿ ಹೆಚ್.ಆರ್.ನಾಗೇಂದ್ರರಾವ್, ಹಿರಿಯ ಪತ್ರಕರ್ತ ಎ.ಆರ್.ರಘುರಾಮ್ ಅವರನ್ನು ಅಭಿನಂದಿಸಲಾಯಿತು. ನಂತರ ಹೈಕೋರ್ಟ್‌ನ ನಿವೃತ್ತ ಮುಖ್ಯ ನ್ಯಾಯಾಧೀಶ ಪಿ.ಎಸ್. ದಿನೇಶ್ ಕುಮಾರ್ ಅವರನ್ನು ಸನ್ಮಾನಿಸಲಾಯಿತು.

ಇದಕ್ಕೂ ಮುನ್ನ ಶ್ರೀ ವ್ಯಾಸರಾಜ ಮಹರ್ಷಿಗಳ ಮೂರ್ತಿಯನ್ನು ರಥದಲ್ಲಿಟ್ಟು ಅಲಂಕರಿಸಿ, ಅಕ್ಕ ಮಹಾದೇವಿ ವೃತ್ತದಿಂದ ವಿಠ್ಠಲ ಧಾಮದವರಿಗೆ ಮೆರವಣಿಗೆ ಮಾಡಲಾಯಿತು. ಈ ವೇಳೆ ಭಜನಾ ಮಂಡಳಿ ಮಹಿಳೆಯರು ಭಕ್ತಿಗೀತೆಗಳನ್ನು ಹಾಡಿದರು. ನಗಾರಿ, ದೊಳ್ಳು ಕುಣಿತ, ಹುಲಿಕುಣಿತ, ದೇವರ ಕುಣಿತ, ಕಂಸಾಳೆ ತಂಡಗಳ ಪ್ರದರ್ಶನ ಮೆರವಣಿಗೆಯಲ್ಲಿ ಗಮನ ಸೆಳೆದವು.

ನಂಜನಗೂಡಲ್ಲಿ ಬೃಹತ್ ಆರೋಗ್ಯ ತಪಾಸಣಾ ಶಿಬಿರ

ಶಿಸ್ತು, ಸಮತೋಲಿತ ಆಹಾರದಿಂದ ಉತ್ತಮ ಆರೋಗ್ಯ

ಸುತ್ತೂರು ಮಠದ ಶ್ರೀ ಶಿವರಾತ್ರೀಶ್ವರ ದೇಶಿಕೇಂದ್ರ ಸ್ವಾಮೀಜಿ



ನಂಜನಗೂಡಿಡಲ್ಲಿ ಆರೋಗ್ಯ ಶಿಬಿರ ಉದ್ಘಾಟಿಸಿದ ಸುತ್ತೂರುಶ್ರೀಗಳು.

ನಂಜನಗೂಡು, ಜೂ.7– ಮನುಷ್ಯನಿಗೆ ಆರೋಗ್ಯ ಬಹಳ ಮುಖ್ಯ. ಆರೋಗ್ಯವಂತರಾಗಿದ್ದರೆ ಏನು ಬೇಕಾದರೂ ಸಾಧನೆ ಮಾಡಬಹುದು. ಹೀಗಾಗಿ ಕಾಲ ಕಾಲಕ್ಕೆ ತಪಾಸಣೆಗೆ ಒಳಗಾಗಿ ಆರೋಗ್ಯ ಕಾಪಾಡಿಕೊಳ್ಳಬೇಕು. ಜೀವನದಲ್ಲಿ ಶಿಸ್ತು ಮತ್ತು ಸಮತೋಲಿತ ಆಹಾರ ಕ್ರಮ ಅನುಸರಿಸಿದರೆ ಆರೋಗ್ಯ ಕಾಪಾಡಿಕೊಳ್ಳಬಹುದು ಎಂದು ಸುತ್ತೂರು ಮಠದ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ತಿಳಿಸಿದರು.

ನಗರದ ಜೆಎಸ್ಎಸ್ ಮಂಗಳ ಮಂಟಪದಲ್ಲಿ ಜೆಎಸ್ಎಸ್ ಆಸ್ಪತ್ರೆ ಸಹಯೋಗದೊಂದಿಗೆ ರೋಟರಿ ಸಂಸ್ಥೆ ವತಿಯಿಂದ ಏರ್ಪಡಿಸಿದ್ದ ಬೃಹತ್ ಆರೋಗ್ಯ ತಪಾಸಣಾ ಶಿಬಿರ ಉದ್ಘಾಟಿಸಿ ಮಾತನಾಡಿದ ಅವರು, ಮನುಷ್ಯನಿಗೆ ಆರೋಗ್ಯ ಬಹಳ ಮುಖ್ಯ. ಒಮ್ಮೆ ಏರುಪೇರಾದಲ್ಲಿ ಉತ್ಸಾಹ ಕಡಿಮೆಯಾಗುತ್ತದೆ. ಮನುಷ್ಯ ಇರುವಷ್ಟು ದಿನ ಆರೋಗ್ಯ ಉತ್ತಮವಾಗಿಟ್ಟುಕೊಳ್ಳಬೇಕು. ನಮ್ಮ ಜೀವನ ಶೈಲಿ, ದಿನನಿತ್ಯದ ಚಟುವಟಿಕೆಗಳು, ಆಹಾರದಲ್ಲಿನ ರೀತಿ ನೀತಿಗಳು ಉತ್ತಮ ಆರೋಗ್ಯಕ್ಕೆ ಸಹಕಾರಿಯಾಗುತ್ತವೆ. ಜೀವನದಲ್ಲಿ ಶಿಸ್ತು ಅಳವಡಿಸಿಕೊಂಡು ಆಹಾರ ಕ್ರಮದಲ್ಲಿ ನಿಯಮಿತವಾಗಿದ್ದರೆ ರೋಗ ತಡೆಗಟ್ಟಬಹುದು. ರೋಗಗಳಲ್ಲಿ 2 ವಿಧ. ಅನುವಂಶಿಕ ರೋಗಗಳು, ನಾವೇ ಬರಿಸಿಕೊಳ್ಳುವ ರೋಗಗಳು. ಅನುವಂಶಿಕ ರೋಗ ಗಳನ್ನು ಔಷಧದಿಂದ ಗುಣಪಡಿಸಿಕೊಳ್ಳಬಹುದು. ಕೆಲವೊಮ್ಮೆ ಜೀವನ ಶೈಲಿಯಿಂದ ತಾವೇ ರೋಗ ಬರಮಾಡಿಕೊಳ್ಳುತ್ತಾರೆ. ಇದರಿಂದ ಎಚ್ಚರಿಕೆ ವಹಿಸಬೇಕು ಎಂದು ಸಲಹೆ ನೀಡಿದರು.

ಮನುಷ್ಯ 40 ವರ್ಷವಾದ ನಂತರ ಕಾಯಿಲೆ ಇಲ್ಲದಿದ್ದರೂ ಸಹ ವರ್ಷಕ್ಕೊಮ್ಮೆ ಆರೋಗ್ಯ ತಪಾಸಣೆಗೆ ಒಳಗಾಗಬೇಕು. ಇದರಿಂದ ನಮಗೆ ರೋಗ ಇಲ್ಲ ಎಂಬುದು ಖಾತ್ರಿಯಾಗುವ ಜೊತೆಗೆ ಆತ್ಮವಿಶ್ವಾಸ ಮೂಡಲಿದೆ. ಕ್ಯಾನ್ಸರ್ ನಂತಹ ಕಾಯಿಲೆಯನ್ನು ಪ್ರಾರಂಭದಲ್ಲೇ ಪತ್ತೆ ಹಚ್ಚಿದಲ್ಲಿ ಅದನ್ನು ಗುಣಪಡಿಸಲು ಅವಕಾಶವಾಗುತ್ತದೆ. ಆರೋಗ್ಯ ತಪಾಸಣೆ ಸಂದರ್ಭ ಕಿದ್ವಾಯಿ ಸಂಸ್ಥೆ ಮೊಬೈಲ್ ಕ್ಯಾನ್ಸರ್ ತಪಾಸಣೆ ವಾಹನ ಕಳುಹಿಸುತ್ತಾರೆ. ವೈದ್ಯರು ಎಲ್ಲಿ ಕ್ಯಾನ್ಸರ್ ಇದೆ ಎಂದು ಹೇಳುವರು, ಜನರು ಅಕ್ಕ–ಪಕ್ಕದವರು ಏನು ಅಂದುಕೊಳ್ಳುತ್ತಾರೋ ಎಂಬ ಭಯದಿಂದ ಕ್ಯಾನ್ಸರ್ ವಾಹನದ ಕಡೆ ಹೋಗಲು ಹಿಂಜರಿಯುತ್ತಾರೆ. ಹೀಗಾಗಿ ಭಯ, ಮುಜುಗರ ಬಿಟ್ಟು ತಪಾಸಣೆಗೆ ಒಳಗಾಗಬೇಕು. ಮನುಷ್ಯ ಎಂದ ಮೇಲೆ ಆರೋಗ್ಯ, ಅನಾರೋಗ್ಯ 2 ಜೊತೆಯಲ್ಲಿಯೇ ಬರುತ್ತವೆ. ಆದ್ದರಿಂದ ಇಂತಹ ಉಚಿತ ಆರೋಗ್ಯ ತಪಾಸಣೆ ಶಿಬಿರಗಳನ್ನು ಸದ್ಬಳಕೆ ಮಾಡಿಕೊಂಡು ಕಾಲಕಾಲಕ್ಕೆ ತಪಾಸಣೆಗೆ ಒಳಗಾಗಿ ನಮ್ಮ ಆರೋಗ್ಯ ಕಾಪಾಡಿಕೊಳ್ಳಬೇಕು ಎಂದು ಕರೆ ನೀಡಿದರು.

ಸಮಾರಂಭದಲ್ಲಿ ತಹಸೀಲ್ದಾರ್ ಶಿವಕುಮಾರ್ ಕಾಸ್ನೂರು, ಸಮಾಜ ಸೇವಕ ಯು.ಎನ್.ಪದ್ಮನಾಭರಾವ್, ಜಿಪಂ ಮಾಜಿ ಸದಸ್ಯ ಎಸ್.ಎಂ. ಕೆಂಪಣ್ಣ, ಮುಖಂಡರಾದ ಕುಂಬ್ರಳ್ಳಿ ಸುಬ್ಬಣ್ಣ, ರೋಟರಿ ಸಂಸ್ಥೆಯ ಅಧ್ಯಕ್ಷ ರಮೇಶ್, ಪ್ರಕಾಶ್‌ಚಂದ್‌ಜೈನ್, ರೋಟರಿ ಕೆ.ಜಿ.ರಾಮಚಂದ್ರು, ಕೆ.ವಿ. ಸುರೇಂದ್ರ, ಜೆಎಸ್.ಎಸ್. ಮಲ್ಲಿಕಾರ್ಜುನಪ್ಪ, ಡಿವೈಎಸ್ಪಿ ಎಸ್.ರಘು, ಡಾ.ಶ್ರೀಕಾಂತ್, ಡಾ. ಧರ್ಮರಾಜ್, ಆರ್.ವಿ.ಮಹದೇವಸ್ವಾಮಿ, ವಕೀಲ ನಂಜುಂಡಸ್ವಾಮಿ, ರೇಣುಕಾ ಪ್ರಸಾದ್, ಬಾಬುಲಾಲ್, ಅರವಿಂದ್, ದಿನೇಶ್, ರವಿ, ಪ್ರಸಾದ್, ಸೇರಿದಂತೆ ಹಲವಾರು ಪ್ರಮುಖರು ಇದ್ದರು.

600ಕ್ಕೂ ಹೆಚ್ಚು ಮಂದಿಗೆ ಆರೋಗ್ಯ ತಪಾಸಣೆ

ಶಿಬಿರದಲ್ಲಿ ಸುಮಾರು 600ಕ್ಕೂ ಹೆಚ್ಚು ಜನರು ಆರೋಗ್ಯ ತಪಾಸಣೆಗೆ ಒಳಗಾದರು. ಶಿಬಿರದಲ್ಲಿ ಸಾಮಾನ್ಯ ಕಾಯಿಲೆಗಳಿಗೆ ಸಲಹೆ, ರಕ್ತದೊತ್ತಡ ಮತ್ತು ಮಧುಮೇಹ, ಶಸ್ತ್ರಚಿಕಿತ್ಸೆ, ಸ್ತ್ರೀರೋಗ ತಪಾಸಣೆ, ಮಕ್ಕಳ ರೋಗಗಳು, ಹೃದಯಕ್ಕೆ ಸಂಬಂಧಿಸಿದ ಸಮಸ್ಯೆಗಳು, ಕಿವಿ, ಮೂಗು ಮತ್ತು ಗಂಟಲು, ಕಣ್ಣಿನ ತೊಂದರೆಗಳು, ವಾತಪಿತ್ತ(ಗ್ಯಾಸ್ಟಿಕ್), ಮೂಳೆಗೆ ಮತ್ತು ಚರ್ಮದ ಕಾಯಿಲೆ, ಮೂತ್ರ, ಜಠರ, ದಂತ ರೋಗಗಳಿಗೆ ಸಂಬಂಧಿಸಿದ ಸಮಸ್ಯೆಗಳಿಗೆ ನುರಿತ ವೈದ್ಯರುಗಳು ತಪಾಸಣೆ ನಡೆಸಿ ಪರಿಹಾರ ನೀಡಿದರು. ತಪಾಸಣೆಗೆ ಒಳಗಾದ ರೋಗಿಗಳಿಗೆ ರೋಟರಿ ನಂಜನಗೂಡು ಮತ್ತು ಔಷಧ ಮಾರಾಟಗಾರ ಸಂಘದಿಂದ ಉಚಿತವಾಗಿ 15 ಸಾವಿರ ಮೌಲ್ಯದ ಔಷಧಗಳನ್ನು ವಿತರಿಸಲಾಯಿತು.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ ಚಿತ್ರಮಂದಿರ	**(ದೂ: 2521923)**
ಭಜೆ ವಾಯುವೇಗಂ (ತೆ)	2 ಪ್ರದರ್ಶನಗಳು
ಘಜಿನಿ (ತ)	2 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	**(ದೂ: 2422871)**
ವೆಪನ್ (ತ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	**(ದೂ: 2497199)**
ಕ್ರೂ (ಹಿಂ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	**(ಮೊ:9900820093)**
ಡೆವಿಲ್ ಹಂಟರ್ (ತ)	4 ಪ್ರದರ್ಶನಗಳು
ಗಾಯಿತ್ರಿ	
ಜಡ್ಜ್‌ಮೆಂಟ್ (ಕ)	4 ಪ್ರದರ್ಶನಗಳು
ರಾಜಕಮಲ್	
ಇಂಡಿಯನ್ 1 (ತ)	4 ಪ್ರದರ್ಶನಗಳು
ಸಂಗಂ	
ಗರುಡನ್ (ತ)	4 ಪ್ರದರ್ಶನಗಳು
ಲಿಡೋ	
ರಾಬರ್ಟ್ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
ಘಜಿನಿ (ತ)	4 ಪ್ರದರ್ಶನಗಳು
ಪ್ರಭಾ	
ಎ (ಕ)	2 ಪ್ರದರ್ಶನಗಳು
ಡೆವಿಲ್ ಹಂಟರ್ (ತ)	2 ಪ್ರದರ್ಶನಗಳು

DRC CINEMAS ಡಿಆರ್‌ಸಿ ಸಿನಿಮಾಸ್
ದೂ : 4240422/4241800

ಸ್ಕ್ರೀನ್ 1	ಬ್ಯಾಡ್ ಬಾಯ್ಸ್ ರೈಡ್ or ಡೈ (ಇ): ಬೆ.11.15ಕ್ಕೆ, ಮ.1.40ಕ್ಕೆ, ರಾ.7.25ಕ್ಕೆ, ರಾ.9.55ಕ್ಕೆ, ಘಜಿನಿ (ತ): ಸಂ.4ಕ್ಕೆ
ಸ್ಕ್ರೀನ್ 2	ಯಂಗ್‌ಮ್ಯಾನ್ (ಕ): ಬೆ.10.40ಕ್ಕೆ, ವೆಪನ್ (ತ): ಮ.1.50ಕ್ಕೆ, ಗರುಡನ್ (ತ): ಸಂ.4.20ಕ್ಕೆ, ಮಿಸ್ಟರ್ ಅಂಡ್ ಮಿಸಸ್ ಮಹಿ (ಹಿಂ): ರಾ.7.05ಕ್ಕೆ, ರಾ.9.50ಕ್ಕೆ.
ಸ್ಕ್ರೀನ್ 3	ದಿ ಜಡ್ಜ್‌ಮೆಂಟ್ (ಕ): ಬೆ.10.40ಕ್ಕೆ, ಕಂಡೋರ್ ಮನೆ ಕಥೆ (ಕ): ಮ.1.45ಕ್ಕೆ, ಸಹರ (ಕ): ಸಂ.4.10ಕ್ಕೆ, ಸತ್ಯಭಾಮ (ತೆ): ರಾ.7.10ಕ್ಕೆ, ಗೋಲಂ (ಮ): ರಾ.9.55ಕ್ಕೆ.
ಸ್ಕ್ರೀನ್ 4	ಮುಂಜ್ಯಾ (ಹಿಂ): ಬೆ.10.30ಕ್ಕೆ, ರಾ.10.05ಕ್ಕೆ, ಇಂಡಿಯನ್ (ತ): ಸಂ.4.05ಕ್ಕೆ, ರಾ.7.05ಕ್ಕೆ, ಮನಮೆ (ತೆ): ಸಂ.4.05ಕ್ಕೆ, ರಾ.9.50ಕ್ಕೆ

INOX LIVE THE MOVIE ಐನಾಕ್ಸ್ ಮೂವೀಸ್
ದೂ : 2533444 / 2433456

ಸ್ಕ್ರೀನ್ 1	ಮುಂಜ್ಯಾ (ಇಂ): ಬೆ.11ಕ್ಕೆ, ಮ.1.45ಕ್ಕೆ, ಸಂ.4.30ಕ್ಕೆ, ರಾ.7.15ಕ್ಕೆ, ರಾ.10ಕ್ಕೆ.
ಸ್ಕ್ರೀನ್ 2	ಬ್ಯಾಡ್ ಬಾಯ್ಸ್ ರೈಡ್ or ಡೈ (ಇ): ಬೆ.11.50ಕ್ಕೆ, ಮ.2.30ಕ್ಕೆ, ಸಂ.5.10ಕ್ಕೆ, ರಾ.7.50ಕ್ಕೆ, ರಾ.10.30ಕ್ಕೆ.
ಸ್ಕ್ರೀನ್ 3	ಮನಮೆ (ತೆ): ಮ.12.45ಕ್ಕೆ, ರಾ.7ಕ್ಕೆ, ಮಿಸ್ಟರ್ ಅಂಡ್ ಮಿಸಸ್ ಮಹಿ (ಹಿಂ): ಸಂ.4ಕ್ಕೆ, ರಾ.10.15ಕ್ಕೆ.
ಸ್ಕ್ರೀನ್ 4	ರಾಬರ್ಟ್ (ಕ): ಮ.3.10ಕ್ಕೆ, ಸಹರಾ (ಕ): ಸಂ.6.35ಕ್ಕೆ, ಗರುಡನ್ (ತ): ರಾ.9.30ಕ್ಕೆ.

MVC ಮೈಸೂರು ವಿಷನ್ ಸಿನಿಮಾ
ದೂ : 0821–2973519

ಸ್ಕ್ರೀನ್ 1	ಅರನ್‌ಮನೈ 4 (ತ): ಮ.1.30ಕ್ಕೆ, ರಾ.7.30ಕ್ಕೆ, ಸಹರ (ಕ): ಸಂ.4.30ಕ್ಕೆ.
ಸ್ಕ್ರೀನ್ 2	ಅನರ್ಥ (ಕ): ಸಂ.4.15ಕ್ಕೆ
ಸ್ಕ್ರೀನ್ 3	ಕಂಡೋರ್ ಮನೆ ಕಥೆ (ಕ): ಮ.1.30ಕ್ಕೆ
ಸ್ಕ್ರೀನ್ 4	

PVR CINEMAS ಪಿವಿಆರ್ ಸಿನಿಮಾಸ್
ನೆಕ್ಸಸ್ ಸೆಂಟರ್‌ಸಿಟಿ ಮಾಲ್,
2ನೇ ಮಹಡಿ, ಮೊ.ನಂ: 8951357139

ಕಿಂಗ್‌ಡಮ್ ಆಫ್ ದಿ ಪ್ಲಾನೆಟ್ ಆಫ್ ದಿ ಎಪಿಸ್ (ಇಂ): ಬೆ.10ಕ್ಕೆ, ಮ.1.05ಕ್ಕೆ, ಸಂ.4.10ಕ್ಕೆ, ರಾ.7.20ಕ್ಕೆ, ರಾ.10.30ಕ್ಕೆ, ಶ್ರೀಕಾಂತ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4.25ಕ್ಕೆ, ರಾ.7ಕ್ಕೆ, ರಾ.10.15ಕ್ಕೆ, ಸ್ಟಾರ್ (ತ): ಬೆ.11.45ಕ್ಕೆ, ಮ.3.05ಕ್ಕೆ, ಸಂ.6.25ಕ್ಕೆ, ರಾ.9.45ಕ್ಕೆ, ಅರಮನೈ 4 (ತ): ಮ.12.30ಕ್ಕೆ, ಪ್ರತಿನಿಧಿ 2 (ತೆ): ಮ.12.55ಕ್ಕೆ, ರಾ.9.15ಕ್ಕೆ, ರಾಮನ ಅವತಾರ (ಕ): ಮ.3.40ಕ್ಕೆ, ಅಂಜನೀಪುತ್ರ (ಕ): ಸಂ.4ಕ್ಕೆ, ಗ್ರೇ ಗೇಮ್ಸ್ (ಕ): ಸಂ.6.35ಕ್ಕೆ, ಕೃಷ್ಣಮ್ಮ (ತೆ): ರಾ.7.25ಕ್ಕೆ, ಮಾರಿವಿಲ್ಲಿನ್ ಗೋಪುರಂಗಲ್ (ಮ): ರಾ.10ಕ್ಕೆ.

ಗರುಡ ಮಾಲ್,
1ನೇ ಮಹಡಿ, ಮೊ.ನಂ: 9901373210

ಶ್ರೀಕಾಂತ್ (ಹಿಂ): ಬೆ.10ಕ್ಕೆ, ಮ.1.15ಕ್ಕೆ, ಮ.3.40ಕ್ಕೆ, ರಾ.7.15ಕ್ಕೆ, ರಾ.10ಕ್ಕೆ, ಕಿಂಗ್‌ಡಮ್ ಆಫ್ ದಿ ಪ್ಲಾನೆಟ್ ಆಫ್ ದಿ ಎಪಿಸ್ (ಇಂ): ಬೆ.10.05ಕ್ಕೆ, ಮ.12ಕ್ಕೆ, ಮ.3.10ಕ್ಕೆ, ಸಂ.6.20ಕ್ಕೆ, ರಾ.9.30ಕ್ಕೆ, ಸ್ಟಾರ್ (ತ): ಮ.1ಕ್ಕೆ, ರಾ.7.10ಕ್ಕೆ, ರಾ.10.30ಕ್ಕೆ, 4N6 (ಕ): ಮ.1.05ಕ್ಕೆ, ಅಂಜನೀಪುತ್ರ (ಕ): ಸಂ.4.15ಕ್ಕೆ, ಕೃಷ್ಣಮ್ಮ (ತೆ): ಸಂ.4.20ಕ್ಕೆ, ರಾ.10.15ಕ್ಕೆ, ಪವರ್ (ಕ): ಸಂ.6.40ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಜ್ಞಾನಧಾರ ಕಾಲೇಜಲ್ಲಿ ವಿದ್ಯಾರ್ಥಿಗಳಿಗೆ ಬೀಳ್ಕೊಡುಗೆ



ಹುಣಸೂರು, ಜೂ.7– ವಿದ್ಯಾರ್ಥಿಗಳು ಕಲಿಕೆ ಜೊತೆಗೆ ತಂದೆ, ತಾಯಿ ಪರಿಶ್ರಮ ಮತ್ತು ಗುರುಗಳು ನೀಡುವ ಜ್ಞಾನ ತಿಳಿದರೆ ಮಾತ್ರ ಗುರಿ ಮುಟ್ಟಲು ಸಾಧ್ಯ ಎಂದು ಮಾಜಿ ಶಾಸಕ ಹೆಚ್.ಪಿ.ಮಂಜುನಾಥ್ ವಿದ್ಯಾರ್ಥಿಗಳಿಗೆ ಕಿವಿಮಾತು ಹೇಳಿದರು.

ನಗರದ ಜ್ಞಾನಧಾರ ಪ್ರಥಮ ದರ್ಜೆ ಕಾಲೇಜಿನಲ್ಲಿ ನಡೆದ ವಿದ್ಯಾರ್ಥಿಗಳ ಬೀಳ್ಕೊಡುಗೆ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ನಿಮ್ಮನ್ನು ಯಾರೂ ತಿದ್ದಲು ಸಾಧ್ಯವಿಲ್ಲ. ನಿಮ್ಮನ್ನು ನೀವೇ ತಿದ್ದಿಕೊಳ್ಳಬೇಕು. ನೀವು ಯಾವುದೇ ಉನ್ನತ ಹುದ್ದೆ ಅಥವಾ ಗುರಿ ಮುಟ್ಟಬೇಕಾದರೆ ನಿಮಗಾಗಿ ಶ್ರಮಿಸಿದವರ ಬಗ್ಗೆ ಗೌರವ ಇರಬೇಕೆಂದರು.


ತಾಲೂಕಿನ ಜನತೆ ನನ್ನನ್ನು 3 ಬಾರಿ ಶಾಸಕನಾಗಿ ಆಯ್ಕೆ ಮಾಡಿದ್ದು, ತಾಲೂಕಿನ ಸರ್ವಾಂಗೀಣ ಅಭಿವೃದ್ಧಿಗೆ ಒತ್ತು ನೀಡಿದ್ದೇನೆ. ಅದರಲ್ಲೂ ಶಿಕ್ಷಣಕ್ಕೆ ಹೆಚ್ಚು ಆದ್ಯತೆ ನೀಡಿ ದೇವರಾಜ ಅರಸು ಕಾಲೇಜು ಸಮಗ್ರ ಅಭಿವೃದ್ಧಿ, ಹನಗೋಡು ಡಿಗ್ರಿ ಕಾಲೇಜಿಗೆ ನಿವೇಶನ ಕೊಡಿಸಿದ್ದು, 400ಕ್ಕೂ ಹೆಚ್ಚು ವಿದ್ಯಾರ್ಥಿಗಳು ಡಿಗ್ರಿ ಮುಗಿಸಿದ್ದಾರೆ. ಯುವಕರಿಗೆ ಉದ್ಯೋಗ ಸೃಷ್ಟಿಗೆ ಜಿಟಿಟಿಸಿ ರಾಜ್ಯದಲ್ಲೇ ಪ್ರಥಮವಾಗಿ ತಂದಿದ್ದೇನೆ. ಆದರೆ ಜನತೆಗೆ ಅದರ ಅರಿವಿಲ್ಲ ಎಂದು ಬೇಸರ ವ್ಯಕ್ತಪಡಿಸಿದರು.

ವಿದ್ಯಾರ್ಥಿಗಳು ಮೊಬೈಲ್, ಫೇಸ್ ಬುಕ್, ವಾಟ್ಸಪ್ ಬಿಟ್ಟು ಪುಸ್ತಕ, ದಿನ ಪತ್ರಿಕೆಗಳನ್ನು ಓದುವುದರಿಂದ ಜ್ಞಾನ ವೃದ್ಧಿಯಾಗಲಿದೆ. ಮೊಬೈಲ್ ಭಾರತದ ಬಲವನ್ನು ಕುಗ್ಗಿಸುತ್ತಿದೆ. ಆದ್ದರಿಂದ ನೀವು ಕ್ರೀಡೆಗೆ ಒತ್ತು ನೀಡಿದರೆ ನಿಮ್ಮ ಭವಿಷ್ಯ ಪ್ರಜ್ವಲವಾಗಲಿದೆ ಎಂದು ಸಲಹೆ ನೀಡಿದರು.

ಕಾರ್ಯಕ್ರಮದಲ್ಲಿ ಗಾವಡಗೆರೆ ಜಂಗಮ ಮಠದ ಶ್ರೀನಟರಾಜ ಸ್ವಾಮೀಜಿ ಆಶೀರ್ವಚನ ನೀಡಿದರು. ಅಧ್ಯಕ್ಷತೆಯನ್ನು ಯಮುನಾ ವಹಿಸಿದ್ದರು. ವ್ಯವಸ್ಥಾಪಕ ಡಾ.ಜೆ.ಸಿ.ನಾಗೇಂದ್ರ, ಬೆಟ್ಟದಪುರ ಪಿಯು ಕಾಲೇಜು ಪ್ರಾಂಶುಪಾಲ ಸತೀಶ್, ಸಂಸ್ಥೆಯ ಪರಶಿವ, ಜ್ಞಾನಧಾರ ಕಾಲೇಜಿನ ಪ್ರಾಂಶುಪಾಲ ಕಾರ್ತಿಕ್ ಇದ್ದರು. ಇದೇ ಸಂದರ್ಭ ಸಾಧನೆಗೈದ ವಿದ್ಯಾರ್ಥಿಗಳನ್ನು ಸನ್ಮಾನಿಸಲಾಯಿತು.

ವರುಣ ಕ್ಷೇತ್ರದ ಮತದಾರರ ಋಣ ತೀರಿಸುತ್ತೇನೆ

ನೂತನ ವಿಧಾನ ಪರಿಷತ್ ಸದಸ್ಯ ಡಾ.ಯತೀಂದ್ರ


ನೂತನ ಎಂಎಲ್‌ಸಿ ಡಾ.ಯತೀಂದ್ರ ಅವರನ್ನು ಕೈ ಮುಖಂಡರು ಸನ್ಮಾನಿಸಿದರು.

ತಿ.ನರಸೀಪುರ, ಜೂ.7– ವರುಣವನ್ನು ಮಾದರಿ ಕ್ಷೇತ್ರ ಮಾಡುವ ಮೂಲಕ ಮತದಾರರ ಋಣ ತೀರಿಸುತ್ತೇನೆ ಎಂದು ನೂತನ ವಿಧಾನ ಪರಿಷತ್ ಸದಸ್ಯ ಡಾ. ಯತೀಂದ್ರ ಸಿದ್ದರಾಮಯ್ಯ ತಿಳಿಸಿದರು.

ವರುಣ ವಿಧಾನಸಭಾ ಕ್ಷೇತ್ರದ ಹಿರಿಯ ಕಾಂಗ್ರೆಸ್ ಮುಖಂಡರಿಂದ ಅಭಿನಂದನೆ ಸ್ವೀಕರಿಸಿ ಮಾತನಾಡಿದ ಅವರು, ವರುಣ ಕ್ಷೇತ್ರದ ಮತದಾರರು ನಮ್ಮ ತಂದೆ ಸಿದ್ದರಾಮಯ್ಯ ಅವರನ್ನು 3 ಬಾರಿ ಆಯ್ಕೆ ಮಾಡಿದ್ದೀರಿ. ನನಗೊಂದು ಬಾರಿ ಅವಕಾಶ ನೀಡಿದ್ದೀರಿ. ಅಲ್ಲದೇ ಸಿದ್ದರಾಮಯ್ಯನವರು 2 ಬಾರಿ ರಾಜ್ಯದ ಮುಖ್ಯಮಂತ್ರಿಯಾಗಲು ತಮ್ಮ ಆಶೀರ್ವಾದವೇ ಕಾರಣ. ಈ ಬಾರಿ ತೀವ್ರ ಪೈಪೋಟಿ ಇದ್ದರೂ ಹೆಚ್ಚು ಮತಗಳಿಂದ ನನ್ನ ತಂದೆಯವರಿಗೆ ಅವಕಾಶ ಮಾಡಿಕೊಟ್ಟಿದ್ದೀರಿ. ಇದಕ್ಕಾಗಿ ತಮಗೆ ನಾನು ಕೃತಜ್ಞತೆ ಸಲ್ಲಿಸುತ್ತೇನೆ ಎಂದ ಅವರು ನನ್ನ ಸೇವೆ ಗುರ್ತಿಸಿ ಸರ್ಕಾರ ವಿಧಾನ ಪರಿಷತ್‌ಗೆ ಆಯ್ಕೆ ಮಾಡಿದೆ. ಹೀಗಾಗಿ ಕ್ಷೇತ್ರ ಪ್ರವಾಸ ಮಾಡಿ ಹಂತ ಹಂತವಾಗಿ ಅನುದಾನ ತಂದು ಕ್ಷೇತ್ರದ ಅಭಿವೃದ್ಧಿಗೆ ಶ್ರಮಿಸುವ ಮೂಲಕ ಮತದಾರರ ಋಣ ತೀರಿಸುತ್ತೇನೆ ಎಂದರು.

ವರುಣ ಕ್ಷೇತ್ರದಲ್ಲಿ ಆಗಬೇಕಿರುವ ಕೆಲಸಗಳ ಬಗ್ಗೆ ನನಗೆ ಗೊತ್ತಿದೆ. ಆದರೂ ನಾನು ನಿರಂತರವಾಗಿ ಗ್ರಾಮಗಳಿಗೆ ಭೇಟಿ ನೀಡಿ ಕ್ಷೇತ್ರದ ಮತದಾರರಿಂದ ಅಹವಾಲು ಸ್ವೀಕರಿಸಿ ಆಗಬೇಕಿರುವ ಕೆಲಸ ಕಾರ್ಯಗಳ ಬಗ್ಗೆ ಪಟ್ಟಿ ತಯಾರಿಸಿ ಸರ್ಕಾರದಿಂದ ಅನುದಾನ ತಂದು ಆದ್ಯತೆ ಮೇರೆಗೆ ಕಾಮಗಾರಿ ನಡೆಸಲು ಕ್ರಮ ವಹಿಸುವುದಾಗಿ ಭರವಸೆ ನೀಡಿದರು.

ಈ ವೇಳೆ ಎಪಿಎಂಸಿ ಮಾಜಿ ಅಧ್ಯಕ್ಷ ಮಾದೇಗೌಡನಹುಂಡಿ ಎನ್.ಅನಿಲ್ ಕುಮಾರ್, ಮಾಜಿ ಜಿಪಂ ಸದಸ್ಯ ಕೆಂಪಯ್ಯನಹುಂಡಿ ಕೆ.ಮಹದೇವ್, ತಾಲೂಕು ಕುರುಬರ ಸಂಘದ ಮಾಜಿ ಅಧ್ಯಕ್ಷ ತುಂಬಲ ಪ್ರಶಾಂತ್ ಬಾಬು, ಪುರಸಭಾ ಮಾಜಿ ಅಧ್ಯಕ್ಷ ಎನ್.ಸೋಮು, ಮುಖಂಡ ಸುರೇಶ್ ಮತ್ತಿತರರಿದ್ದರು.

ಮುಸ್ಕೆರೆ ಹಾಡಿಯಲ್ಲಿ ಸೀಮಂತ ಕಾರ್ಯಕ್ರಮ


ಮುಸ್ಕೆರೆ ಹಾಡಿಯಲ್ಲಿ ಸೀಮಂತ ಕಾರ್ಯಕ್ರಮ ನಡೆಯಿತು.

ಹೆಚ್.ಡಿ.ಕೋಟೆ, ಜೂ.7– ಗರ್ಭಿಣಿಯರು ಹಸಿರು ತರಕಾರಿ, ಸೊಪ್ಪುಗಳನ್ನು ಸೇವಿಸುವ ಮೂಲಕ ಆರೋಗ್ಯವಂತ ಮಗುವಿಗೆ ಜನ್ಮ ನೀಡುವಂತೆ ಪಿಹೆಚ್‌ಸಿ ಭಾಗೀರಥಿ ತಿಳಿಸಿದರು.

ತಾಲೂಕಿನ ಮುಸ್ಕೆರೆ ಹಾಡಿಯಲ್ಲಿ ಸ್ವಾಮಿ ವಿವೇಕಾನಂದ ಯೂತ್ ಮೂವ್‌ಮೆಂಟ್ ಸರಗೂರು, ಆಶ್ರಯ ಹಸ್ತ ಟ್ರಸ್ಟ್ ಮತ್ತು ಅಣ್ಣೂರು ಪ್ರಾಥಮಿಕ ಆರೋಗ್ಯ ಕೇಂದ್ರ ಹಾಗೂ ಶಿಶು ಅಭಿವೃದ್ಧಿ ಯೋಜನೆ ಸಂಯುಕ್ತಾಶ್ರಯದಲ್ಲಿ ಆಯೋಜಿಸಿದ್ದ ಸೀಮಂತ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ತಾಯಂದಿರು ಗರ್ಭಿಣಿ ಸಂದರ್ಭದಲ್ಲಿ ಸಂತೋಷವಾಗಿದ್ದರೆ ಆರೋಗ್ಯವಂತ ಮಗುವಿಗೆ ಜನ್ಮ ನೀಡ ಬಹುದು ಎಂಬ ಉದ್ದೇಶದಿಂದ ಸೀಮಂತ ಕಾರ್ಯಕ್ರಮ ಆಯೋಜಿಸಲಾಗಿದೆ ಎಂದರು.

ಗರ್ಭಿಣಿಯರು ಹೆಚ್ಚಾಗಿ ಸೊಪ್ಪು, ತರಕಾರಿ, ಹಣ್ಣುಗಳನ್ನು ಸೇವಿಸುವುದರಿಂದ ತಾಯಿ ಮತ್ತು ಮಗುವಿನ ಆರೋಗ್ಯ ಚೆನ್ನಾಗಿರುತ್ತದೆ. ಜೊತೆಗೆ ಪ್ರತಿಯೊಬ್ಬರೂ ಸರ್ಕಾರಿ ಆಸ್ಪತ್ರೆಯಲ್ಲಿ ಹೆರಿಗೆ ಮಾಡಿಸಿಕೊಳ್ಳುವ ಮೂಲಕ ಸರ್ಕಾರದ ಸೌಲಭ್ಯಗಳನ್ನು ಪಡೆದುಕೊಳ್ಳಿ ಎಂದರು.

ಅಂಗನವಾಡಿ ಕಾರ್ಯಕರ್ತೆಯರು ಗರ್ಭಿಣಿಯರಿಗೆ ಮಾತೃಪೂರ್ಣ ಯೋಜನೆಯಡಿ ಪೌಷ್ಟಿಕ ಆಹಾರ ನೀಡುತ್ತಿದ್ದು ಎಲ್ಲರೂ ಅಂಗನವಾಡಿ ಕೇಂದ್ರಕ್ಕೆ ಬಂದು ಊಟ ಮಾಡಬೇಕು. ಮಾತೃ ವಂದನಾ ಕಾರ್ಯದ ಮೂಲಕ ಸರ್ಕಾರದಿಂದ ಮೊದಲನೇ ಮಗುವಿಗೆ 5 ಸಾವಿರ ಹಾಗೂ ಎರಡನೇ ಹೆಣ್ಣು ಮಗುವಿಗೆ 6 ಸಾವಿರ ರೂ. ನೀಡುತ್ತಿದ್ದು ಅದನ್ನು ಪಡೆದುಕೊಳ್ಳಬೇಕು ಎಂದರು.

ಕಾರ್ಯಕ್ರಮದಲ್ಲಿ 7 ಗರ್ಭಿಣಿಯರಿಗೆ ಸೀರೆ, ಹೂ, ಬಳೆ, ತಾಂಬೂಲ ನೀಡಿ ಸೀಮಂತ ಮಾಡಲಾಯಿತು. ಈ ವೇಳೆ ಭೀಮನಹಳ್ಳಿ ಗ್ರಾಪಂ ಅಧ್ಯಕ್ಷೆ ಭಾಗ್ಯ, ಅಣ್ಣೂರು ಪ್ರಾಥಮಿಕ ಆರೋಗ್ಯ ಕೇಂದ್ರದ ಸಿಹೆಚ್‌ಓ ವೀರೇಶ್, ಆಶಾ ಮೇಲ್ವಿಚಾರಕರಾದ ಜಯಮ್ಮ, ಆಶಾ ಕಾರ್ಯಕರ್ತೆ ರೇಣುಕಾ, ಎಸ್.ವಿ.ವೈ.ಎಂ ಸಂಯೋಜಕ ಶಿವಲಿಂಗ, ಆರೋಗ್ಯ ಕಾರ್ಯಕರ್ತೆಯರಾದ ಸಿದ್ದಲಿಂಗ ನಾಯಕ, ಪುನೀತ್ ರಾಜ್, ಹಾಡಿಯ ಗರ್ಭಿಣಿಯರು, ಮಹಿಳೆಯರು ಭಾಗವಹಿಸಿದ್ದರು.

ಬಡವರ ಏಳಿಗೆಗೆ ಕಾಂಗ್ರೆಸ್ ಸಿದ್ಧ: ಸುನೀಲ್ ಬೋಸ್



ತಿ.ನರಸೀಪುರ, ಜೂ.7– ಬಡವರ ಏಳಿಗೆಗೆ ಕಾಂಗ್ರೆಸ್ ಸದಾ ಸಿದ್ಧ ಎಂದು ನೂತನ ಸಂಸದ ಸುನೀಲ್ ಬೋಸ್ ತಿಳಿಸಿದರು.

ಪುರಸಭಾ ಸದಸ್ಯ ತುಂಬಲ ಪ್ರಕಾಶ್ ನೇತೃತ್ವದಲ್ಲಿ ಕಾಂಗ್ರೆಸ್ ಮುಖಂಡರಿಂದ ಅಭಿನಂದನೆ ಸ್ವೀಕರಿಸಿ ಮಾತನಾಡಿದ ಅವರು, ಕಾಂಗ್ರೆಸ್ ಹೊರತುಪಡಿಸಿ ಬೇರೆ ಯಾವುದೇ ಪಕ್ಷ ನಿಮಗೆ ಸಹಾಯ ಮಾಡಲು ಸಾಧ್ಯವಿಲ್ಲ. ಕಾಂಗ್ರೆಸ್‌ನಿಂದ ಮಾತ್ರ ಕ್ಷೇತ್ರದ ಸಮಗ್ರ ಅಭಿವೃದ್ಧಿ ಸಾಧ್ಯ ಎಂದರು.

ಅಂಬೇಡ್ಕರ್ ಹೇಳಿದಂತೆ ಸಿಎಂ ಸಿದ್ದರಾಮಯ್ಯ, ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಮತ್ತು ಸಮಾಜ ಕಲ್ಯಾಣ ಸಚಿವ ಹೆಚ್.ಸಿ. ಮಹದೇವಪ್ಪ ಹೋರಾಡುತ್ತಾ ಬಂದಿದ್ದು, ಕ್ಷೇತ್ರದ ಯುವಕರು ಒಬ್ಬರ ಮೇಲೊಬ್ಬರು ಅನುಮಾನ ಪಡಬೇಡಿ ಎಂದ ಅವರು ಸಾಮೂಹಿಕ ನಾಯಕತ್ವದಲ್ಲಿ ಕ್ಷೇತ್ರವನ್ನು ಅಭಿವೃದ್ಧಿಪಡಿಸೋಣ. ಈ ಹಿಂದೆ ಸಾವಿರಾರು ಕೋಟಿ ಅನುದಾನ ತಂದು ಕ್ಷೇತ್ರದ ಅಭಿವೃದ್ಧಿಗೆ ಶ್ರಮಿಸಿರುವ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಅವರಿಗೆ ಸಹಕರಿಸುವ ಮೂಲಕ ಕ್ಷೇತ್ರದ ಮತ್ತಷ್ಟು ಅಭಿವೃದ್ಧಿಗೆ ಶ್ರಮಿಸೋಣ ಎಂದರು. ಪುರಸಭಾ ಮಾಜಿ ಅಧ್ಯಕ್ಷ ಎನ್.ಸೋಮು, ಗ್ರಾಪಂ ಮಾಜಿ ಸದಸ್ಯ ಹೇಮಂತ್ ಕುಮಾರ್ ಇದ್ದರು.

ಜೂ.11, ಬಸವ, ರಾಜೇಂದ್ರಶ್ರೀ, ಶಿವಕುಮಾರಶ್ರೀ ಜಯಂತಿ


ಬಸವ ಜಯಂತಿ ಹಿನ್ನೆಲೆಯಲ್ಲಿ ತಿ.ನರಸೀಪುರದಲ್ಲಿ ಪ್ರಚಾರ ರಥಕ್ಕೆ ಚಾಲನೆ ನೀಡಲಾಯಿತು.

ತಿ.ನರಸೀಪುರ, ಜೂ.7– ತಾಲೂಕು ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ ಯುವ ಘಟಕ ಹಾಗೂ ಬಸವ ಬಳಗ ಒಕ್ಕೂಟಗಳ ಸಂಯುಕ್ತಾಶ್ರಯದಲ್ಲಿ ಗ್ರಾಮಾಂತರ ಬಸವ ಜಯಂತಿ ಹಾಗೂ ಶ್ರೀಶಿವರಾತ್ರಿ ರಾಜೇಂದ್ರ ಮಹಾಸ್ವಾಮಿ ಮತ್ತು ಡಾ.ಶಿವಕುಮಾರ ಮಹಾಸ್ವಾಮಿಗಳ ಜಯಂತೋತ್ಸವ ಕಾರ್ಯಕ್ರಮವನ್ನು ಜೂ.11ರಂದು ಪಟ್ಟಣದಲ್ಲಿ ಹಮ್ಮಿಕೊಳ್ಳಲಾಗಿದೆ ಎಂದು ಅಖಿಲ ಭಾರತ ವೀರಶೈವ ಮಹಾಸಭಾ ಅಧ್ಯಕ್ಷ ತೊಟ್ಟವಾಡಿ ಮಹದೇವಸ್ವಾಮಿ ತಿಳಿಸಿದರು.

ಪಟ್ಟಣದ ವಿವೇಕಾನಂದ ನಗರದಲ್ಲಿರುವ ವೀರಶೈವ ವಿದ್ಯಾರ್ಥಿ ನಿಲಯದ ಬಳಿ ಅಖಿಲ ಭಾರತ ವೀರಶೈವ ಮಹಾಸಭಾ ಗೌರವಾಧ್ಯಕ್ಷ ಡಾ.ಸಿದ್ದಲಿಂಗ ಶಿವಾಚಾರ್ಯ ಸ್ವಾಮಿ ಹಾಗೂ ಯುವ ಘಟಕದ ಗೌರವಾಧ್ಯಕ್ಷ ಶ್ರೀಗೌರಿಶಂಕರ ಸ್ವಾಮಿಗಳೊಂದಿಗೆ ಕಾರ್ಯಕ್ರಮದ ಪ್ರಚಾರ ರಥಕ್ಕೆ ಚಾಲನೆ ನೀಡಿ ನಂತರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಬಸವ ಜಯಂತಿ ಅಂಗವಾಗಿ ಅದ್ಧೂರಿ ಮೆರವಣಿಗೆ ಹಮ್ಮಿಕೊಳ್ಳಲಾಗಿದ್ದು, ಬೆಳಗ್ಗೆ 9 ಗಂಟೆಗೆ ತಾಲೂಕಿನ ವಿವಿಧ ಗ್ರಾಮಗಳ ಮುಖಂಡರು, ಸಮಾಜದ ನಿರ್ದೇಶಕರು, ಒಕ್ಕೂಟದ ಪ್ರತಿನಿಧಿಗಳ ನೇತೃತ್ವದಲ್ಲಿ ಶ್ರೀಗುಂಜಾನರಸಿಂಹ ಸ್ವಾಮಿ ದೇವಸ್ಥಾನದಿಂದ ಮೆರವಣಿಗೆ ಆರಂಭಗೊಂಡು ಭಗವಾನ್ ಚಿತ್ರಮಂದಿರ, ಲಿಂಕ್ ರಸ್ತೆ ಹಾಗೂ ಕಾಲೇಜು ರಸ್ತೆ ಮೂಲಕ ಮಹದೇವಪ್ಪ ಸ್ಮಾರಕ ಭವನ ತಲುಪಲಿದೆ. ಬಳಿಕ ಮಧ್ಯಾಹ್ನ 2.30ಕ್ಕೆ ಸುತ್ತೂರು ವೀರಸಿಂಹಾಸನ ಮಠದ ಶ್ರೀಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ದಿವ್ಯ ಸಾನಿಧ್ಯದಲ್ಲಿ ಧಾರ್ಮಿಕ ಸಭೆ ನಡೆಯಲಿದೆ. ಮೆರವಣಿಗೆಯಲ್ಲಿ ವಿವಿಧ ಕಲಾತಂಡಗಳು ಭಾಗವಹಿಸಲಿದ್ದು, ತಾಲೂಕಿನ ಮಹಾಜನತೆ ಮೆರವಣಿಗೆ ಹಾಗೂ ಧಾರ್ಮಿಕ ಕಾರ್ಯಕ್ರಮದಲ್ಲಿ ಭಾಗವಹಿಸಿ ಕಾರ್ಯಕ್ರಮ ಯಶಸ್ವಿಗೊಳಿಸಬೇಕು ಎಂದು ಮನವಿ ಮಾಡಿದರು.

ಇದೇ ಭಾನುವಾರ (ಜೂ.9) ಮೈಸೂರಿನಲ್ಲಿ ಬಸವ ಜಯಂತಿ ಕಾರ್ಯಕ್ರಮ ಅದ್ಧೂರಿಯಾಗಿ ನಡೆಯುತ್ತಿದ್ದು, ಅಲ್ಲಿಯೂ ತಾಲೂಕಿನ ಜನತೆ ಭಾಗವಹಿಸುವಂತೆ ಅವರು ಮನವಿ ಮಾಡಿದರು.

ವಾಟಾಳು ಸೂರ್ಯ ಸಿಂಹಾಸನ ಮಠದ ಮಠಾಧ್ಯಕ್ಷ ಡಾ.ಸಿದ್ದಲಿಂಗಶಿವಾಚಾರ್ಯ ಸ್ವಾಮೀಜಿ ಮಾತನಾಡಿ, ಪಟ್ಟಣದಲ್ಲಿ ವಿಜೃಂಭಣೆಯಿಂದ ಬಸವ ಜಯಂತಿ ನಡೆಸಲು ಸಮಿತಿ ನಿರ್ಧರಿಸಿದ್ದು, ಕಳೆದ ಬಾರಿಗಿಂತಲೂ ಅದ್ಧೂರಿಯಾಗಿ ಆಚರಿಸಲಾಗುತ್ತಿದೆ. ಸಮಿತಿ ಕಳೆದ 5 ವರ್ಷಗಳಿಂದ ಬಸವ ಜಯಂತಿ ಆಚರಣೆ ಮಾಡುತ್ತಾ ಬಂದಿದೆ. ಈ ಬಾರಿ ಮೆರವಣಿಗೆಯಲ್ಲಿ ಡೊಳ್ಳು ಕುಣಿತ, ವೀರಗಾಸೆ, ಜಾನಪದ ನೃತ್ಯ ಸೇರಿದಂತೆ ಇನ್ನಿತರೆ ಕಲಾತಂಡಗಳು ಭಾಗವಹಿಸಲಿವೆ. ಹಾಗಾಗಿ ಗ್ರಾಮೀಣ ಜನತೆ ಸೇರಿದಂತೆ ಸಾರ್ವಜನಿಕರು ಕಾರ್ಯಕ್ರಮದ ಯಶಸ್ಸಿಗೆ ಸಹಕಾರ ನೀಡಬೇಕು ಎಂದು ಮನವಿ ಮಾಡಿದರು.

ಈ ವೇಳೆ ಪ್ರಧಾನ ಕಾರ್ಯದರ್ಶಿ ಪರಶಿವಮೂರ್ತಿ, ಖಜಾಂಚಿ ವಿ.ಎನ್.ಸಂದೇಶ್, ಯುವ ಘಟಕದ ಅಧ್ಯಕ್ಷ ಬಿ.ಎಂ.ವಿಜಯಕುಮಾರ್, ನಿರ್ದೇಶಕರಾದ ಸಿ.ಬಿ.ಹುಂಡಿ ಚಿನ್ನಸ್ವಾಮಿ, ಡೈರಿ ಅಧ್ಯಕ್ಷ ಮಹದೇವಸ್ವಾಮಿ, ಜಿಲ್ಲಾ ಯುವ ಘಟಕ ಕಾರ್ಯದರ್ಶಿ ಆಡಿಟರ್ ಮಂಜು, ಬಸವ ಬಳಗದ ಅಧ್ಯಕ್ಷ ಪರಮೇಶ್ ಪಟೇಲ್, ಸ್ಫಟಿಕ ಸಹಕಾರ ಸಂಘದ ಅಧ್ಯಕ್ಷ ರಾಜೇಶ್ ಪಟೇಲ್, ಕುರುಬೂರು ಶಿವು, ಪುರಸಭಾ ಸದಸ್ಯ ಕಿರಣ್, ಮಾಜಿ ಸದಸ್ಯ ಎನ್. ಲೋಕೇಶ್, ಅಡುಗೆ ಪ್ರಭು, ಕೀರ್ತಿ, ಮಲ್ಲಣ್ಣ ಕುಮಾರಸ್ವಾಮಿ, ಎಸ್‌ಎಂಆರ್ ಪ್ರಕಾಶ್, ನವೀನ್, ಶೇಖರಪ್ಪ, ನಾಗರಾಜಪ್ಪ ಇದ್ದರು.

ಕಾರ್ಯಕ್ರಮದ ವಿವರ

ಜೂ.11ರಂದು ನಡೆಯುವ ಧಾರ್ಮಿಕ ಸಭೆ ಸಾನಿಧ್ಯವನ್ನು ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ವಹಿಸಲಿದ್ದು, ಡಾ.ಸಿದ್ದಲಿಂಗಶಿವಾಚಾರ್ಯ ಸ್ವಾಮೀಜಿ ಕಾರ್ಯಕ್ರಮ ಉದ್ಘಾಟಿಸಲಿದ್ದು, ಮೆರವಣಿಗೆ ಉದ್ಘಾಟನೆಯನ್ನು ಎಂ.ಎಲ್.ಹುಂಡಿ ಮಠಾಧ್ಯಕ್ಷ ಗೌರಿಶಂಕರಸ್ವಾಮೀಜಿ ನೆರವೇರಿಸಲಿದ್ದಾರೆ. ಮಾಡ್ರಹಳ್ಳಿ ಪಟ್ಟದ ಮಠದ ಶಾಂತಮಲ್ಲಿಕಾರ್ಜುನ ಸ್ವಾಮೀಜಿ ಶ್ರೀಗಳ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಲಿದ್ದು, ಮುಡುಕನಪುರ ಮಠಾಧ್ಯಕ್ಷ ಷಡಕ್ಷರ ದೇಶಿಕೇಂದ್ರ ಸ್ವಾಮಿಗಳು ಬಸವ ಆಶೀರ್ವಚನ ನೀಡಲಿದ್ದಾರೆ. ಮುಖ್ಯ ಅತಿಥಿಗಳಾಗಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ, ವಿಧಾನಪರಿಷತ್ ಸದಸ್ಯ ಡಾ.ಯತೀಂದ್ರ, ಮಾಜಿ ಶಾಸಕ ಎಂ.ಅಶ್ವಿನ್ ಕುಮಾರ್, ಬಿಜೆಪಿ ಮುಖಂಡ ರೇವಣ್ಣ, ಅಖಿಲ ಭಾರತ ವೀರಶೈವ ಮಹಾಸಭಾ ಜಿಲ್ಲಾಧ್ಯಕ್ಷ ಶಿವಮೂರ್ತಿ ಸೇರಿದಂತೆ ವಿವಿಧ ಗ್ರಾಮಗಳ ಮಠಾಧೀಶರು, ಹರಗುರು ಚರಮೂರ್ತಿಗಳು ಭಾಗವಹಿಸಲಿದ್ದಾರೆ.

ಪಿರಿಯಾಪಟ್ಟಣ: ಇಬ್ಬರು ಸರಗಳ್ಳರ ಬಂಧನ



ಪಿರಿಯಾಪಟ್ಟಣ, ಜೂ.7– ಪ್ರತ್ಯೇಕ ಪ್ರಕರಣಗಳಲ್ಲಿ ಲಕ್ಷಾಂತರ ರೂ. ಮೌಲ್ಯದ 2 ಚಿನ್ನದ ಮಾಂಗಲ್ಯ ಸರ ಕಳವು ಮಾಡಿದ್ದ ಇಬ್ಬರು ಆರೋಪಿಗಳನ್ನು ಬಂಧಿಸುವಲ್ಲಿ ಪಿರಿಯಾಪಟ್ಟಣ ಪೊಲೀಸರು ಯಶಸ್ವಿಯಾಗಿದ್ದಾರೆ. ಕಾರ್ಯಾಚರಣೆಯಲ್ಲಿ ಪಿರಿಯಾ ಪಟ್ಟಣ ಪೊಲೀಸ್ ಠಾಣೆ ನಿರೀಕ್ಷಕ ಜಿ.ಕೆ.ರಾಘವೇಂದ್ರ, ಎಸ್‌ಐಗಳಾದ ಕೆ.ಆಕಾಶ್, ಅಚ್ಚಮ್ಮ ಮತ್ತು ಅಪರಾಧ ವಿಭಾಗದ ಸಿಬ್ಬಂದಿಗಳಾದ ಕೆ.ಎಸ್.ಲಿಂಗರಾಜಪ್ಪ, ಸಂಜಯ್, ಈರಣ್ಣ, ಅಣ್ಣಯ್ಯ, ನವೀನ್ ಕುಮಾರ್, ನಾರಾಯಣಶೆಟ್ಟಿ ಮತ್ತು ಬೆಟ್ಟದಪುರ ಪೊಲೀಸ್ ಠಾಣೆ ಅಸ್ಲಾಂ ಪಾಷ, ಹುಣಸೂರು ಪಟ್ಟಣ ಠಾಣೆ ಇರ್ಫಾನ್ ಮತ್ತು ಬಿಳಿಕೆರೆ ಪೊಲೀಸ್ ಠಾಣೆ ಶ್ರೀನಿವಾಸ್ ಪ್ರಸಾದ್ ಭಾಗವಹಿಸಿದ್ದರು.

ತೆಂಗಿನ ಮರದಿಂದ ಬಿದ್ದು ಯುವಕ ಸಾವು

ಭೇರ್ಯ, ಜೂ.7– ತೆಂಗಿನ ಮರದಿಂದ ಕಾಲು ಜಾರಿ ಬಿದ್ದು ಯುವಕ ಸ್ಥಳದಲ್ಲೇ ಸಾವನ್ನಪ್ಪಿರುವ ಘಟನೆ ಸಮೀಪದ ಮುಂಜನಹಳ್ಳಿ ಗ್ರಾಮದಲ್ಲಿ ನಡೆದಿದೆ.



ಗ್ರಾಮದ ನಿವಾಸಿ ಕುಮಾರ್, ಮಹಾದೇವಿ ದಂಪತಿ ಪುತ್ರ ಚೇತನ್(27) ಸಾವನ್ನಪ್ಪಿದವರು. ಈತ ತನ್ನ ತಾಯಿಗೆ ಅನಾರೋಗ್ಯವಿದ್ದ ಕಾರಣ ಎಳನೀರು ತರಲು ತೋಟಕ್ಕೆ ಹೋಗಿ ತೆಂಗಿನ ಮರ ಹತ್ತಿ ಎಳನೀರು ಕೀಳುವ ಸಂದರ್ಭ ಕಾಲು ಜಾರಿ ಬಿದ್ದು ಸ್ಥಳದಲ್ಲೇ ಸಾವನ್ನಪ್ಪಿದ್ದಾನೆ ಎಂದು ಕುಟುಂಬದವರು ತಿಳಿಸಿದ್ದಾರೆ. ಇದ್ದ ಒಬ್ಬ ಮಗನನ್ನು ಕಳೆದುಕೊಂಡ ಪೋಷಕರ ಆಕ್ರಂದನ ಮುಗಿಲು ಮುಟ್ಟಿತ್ತು. ಈ ಸಂಬಂಧ ಸಾಲಿಗ್ರಾಮ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ಕೆ.ಆರ್.ನಗರ ಸಾರ್ವಜನಿಕ ಆಸ್ಪತ್ರೆಯಲ್ಲಿ ಮರಣೋತ್ತರ ಪರೀಕ್ಷೆ ನಡೆಸಿ ಶವವನ್ನು ವಾರಸುದಾರರಿಗೆ ಒಪ್ಪಿಸಲಾಯಿತು.

ಏಳೆಂಟು ವರ್ಷದ ಹಿಂದೆ ಅಳವಡಿಸಿದ

ಈ ಪಾರಂಪರಿಕ ದೀಪಗಳು ಒಂದು ದಿನವೂ ಬೆಳಗಲಿಲ್ಲ...!

ಮೈಸೂರು ಪಾಲಿಕೆಯ ನಿರರ್ಥಕ ಯೋಜನೆಗೆ ಒಂದು ಸಾಕ್ಷಿ: ಸಾರ್ವಜನಿಕರ ತೆರಿಗೆ ಹಣ ಪೋಲು



"ಮೈಸೂರಿನ ಹಳೇ ಏರಿಯಾಗಳಲ್ಲಿ ಸುಣ್ಣದಕೇರಿಯೂ ಒಂದಾಗಿದ್ದು, ಈ ಭಾಗದಲ್ಲಿ ಅಭಿವೃದ್ಧಿ ಎಂಬುದು ದೂರದ ಮಾತು. ಚುನಾಯಿತ ಪ್ರತಿನಿಧಿಗಳಂತೂ ಯಾವೊಂದು ಸಮಸ್ಯೆಗಳನ್ನು ಕೇಳುವುದಿಲ್ಲ. ಏಳೆಂಟು ವರ್ಷದ ಹಿಂದೆ ರಸ್ತೆ ಬದಿ ಪಾರಂಪರಿಕ ವಿದ್ಯುತ್ ದೀಪಗಳನ್ನು ಅಳವಡಿಸಿದರು. ಆದರೆ, ಇಲ್ಲಿಯವರೆಗೆ ಅವುಗಳನ್ನು ಬೆಳಗಿಸುವ ಪ್ರಯತ್ನವನ್ನು ಯಾರೊಬ್ಬರು ಮಾಡಿಲ್ಲ. ಪಾಲಿಕೆ ಅಧಿಕಾರಿಗಳು ಸುಣ್ಣದಕೇರಿ ಇದೆ ಎಂಬುದನ್ನೇ ಮರೆತಿದ್ದಾರೆ. ವಿದ್ಯುತ್ ಕಂಬಗಳು ಸಂಪೂರ್ಣವಾಗಿ ಹಾಳಾಗಿವೆ. ಇದೇ ರೀತಿ ಪ್ರಯೋಜನವಿಲ್ಲದ ಯೋಜನೆಗಳನ್ನು ಮಾಡುವುದರಿಂದ ಸಾರ್ವಜನಿಕರ ತೆರಿಗೆ ಹಣ ಪೋಲಾಗುತ್ತಿದೆ.

– ನಿವಾಸಿಗಳು, ಸುಣ್ಣದಕೇರಿ

ಮೈಸೂರು, ಜೂ.7(ಎಂಕೆ)– ಸಾರ್ವಜನಿಕರ ತೆರಿಗೆ ಹಣವನ್ನು ಪೋಲು ಮಾಡುವಲ್ಲಿ ಮೈಸೂರು ಮಹಾನಗರ ಪಾಲಿಕೆ ಎತ್ತಿದ ಕೈ. ಅದಕ್ಕೆ ಇದೊಂದು ತಾಜಾ ನಿದರ್ಶನ..!

ಮೈಸೂರಿನ ಸಾಂಸ್ಕೃತಿಕ ಪರಂಪರೆಯನ್ನುಳಿಸುವ ನಿಟ್ಟಿನಲ್ಲಿ ನಗರ ಪಾಲಿಕೆ ಕೈಗೊಂಡ ನಿರರ್ಥಕ, ನಿಷ್ಪ್ರಯೋಜಕ ಯೋಜನೆಗಳು ಸಾಕಷ್ಟಿವೆ. ಅವುಗಳಲ್ಲಿ ಪಾರಂಪರಿಕ ಶೈಲಿಯ ವಿದ್ಯುತ್ ಬೀದಿ ದೀಪಗಳ ಅಳವಡಿಕೆಯೂ ಒಂದಾಗಿದೆ. ಕಳೆದ ಏಳೆಂಟು ವರ್ಷದ ಹಿಂದೆ ವಾರ್ಡ್ ನಂ.50ರ ವ್ಯಾಪ್ತಿಯ ಸುಣ್ಣಕೇರಿಯಲ್ಲಿ ಅರ್ಧ ಕಿಲೋ ಮೀಟರ್‌ನಷ್ಟಿರುವ ಮುಖ್ಯರಸ್ತೆ (ಶಾಂತಲಾ ಚಿತ್ರಮಂದಿರ ವೃತ್ತದಿಂದ ಸಿದ್ದಪ್ಪ ಸ್ಕ್ವೇರ್‌ವರೆಗೆ)ಯ ಒಂದು ಬದಿಯಲ್ಲಿ ಲಕ್ಷಾಂತರ ರೂ. ಖರ್ಚು ಮಾಡಿ ಅಳವಡಿಸಿರುವ ಪಾರಂಪರಿಕ ಶೈಲಿಯ ವಿದ್ಯುತ್ ದೀಪಗಳು ಒಮ್ಮೆಯೂ ಬೆಳಗದೆ ಸಂಪೂರ್ಣವಾಗಿ ಹಾಳಾಗಿವೆ.

ಸುಣ್ಣದಕೇರಿಗೆ ಹೊಂದಿಕೊಂಡಿರುವಂತೆ 12ಕ್ಕೂ ಹೆಚ್ಚು ಪಾರಂಪರಿಕ ಶೈಲಿಯ ವಿದ್ಯುತ್ ದೀಪದ ಕಂಬಗಳನ್ನು ಅಳವಡಿಸಲಾಗಿದೆ. ಇದಕ್ಕೆ ಸುಮಾರು 6 ರಿಂದ 8 ಲಕ್ಷ ರೂ.ವರೆಗೆ ಖರ್ಚಾಗಿದ್ದು, ಪಾರಂಪರಿಕ ಶೈಲಿಯ ವಿದ್ಯುತ್ ಕಂಬಗಳನ್ನು ಪರೀಕ್ಷಾರ್ಥವೂ ಬೆಳಗಿಸದೆ ಇಡೀ ಯೋಜನೆಯನ್ನೇ ಹಾಳು ಮಾಡುವ ಮೂಲಕ ಸಾರ್ವಜನಿಕರ ತೆರಿಗೆ ಹಣವನ್ನು ಬೀದಿ ಪಾಲು ಮಾಡಲಾಗಿದೆ.

ಪಾರಂಪರಿಕ ಶೈಲಿಯ ವಿದ್ಯುತ್ ಕಂಬಗಳನ್ನು ಅಳವಡಿಸಿ, ಯುಜಿ ಕೇಬಲ್ ಮೂಲಕ ವಿದ್ಯುತ್ ಸಂಪರ್ಕವನ್ನು ನೀಡಲಾಗಿದೆ. ಆದರೆ ಇಡೀ ವಿದ್ಯುತ್ ಕಂಬಗಳೇ ನಾಶವಾಗಿದ್ದರು ಇನ್ನೂ ಬೆಳಗಿಸದಿರುವುದಕ್ಕೆ ಇರುವ ಕಾರಣವೇನು ಎಂಬುದು ನಿಗೂಢವಾಗಿದೆ. ಬಹುತೇಕ ಕಂಬಗಳಲ್ಲಿ ಬಲ್ಬ್‌ಗಳಿಲ್ಲ. ಕೆಲವು ಕಂಬಗಳು ಅರ್ಧಕ್ಕೆ ಮುರಿದು ಹೋಗಿವೆ. ಇನ್ನೂ ಕೆಲವು ಕಂಬಗಳು ಮರಗಳ ನಡುವೆ ಸಿಲುಕಿ ಮರೆಯಾಗಿವೆ. ಫುಟ್‌ಪಾತನ್ನೇ ಆವರಿಸಿಕೊಂಡಿರುವ ಗ್ಯಾರೇಜ್‌ಗಳು, ಇನ್ನಿತರೆ ವ್ಯಾಪಾರ ಮಳಿಗೆಗಳಿಂದಾಗಿ ಪಾರಂಪರಿಕ ಶೈಲಿಯ ಕಂಬಗಳು ನಾಮಾವಶೇಷವಾಗಿವೆ. ಇದಕ್ಕೆ ನಗರ ಪಾಲಿಕೆಯ ನಿರ್ಲಕ್ಷ್ಯವೇ ಕಾರಣವೆಂದು ಇಲ್ಲಿನ ಜನ ದೂರಿದ್ದಾರೆ.

ಪ್ರಯೋಜನವಿಲ್ಲ: ಸುಣ್ಣದಕೇರಿ ಮುಖ್ಯ ರಸ್ತೆಯ ಬದಿಯಲ್ಲಿ ಪಾರಂಪರಿಕ ಶೈಲಿಯ ವಿದ್ಯುತ್ ಕಂಬಗಳನ್ನು ಅಳವಡಿಸಿ ಸುಮಾರು ಏಳೆಂಟು ವರ್ಷಗಳೇ ಕಳೆದಿವೆ. ಒಂದೇ ಒಂದು ದಿನ ಈ ದೀಪಗಳು ಬೆಳಗಲಿಲ್ಲ. ವಿದ್ಯುತ್ ದೀಪಗಳ ಪಕ್ಕದಲ್ಲಿಯೇ ಯುಜಿ ಕೇಬಲ್ ಸಂಪರ್ಕಕ್ಕೆ ಸಾಕ್ಷಿಯಾಗಿ ನಿಯಂತ್ರಣ ಬಾಕ್ಸ್‌ಗಳನ್ನು ಅಳವಡಿಸಿದ್ದಾರೆ. ಆದರೆ ಇಡೀ ಯೋಜನೆಯೇ ಹಾಳಾಗಿದ್ದು, ಪಾಲಿಕೆ ನಿರರ್ಥಕ, ನಿಷ್ಪ್ರಯೋಜಕ ಯೋಜನೆಗಳಲ್ಲಿ ಇದೂ ಒಂದಾಗಿದೆ ಎಂದು ಇಲ್ಲಿನ ಜನ ಬೇಸರ ವ್ಯಕ್ತಪಡಿಸಿದ್ದಾರೆ.

ವಿವಿಧ ಹುದ್ದೆಗಳಿಗೆ ಅರ್ಜಿ ಆಹ್ವಾನ

ಮೈಸೂರು: 25ನೇ ಸಾಲಿಗೆ ಸಾರ್ವಜನಿಕ ಶಿಕ್ಷಣ ಇಲಾಖೆ ಸಮಗ್ರ ಶಿಕ್ಷಣ ಕಾರ್ಯಕ್ರಮದಲ್ಲಿ ಸಮನ್ವಯ ಶಿಕ್ಷಣ ಚಟುವಟಿಕೆಯ ಜಿಲ್ಲಾ ವ್ಯಾಪ್ತಿಯಲ್ಲಿ ಬ್ಲಾಕ್ ಹಂತದಲ್ಲಿ ಖಾಲಿ ಇರುವ ಬಿಐಇಆರ್‌ಟಿ ಪ್ರಾಥಮಿಕ ಹಾಗೂ ಪ್ರೌಢಶಾಲಾ ವಿಭಾಗ ಹುದ್ದೆಗಳಿಗೆ ನೇರಗುತ್ತಿಗೆ ಮೂಲಕ ತಾತ್ಕಾಲಿಕವಾಗಿ ಆಯ್ಕೆ ಮಾಡಿಕೊಳ್ಳಲು ಅರ್ಹ ವಿದ್ಯಾರ್ಹತೆಯುಳ್ಳ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಿದೆ. ವಿಶೇಷ ಶಿಕ್ಷಣದಲ್ಲಿ ವಿಶೇಷ ಡಿ.ಇಡಿ ಹಾಗೂ ವಿಶೇಷ ಬಿ.ಇಡಿ ವಿದ್ಯಾರ್ಹತೆ ಹೊಂದಿ ಆರ್.ಸಿ.ಐ ನೋಂದಣಿಯಾಗಿರುವ ಅಭ್ಯರ್ಥಿಗಳು ವಿದ್ಯಾರ್ಹತೆಯ ಎಲ್ಲಾ ಅಂಕಪಟ್ಟಿಗಳು ಮತ್ತು ಪ್ರಮಾಣ ಪತ್ರಗಳು ಮತ್ತು ಆರ್.ಸಿ.ಐ ನೋಂದಣಿ ಪ್ರಮಾಣ ಪತ್ರದೊಂದಿಗೆ ಸ್ವ-ವಿವರವುಳ್ಳ ಮಾಹಿತಿಯನ್ನು ಜೂ.14ರ ಸಂಜೆ 5 ಗಂಟೆಯೊಳಗೆ ಅಂಚೆ ಅಥವಾ ಮುದ್ದಾಂ ಮೂಲಕ ಡಿ.ಸುಬ್ಬಯ್ಯ ರಸ್ತೆಯಲ್ಲಿರುವ ಜಂಟಿ ನಿರ್ದೇಶಕರ ಕಚೇರಿ ಆವರಣದ ಸಮಗ್ರ ಶಿಕ್ಷಣ ಕರ್ನಾಟಕ, ಶಾಲಾ ಶಿಕ್ಷಣ ಇಲಾಖೆ ಉಪನಿರ್ದೇಶಕರು(ಆಡಳಿತ) ಹಾಗೂ ಜಿಲ್ಲಾ ಯೋಜನಾ ಸಮನ್ವಯಾಧಿಕಾರಿಗಳ ಕಾರ್ಯಾಲಯಕ್ಕೆ ತಲುಪಿಸಬೇಕು. ಹೆಚ್ಚಿನ ಮಾಹಿತಿಗೆ ದೂ.ಸಂ: 0821-2496686, 9481066723, 9448999404 ಸಂಪರ್ಕಿಸಿ

ಮೈಸೂರು ಮಿತ್ರ 45
ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.

-ಜಾಹೀರಾತು ವ್ಯವಸ್ಥಾಪಕರು

ಸಹಕಾರ ಇಲಾಖೆ

ಸಹಕಾರ ಸಂಘಗಳ ಉಪ ನಿಬಂಧಕರು (ನಿ.441), ಸೌಹಾರ್ದ ಸಹಕಾರಿಗಳ ದಾವಾ ಪಂಚಾಯ್ತಿ ನ್ಯಾಯಾಲಯ, ಸಂಚಾರಿ ಪೀಠ, 1119/ಬಿ, ಕಣಬರ್ಗಿ ಇಂಡಸ್ಟ್ರಿಯಲ್ ಏರಿಯಾ, ರೂರಲ್ ಆಯುರ್ವೇದಿಕ ಕಾಲೇಜು ಹತ್ತಿರ, ಆಟೋ ನಗರ, ಬೆಳಗಾವಿ-590015

ವಾದಿ: ವ್ಯವಸ್ಥಾಪಕ ನಿರ್ದೇಶಕರು, ಸೈಂಟ್ ಮಿಲಾಗ್ರಿಸ್ ಕ್ರೆಡಿಟ್ ಸೌಹಾರ್ದ ಕೋ-ಅಪರೇಟಿವ್ ಸೊಸೈಟಿ ಲಿಮಿಟೆಡ್.ಕಾರವಾರ ಕೇಶವ ಶೇಟ ರಸ್ತೆ, 1ನೇ ಕ್ರಾಸ್, ಸೋನಾರವಾಡ, ಕಾರವಾರ-581 304 (ಉ.ಕ.)

ವಿರುದ್ಧ

ಪ್ರತಿವಾದಿಗಳು:

ವ್ಯಾಜ್ಯ ಸಂಖ್ಯೆ :ಜೆಆರ್‌ಡಿ/ಕ.ರಾ.ಸೌ.ಸಂ.ಸ.ನಿ./1115/2022-23.

1. ಶ್ರೀ. ಶ್ರೀನಿವಾಸ ಜಿ. ಕೆ. ಕುಮಾರ ಜಿ ವಿ.

ಸಾ॥ #1114, 11ನೇ ಕ್ರಾಸ್, 9ನೇ ಮೇನ್, 3ನೇ ಹಂತ ಪೋ॥ ವಿಜಯ 2ನೇ ಹಂತ, ತಾ॥ ಮೈಸೂರು-570017

2. ಶ್ರೀ. ಲೋಹಿತ್ ಕುಮಾರ್ ಬಿ. ಭಕ್ತವತ್ಸಲ.

ಸಾ॥ #3206, ಜಿ, ಬ್ಲಾಕ್, 6ನೇ ಕ್ರಾಸ್, 3ನೇ ಹಂತ, ಕನಕದಾಸ ನಗರ, ಪೋ॥ ದಟ್ಟಗಳ್ಳಿ, ತಾ॥ ಮೈಸೂರು-570023

ಪ್ರತಿವಾದಿಗಳಿಗೆ ಪತ್ರಿಕಾ ಪ್ರಕಟಣೆ ಮೂಲಕ ನೋಟಿಸ್

ಈ ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ನಿಮಗೆ ತಿಳಿಯಪಡಿಸುವುದೇನೆಂದರೆ ಈ ಮೇಲ್ಕಂಡ ಪ್ರತಿವಾದಿಗಳ ದಾವಾ ಸಂಖ್ಯೆ: ಡಿಆರ್‌ಡಿ/ಕ.ರಾ.ಸೌ.ಸಂ.ಸ.ನಿ./1115/2022-23 ರಂತೆ ಸಹಕಾರಿಗಳ ಜಂಟಿ ನಿಬಂಧಕರು, ಸೌಹಾರ್ದ ಸಹಕಾರಿಗಳ ದಾವಾ ಪಂಚಾಯ್ತಿ ನ್ಯಾಯಾಲಯ (ನಿ.441) ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ.,ಬೆಳಗಾವಿ ಪ್ರಾಂತೀಯ ಕಛೇರಿ, 1119/ಬಿ, ಕಣಬರ್ಗಿ ಇಂಡಸ್ಟ್ರಿಯಲ್ ಏರಿಯಾ, ರೂರಲ್ ಆಯುರ್ವೇದಿಕ್ ಕಾಲೇಜ ಹತ್ತಿರ, ಆಟೋ ನಗರ, ಬೆಳಗಾವಿ-590015 ನ್ಯಾಯಾಲಯದಲ್ಲಿ ಪರಿಹಾರ ಕರಾರು ಅಡಿಯಲ್ಲಿ ದಾವೆಯನ್ನು ಸಲ್ಲಿಸಿದ್ದು, ನೀವು ಪ್ರತಿವಾದಿಯಾಗಿರುತ್ತೀರಿ. ಆದುದರಿಂದ ಈ ಮೂಲಕ ನಿಮಗೆ ತಿಳಿಯಪಡಿಸುವುದೇನೆಂದರೆ ಈ ಮೇಲ್ಕಂಡ ನ್ಯಾಯಾಲಯದ ಮುಂದೆ ದಿ: 21.06.2024 ರಂದು ಬೆಳಗ್ಗೆ 11:00 ಗಂಟೆಗೆ ಸರಿಯಾಗಿ ತಾವಾಗಲಿ, ತಮ್ಮಿಂದ ನೇಮಕಗೊಂಡ ವಕೀಲರ ಮುಖಾಂತರವಾಗಲಿ ಹಾಜರಾಗಲು ಈ ಮೂಲಕ ತಿಳಿಯಪಡಿಸುತ್ತೇವೆ. ತಪ್ಪಿದ್ದಲ್ಲಿ ನಿಮ್ಮ ಗೈರುಹಾಜರಿಯಲ್ಲಿ ಪ್ರಕರಣವನ್ನು ಏಕಪಕ್ಷೀಯವಾಗಿ ಇತ್ಯರ್ಥಪಡಿಸಲಾಗುವುದು.

ಸದರಿ ಪ್ರಕಟಣೆಯನ್ನು ದಿ:03/06/2024 ರಂದು ನನ್ನ ಸಹಿ ಮತ್ತು ನ್ಯಾಯಾಲಯದ ಮೊಹರಿನೊಂದಿಗೆ ನೀಡಲಾಗಿದೆ.

ಸಹಿ/–ಸಹಕಾರಿಗಳ ಜಂಟಿ ನಿಬಂಧಕರು(ನಿ.441)(ಪ್ರ)
ದಾವಾ ಪಂಚಾಯ್ತಿ ನ್ಯಾಯಾಲಯ ಕ.ರಾ.ಸೌ.ಸಂ.ಸ.ನಿ. ಬೆಳಗಾವಿ ಸಂಚಾರಿ ಪೀಠ, ಬೆಳಗಾವಿ.

ಗುತ್ತಿಗೆದಾರರ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ ಲಿ., ಮೈಸೂರು.

ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ ಕಛೇರಿ ಆವರಣ, ಜೆ.ಎಲ್.ಬಿ. ರಸ್ತೆ, ಮೈಸೂರು.
ದೂರವಾಣಿ/ಕೇಂದ್ರ ಕಛೇರಿ : 0821-2424246 | ದೂರವಾಣಿ/ಶಾಖಾ ಕಛೇರಿ : 08227-260443

ಮಾನ್ಯ ಗುತ್ತಿಗೆದಾರ ಸದಸ್ಯರುಗಳ ಗಮನಕ್ಕೆ

ವಿಷಯ : 2024 ಮಾರ್ಚ್ ಹಾಗೂ ಏಪ್ರಿಲ್ ತಿಂಗಳುಗಳಲ್ಲಿ ನಡೆದ ಎಸ್.ಎಸ್.ಎಲ್.ಸಿ. ಹಾಗೂ ದ್ವಿತೀಯ ಪಿ.ಯು.ಸಿ. ಪರೀಕ್ಷೆಗಳಲ್ಲಿ ತೇರ್ಗಡೆಯಾಗಿ ಅತಿ ಹೆಚ್ಚು ಅಂಕ ಪಡೆದಿರುವ ಗುತ್ತಿಗೆದಾರ ಸದಸ್ಯರುಗಳ ಮಕ್ಕಳುಗಳಿಗೆ ಮಾತ್ರ ತಲಾ 15 ಜನ ಗುತ್ತಿಗೆದಾರರ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ ಲಿ., ಮೈಸೂರು. ಹಾಗೂ ಟಿ. ನರಸೀಪುರ ಶಾಖೆಯ ಮಕ್ಕಳಿಗೆ ಪ್ರತಿಭಾ ಪುರಸ್ಕಾರ ನೀಡುವ ಬಗ್ಗೆ.

ಉಲ್ಲೇಖ : ದಿನಾಂಕ 03.05.2024 ರಂದು ನಡೆದ ಸಂಘದ ಆಡಳಿತ ಮಂಡಳಿ ಸಭೆಯ ತೀರ್ಮಾನ.

ಮೇಲಿನ ವಿಷಯದಲ್ಲಿ ತಿಳಿಸಿರುವಂತೆ ಪ್ರತಿಭಾ ಪುರಸ್ಕಾರವನ್ನು ಗುತ್ತಿಗೆದಾರರ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ ಲಿ., ಕೇಂದ್ರ ಕಛೇರಿ, ಮೈಸೂರು. ಹಾಗೂ ಶಾಖಾ ಕಛೇರಿ, ಟಿ. ನರಸೀಪುರದಲ್ಲಿ ಸದಸ್ಯರಾಗಿರುವ ಗುತ್ತಿಗೆದಾರರ ಮಕ್ಕಳುಗಳಿಗೆ ಮಾತ್ರ ಪ್ರತಿಭಾ ಪುರಸ್ಕಾರ ನೀಡಲು ಆಡಳಿತ ಮಂಡಳಿಯು ತೀರ್ಮಾನಿಸಿರುವುದನ್ನು ತಮಗೆ ತಿಳಿಸಲು ಹರ್ಷಿಸುತ್ತೇವೆ.

ಆದ್ದರಿಂದ ಎಸ್.ಎಸ್.ಎಲ್.ಸಿ. ಹಾಗೂ ದ್ವಿತೀಯ ಪಿ.ಯು.ಸಿ. ಪರೀಕ್ಷೆಗಳಲ್ಲಿ ಅತೀ ಹೆಚ್ಚು ಅಂಕ ಪಡೆದು ತೇರ್ಗಡೆಯಾಗಿರುವ ಮಕ್ಕಳ ದೃಢೀಕೃತ ಅಂಕಪಟ್ಟಿ ನಕಲು, ಶಾಲೆಯ ವಿಳಾಸ, ಮಕ್ಕಳ ಇತ್ತೀಚಿನ ಎರಡು ಪಾಸ್‌ಪೋರ್ಟ್ ಅಳತೆಯ ಭಾವಚಿತ್ರ **(PHOTO)** ಮತ್ತು ಗುತ್ತಿಗೆದಾರರ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿಯಲ್ಲಿ ಸದಸ್ಯತ್ವ ಪಡೆದಿರುವ ಬಗ್ಗೆ ಗುರುತಿನ ಚೀಟಿಯ ಜೆರಾಕ್ಸ್ ಪ್ರತಿಯನ್ನು ದಿನಾಂಕ 29.06.2024 ರ ಶನಿವಾರ ಸಾಯಂಕಾಲ 5.30 ಗಂಟೆಯೊಳಗೆ ಸೊಸೈಟಿಗೆ ಅಂಚೆ ಮೂಲಕವಾಗಲಿ ಅಥವಾ ಖುದ್ದಾಗಿ ತಲುಪಿಸಲು ಈ ಮೂಲಕ ಕೋರಲಾಗಿದೆ.

ವಂದನೆಗಳೊಂದಿಗೆ, ಸಹಿ/– (ಮಹಾಲಿಂಗಂ
ಅಧ್ಯಕ್ಷರು

ಸೂಚನೆ : ಮಾನ್ಯ ಸದಸ್ಯರುಗಳ ಮೊಬೈಲ್ ದೂರವಾಣಿ ಸಂಖ್ಯೆಗಳು ಬದಲಾವಣೆಯಾಗಿದ್ದಲ್ಲಿ ತಮ್ಮ ಚಾಲ್ತಿ / ಉಳಿತಾಯ ಖಾತೆಗಳಿಗೆ ನಮೂದಿಸಿಕೊಳ್ಳತಕ್ಕದ್ದು.

ನಿಧನ



ಶ್ರೀಮತಿ ಅನಸೂಯ ಬಾಯಿ

ಹಿರಿಯ ಸ್ವಾತಂತ್ರ್ಯ ಹೋರಾಟಗಾರರು ಹಾಗೂ ಅಗರಂ ರಂಗಯ್ಯನವರ "ಸಾಧ್ವಿ" ಪತ್ರಿಕೆಯಲ್ಲಿ ವೃತ್ತಿ ನಡೆಸುತ್ತಿದ್ದು ಬದರಿ ಕ್ಷೇತ್ರದಲ್ಲಿ ನಿಧನರಾದ ಶ್ರೀ ಜಿ.ಸುಬ್ಬರಾವ್ ಉಪಾಧ್ಯರವರ ಧರ್ಮಪತ್ನಿ ಶ್ರೀಮತಿ ಅನಸೂಯ ಬಾಯಿರವರು(೯೫ವರ್ಷ) ತಮ್ಮ ಸ್ವಗೃಹದಲ್ಲಿ ದೈವಾಧೀನರಾದರೆಂದು ತಿಳಿಸಲು ವಿಷಾದಿಸುತ್ತೇವೆ.

ದುಃಖತಪ್ತರು: ಮಕ್ಕಳು ಹಾಗೂ ಬಂಧುಗಳು

ಪುರಸಭಾ ಕಾರ್ಯಾಲಯ, ತಿ.ನರಸೀಪುರ

ಮೈಸೂರು ಜಿಲ್ಲೆ – 571124. ದೂರವಾಣಿ: 08227–261232
ವೆಬ್‌ಸೈಟ್:www.tnarasipuratown.gov.in ಇಮೇಲ್:tnarasipura@ymail.com / itstaff_ulb_tnarasipura@yahoo.com

ನಂ.ಪುಸ:ತಿನಪುರ/ಕಿಅ/ಟೆಂಡರ್/SBM-1/2024-25 ದಿನಾಂಕ:07.06.2024

ಟೆಂಡರ್ ಪ್ರಕಟಣೆ

ತಿ.ನರಸೀಪುರ ಪುರಸಭಾ ವ್ಯಾಪ್ತಿಯಲ್ಲಿ ಸ್ವಚ್ಛ ಭಾರತ್ ಮಿಷನ್–1 ಮತ್ತು 15ನೇ ಹಣಕಾಸು ಯೋಜನೆಯಡಿ ಈ ಕೆಳಕಂಡ ಕಾಮಗಾರಿಗಳನ್ನು ನಿರ್ವಹಿಸಲು ಲೋಕೋಪಯೋಗಿ ಇಲಾಖೆಯಲ್ಲಿ ಚಾಲ್ತಿ ಸಾಲಿಗೆ ನೋಂದಾಯಿತ 4ನೇ ದರ್ಜೆ ಹಾಗೂ ಮೇಲ್ಪಟ್ಟ ಅರ್ಹ ಸಿವಿಲ್ ಗುತ್ತಿಗೆದಾರರಿಂದ KW-1 ನಿಯಮಗಳ ಅನ್ವಯ ಹಾಗೂ 1999 ಹಾಗೂ 2000ರ ಪಾರದರ್ಶಕಕಾಯ್ದೆಗೆ ಒಳಪಟ್ಟು ಪ್ರತ್ಯೇಕವಾಗಿ ಟೆಂಡರನ್ನು ಆಹ್ವಾನಿಸಲಾಗಿದೆ. ಆಸಕ್ತಿಯುಳ್ಳ ಗುತ್ತಿಗೆದಾರರರು ಕಾಮಗಾರಿಗಳನ್ನು ಕೆ.ಪಿ.ಪಿ ಪೋರ್ಟಲ್ **http://kppp.karnataka.gov.in**ನಿಂದ ಟೆಂಡರ್ ಷರತ್ತು ಹಾಗೂ ದಾಸ್ತಾವೇಜ್‌ನ್ನು ಡೌನ್‌ಲೋಡ್ ಮಾಡಿಕೊಂಡು ಆನ್‌ಲೈನ್ ಮುಖಾಂತರ ಟೆಂಡರ್‌ಗಳನ್ನು ಸಲ್ಲಿಸಬಹುದು.

1. ಟೆಂಡರ್ ಸಲ್ಲಿಸಲು ಕಡೆಯ **ದಿನಾಂಕ:17/06/2024 ಸಂಜೆ 5.30 ಗಂಟೆವರೆಗೆ. 2.** ಟೆಂಡರ್ ತೆರೆಯುವ **ದಿನಾಂಕ: 19–06–2024 ಬೆಳಿಗ್ಗೆ 11.30 ಗಂಟೆಗೆ** ಅಥವಾ ಮುಂದೆ ಸೂಚಿಸುವ ದಿನಾಂಕದಂದುತೆರೆಯಲಾಗುವುದು.

ಕ್ರ.ಸಂ.	ವಿವರ	ಕಾಮಗಾರಿ ಮೊತ್ತ (ರೂ. ಲಕ್ಷಗಳಲ್ಲಿ)	ಇ.ಎಂ.ಡಿ ಮೊತ್ತ(ರೂ.ಗಳಲ್ಲಿ)
1.	DMA/2024-25/OW/WORK_INDENT18495	5.00	12500
2.	DMA/2024-25/OW/WORK_INDENT18494	5.00	12500

ಸೂಚನೆ: 1.ಕಾರಣಾಂತರಗಳಿಂದ ಮೇಲೆ ತಿಳಿಸಿದ ಟೆಂಡರ್ ದಿನಾಂಕಗಳು ಮತ್ತು ಇತರೆ ಬದಲಾವಣೆಗಳಿದ್ದಲ್ಲಿ ಹಾಗೂ ಹೆಚ್ಚಿನ ವಿವರಗಳಿಗೆ ಗುತ್ತಿಗೆದಾರರು **http://kppp.karnataka.gov.in** ಪೋರ್ಟಲ್‌ನಲ್ಲಿ ನೋಡಿಕೊಳ್ಳುವುದು. **2.** GST will be added to the contract Amount

ಸಹಿ/– ಆಡಳಿತಾಧಿಕಾರಿ, ಪುರಸಭೆ, ತಿ.ನರಸೀಪುರ
ಸಹಿ/– ಮುಖ್ಯಾಧಿಕಾರಿ, ಪುರಸಭೆ, ತಿ.ನರಸೀಪುರ

DIPR/MYS/KAVITA/47/24-25